ಗೌರಿ

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

12 ಅಕ್ಟೋಬರ್ 2016 ಪುಟ 20 ರೂ. 15/-



ಆತ್ಮವಂಚನೆಯ ಸ್ವಚ್ಛ ಭಾರತ

ಚಲೋ ಉಡುಪಿ

ವಿಶೇಷಾಂಕ





ಗೋ ಹೆಸರಲ್ಲಿ ಸರ್ಕಾರಕ್ಕೆ ಮೋಸ



ಸಂಘ ಸಹವಾಸ ಅನುಪಮಾಗೆ ವನವಾಸ

ತಿಪಟೂರು

ಶಾಸಕ ಷಡಕ್ಷರಿಯ ಷಡ್ಯಂತ್ರಗಳು

ಮೈಸೂರು


ಚೆಡ್ಡಿ ಪ್ರತಾಪನಿಗೆ ಜನರ ತಪರಾಕಿ


ಹೊಸದುರ್ಗ

ಗೋವಿಂದಪ್ಪನ ಹಟ್ಟಿಗೆ ಗೂಳಿಯಾಗಲಿದ್ದಾನಾ ಯಡ್ಡಿ ಪುತ್ರ?


ದಲಿತ-ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ
ಆಹಾರ ನಮ್ಮ ಆಯ್ಕೆ ಭೂಮಿ ನಮ್ಮ ಹಕ್ಕು
ಚಲೋ
ಉಡುಪಿ
ಸ್ವಾಭಿಮಾನಿ ಸಂಘರ್ಷ ಜಾಥಾ
04 ರಿಂದ 09 ಅಕ್ಟೋಬರ್ 2016
ದಬ್ಬಾಳಿಕೆಗಳ ವಿರುದ್ಧ ಯುದ್ಧಕಹಳೆ

ಚಲೋ ಉಡುಪಿ, ದನದ ಮಾಂಸ ಮತ್ತು ಮೋದಿಯ ಸುಳ್ಳುಗಳು






• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ದ ಎರಡು ವಾರಗಳಿಂದ ರಾಜ್ಯದಾದ್ಯಂತ ...ಸಂಚಲನ ಮೂಡಿದೆ. ಎಲ್ಲಾ ಕಡೆ ದಲಿತ ...ಗಳು, ಪ್ರಗತಿಪರರು, ಎಡಪಂಥೀಯರು, ...ು, ಬುದ್ಧಿಜೀವಿಗಳು, ಪ್ರಾಧ್ಯಾಪಕರು, ...ು, ಜಾತ್ಯತೀತರು ಕೈಜೋಡಿಸಿದ್ದಾರೆ, ...ದಿ ಚರ್ಚಿಸುತ್ತಿದ್ದಾರೆ, ಕೆಲಸ ಮಾಡುತ್ತಿದ್ದಾರೆ. ... ಮೂಲ ಪ್ರೇರಣೆ ಆಗಿರುವುದು 'ಚಲೋ ...' ಎಂಬ ಸ್ವಾಭಿಮಾನಿ ಸಂಘರ್ಷ ಜಾಥಾ. ಈ ...ನ್ನು ಈ ಜಾಥಾ ಕುರಿತ ವಿಶೇಷಾಂಕವಾಗಿ ...ಲಾಗಿದೆ.

...ಲ್ಲರಿಗೂ ಗೊತ್ತಿರುವಂತೆ ಜನವರಿಯಲ್ಲಿ ...ದ ರೋಹಿತ್ ವೇಮುಲನ ಸಾಂಸ್ಥಿಕ ಕೊಲೆ ...ಇಡೀ ದೇಶವನ್ನೇ ನಿದ್ರಾವಸ್ಥೆಯಿಂದ ...ಸಿತೋ, ಹಾಗೆಯೇ ಜುಲೈನಲ್ಲಿ ನಡೆದ ... ಪ್ರಕರಣ ದೇಶದ ಪ್ರಜ್ಞಾವಂತರೆಲ್ಲ ...ಾಗುವಂತೆ ಮಾಡಿತು. ಇವೆರಡೂ ...ಗಳು ಗುಜರಾತಿನಲ್ಲಿ ವಿನೂತನ ...ನೆಗಳಿಗೆ ಕಾರಣವಾಯಿತು. ಒಂದೆಡೆ ಆ ... ದಲಿತರು ಸತ್ತ ದನಗಳ ಶವಗಳನ್ನು ಸರ್ಕಾರಿ ...ಗಳ ಮುಂದೆ ಎಸೆಯುವ ಮೂಲಕ ಇನ್ನು ...ೆ ತಾವು ಚಿಡ್ಡಿಗಳ 'ಗೋಮಾತೆ'ಯ ...ನ್ನು ಮುಟ್ಟುವುದಿಲ್ಲ ಎಂದು ಸಾರಿದರೆ ...ಂದೆಡೆ ಜಿಗ್ನೇಶ್ ಮೇವಾನಿ ತರಹದ ಯುವ ...ಾಟಗಾರರ ನೇತೃತ್ವದಲ್ಲಿ 'ಚಲೋ ಉನಾ' ... ಅಭೂತಪೂರ್ವ ಯಾತ್ರೆಯೂ ನಡೆಯಿತು. ...ಘಪರಿವಾರದಿಂದ ಮತ್ತು ಮೋದಿಯ



...ಿಂದ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ, ನಮ್ಮ ರಾಜ್ಯದ ...ವಾರು ಊರುಕೇರಿಗಳಲ್ಲೂ ದಲಿತರ ಮತ್ತು ...ಮುಳಿದವರ ಮೇಲೆ ದಾಳಿಗಳಾಗುತ್ತಿದ್ದುದ್ದನ್ನೂ ...ಾಟಕದ ಪ್ರಜ್ಞಾವಂತರು ಗಮನಿಸುತ್ತಿದ್ದರು. ...ದಲ್ಲೂ ಯಾವ ಪಕ್ಷ ಅಥವಾ ಸಂಘಟನೆಗಳಿಗೆ ...ರದ ಹಲವು ಯುವ ಹೋರಾಟಗಾರರು ...ಸೇರಿಗೂಡಿ 'ಉನಾ ಮಾದರಿ ಹೋರಾಟವನ್ನು ...ಲ್ಲೂ ಯಾಕೆ ಮಾಡಬಾರದು' ಎಂದು ಚಿಂತಿಸಿದರು. ... ಯುವಕರು ಈಗ ಸಾಮಾಜಿಕ ಜಾಲತಾಣಗಳಲ್ಲಿ ...ಯರಾಗಿರುವವರು. ಕಳೆದ ಆಗಸ್ಟ್ ತಿಂಗಳ ...ಂದು ಅವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ...ದು ಸಭೆ ಕರೆದರು. ಆ ಸಭೆಗೆ ವಿವಿಧ ಸಂಘಟನೆ, ...ಮುದಾಯಗಳ ಮತ್ತು ಹೋರಾಟದ ಹಿನ್ನೆಲೆ ...ಂದಿರುವ ಸುಮಾರು 300 ಜನ ಹಾಜರಾದರು. ...ಲ್ಲಿ ಶುರುವಾಗಿದ್ದೆ ಈ 'ಚಲೋ ಉಡುಪಿ' ಜಾಥಾದ ...ಲು.

ಅವತ್ತಿನಿಂದ ಭಾಸ್ಕರ್ ಪ್ರಸಾದ್, ಹರಿರಾಮ್, ...ಶ್, ಹುಲಿಕುಂಟೆ ಮೂರ್ತಿ, ಗೌರಿ, ದಯಾನಂದ, ...ರ್ ಪ್ರಗತ್ ಮತ್ತು ಇತರ ಯುವಕರು ತಮ್ಮ ...ಲುಗಳಿಗೆ ಚಕ್ರ ಕಟ್ಟಿಕೊಂಡಿರುವವರಂತೆ ರಾಜ್ಯವನ್ನು ...ುತ್ತಾ ಎಲ್ಲೆಡೆ ಜನರನ್ನು ಸಂಘಟಿಸುತ್ತಿದ್ದಾರೆ. ಅವರ ...ಮದ ಫಲವಾಗಿ ಅಕ್ಟೋಬರ್ 9 ರಂದು ...ಡುಪಿಯಲ್ಲಿ ಬೃಹತ್ ಸಾರ್ವಜನಿಕ ಸಭೆ ...ೊಳ್ಳಲಿದೆ. ಈ ಸಂಚಿಕೆಯಲ್ಲಿನ ಲೇಖನಗಳು ಮತ್ತು ...ಗಳೊಂದಿಗೆ ಪ್ರಕಟಿಸಿರುವ 'ಪೋಸ್ಟರ್'ಗಳು ಈ ...ಭಾವಂತ ಯುವ ಹೋರಾಟಗಾರರ ಛಲ, ...ಶೀಲತೆ ಮತ್ತು ಜನಪರತೆಯನ್ನು ...ಬಿಂಬಿಸುತ್ತವೆ.

ನರಹಂತಕ ನರೇಂದ್ರ ಮೋದಿ ಪ್ರಧಾನಿ ಆದ ದಿನದಿಂದ ದೇಶದೆಲ್ಲೆಡೆ 'ಗೋ ಗೂಂಡಾಗಿರಿ' ಹೆಚ್ಚಾಗಿದೆ. ಅದು ಉತ್ತರ ಪ್ರದೇಶದ ದಾದ್ರಿಯಲ್ಲಿ ಅಕ್ಲಾಕ್ ಅವರ ಕೊಲೆಗೆ ಕಾರಣವಾದಂತೆ ನಮ್ಮ ಉಡುಪಿ ಜಿಲ್ಲೆಯಲ್ಲಿ ಪ್ರವೀಣ್ ಪೂಜಾರಿಯ ಪ್ರಾಣವನ್ನೂ ಬಲಿತೆಗೆದುಕೊಂಡಿದೆ. ಹಾಗೆಯೇ ಉನಾದಲ್ಲಿ ಗೋ ಗೂಂಡಾಗಳು ದಲಿತ ಯುವಕರನ್ನು ಬಡಿದಿದ್ದರೆ, ಅದೇ ರೀತಿ ನಮ್ಮ ಜೈಪುರದಲ್ಲೂ ದಲಿತ ಕುಟುಂಬದ ಮೇಲೆ ಪೈಶಾಚಿಕ ದಾಳಿಗೆ ಪ್ರೇರಣೆಯಾಗಿದೆ.


ಈ ಕೊಲೆ ಮತ್ತು ದಾಳಿಗಳಿಗೆಲ್ಲ ಮೂಲಕಾರಣ ಸ್ವತಃ ಮೋದಿಯೇ. 2014ರ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮೋದಿ ಹೋಗಿಬಂದಲ್ಲೆಲ್ಲಾ ಗೋ ರಕ್ಷಣೆ ಕುರಿತು ಬಾಯಿ ಬಡಿದುಕೊಂಡಿದ್ದ. ಸುಳ್ಳುಗಳ ಸರಮಾಲೆಯನ್ನೂ ಹರಿಸಿದ್ದ. ಆಗಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ದನದ ಮಾಂಸದ ರಫ್ತನ್ನು ಪ್ರೋತ್ಸಾಹಿಸುತ್ತಿದ್ದರಿಂದ ದೇಶದ ಗೋವುಗಳು ನಾಶವಾಗುತ್ತಿವೆ, ಕ್ಷೀರ ಅಭಾವ ಎದುರಾಗುತ್ತಿದೆ, ಎಲ್ಲ ಹಿಂದೂಗಳು ಗೋವುಗಳನ್ನು ರಕ್ಷಿಸಬೇಕು, 'ಮಾತೆ'ಯಾದ ಗೋವುಗಳನ್ನು ಪೂಜಿಸಬೇಕು ಎಂದೆಲ್ಲ ಬೊಗಳೆ ಬಿಡುತ್ತಿದ್ದ.

ಉದಾಹರಣೆಗೆ ಬಿಹಾರದಲ್ಲಿ ಭಾಷಣ ಮಾಡುತ್ತಾ ಮೋದಿ "ಈ ದೇಶಕ್ಕೆ ಬೇಕಿರುವುದು ಹಸಿರು ಕ್ರಾಂತಿ. ಆದರೆ ಕೇಂದ್ರ ಸರ್ಕಾರಕ್ಕೆ ಪಿಂಕ್ ಕ್ರಾಂತಿ ಬೇಕಾಗಿದೆ. ಪಿಂಕ್ ಕ್ರಾಂತಿ ಎಂದರೆ ಏನು ಗೊತ್ತೆ? ಪ್ರಾಣಿಗಳನ್ನು ಕೊಂದಾಗ ಅವುಗಳ ಮಾಂಸದಿಂದ ಹೊರಬರುವ ರಕ್ತದ ಬಣ್ಣ ಪಿಂಕ್ (ನಸುಗೆಂಪು). ಪ್ರಾಣಿಗಳನ್ನು ಕೊಂದು ಬಾಂಗ್ಲಾ ದೇಶಕ್ಕೆ ಸಾಗಿಸಲಾಗುತ್ತಿದೆ. ಅದನ್ನು ಮಾಡುತ್ತಿರುವವರಿಗೆ ಕೇಂದ್ರ ಸರ್ಕಾರ ಸಬ್ಸಿಡಿ ಸಹ ಕೊಡುತ್ತಿದೆ. ಆದರೆ ಜಾನುವಾರುಗಳನ್ನು ಸಾಕುವ ರೈತರಿಗೆ, ಹಾಲು ಉತ್ಪಾದಕರಿಗೆ ಮಾತ್ರ ಕೇಂದ್ರ ಯಾವುದೇ ಸಬ್ಸಿಡಿಯನ್ನು ಕೊಡುತ್ತಿಲ್ಲ" ಎಂದಿದ್ದ.

ಆದರೆ ವಾಸ್ತವ ಏನು? ಇವತ್ತು ಮಾರುಕಟ್ಟೆಯಲ್ಲಿ 15ರಿಂದ 20 ಲೀಟರ್ ಹಾಲು ಕೊಡುವ ಸೀಮೆ ಹಸುವಿನ ರೇಟು 50 ರಿಂದ 60 ಸಾವಿರ ರೂಪಾಯಿಗಳು. ಹಾಗೆಯೇ ನಾಲ್ಕು ಅಥವಾ ಐದು ಲೀಟರ್ ಹಾಲು ಕೊಡುವ ನಾಟಿ ಹಸುವಿನ ಬೆಲೆ 15 ರಿಂದ 20 ಸಾವಿರ ರೂಪಾಯಿಗಳು. ಇನ್ನು ಗೊಡ್ಡಾಗಿದ್ದು ಕಸಾಯಿಖಾನೆಗೆ ಮಾತ್ರ ಸೂಕ್ತವಾಗಿರುವ ಸೀಮೆ ಹಸುಗೆ ಸಿಗುವ ರೇಟು 10ರಿಂದ 15 ಸಾವಿರ ರೂಪಾಯಿಗಳು. ಹಾಗೆಯೇ ಗೊಡ್ಡಾಗಿರುವ ನಾಟಿ ಹಸುಗೆ ಹತ್ತು ಸಾವಿರ ರೂಪಾಯಿ ಸಿಕ್ಕರೆ ಅದೇ ಹೆಚ್ಚು.

ಮೊದಲನೆಯದಾಗಿ ಯಾರೂ ಹಾಲು ಕೊಡುವ ಹಸುವನ್ನು ಕಡಿಮೆ ಬೆಲೆಗೆ ಮಾರುವಷ್ಟು ಮೂರ್ಖರಲ್ಲ, ಅವು ಗೊಡ್ಡಾದ ನಂತರವೇ ಅವುಗಳನ್ನು ವಿಧಿ ಇಲ್ಲದೆ ಮಾರುವುದು. ಯಾಕೆಂದರೆ ಹಾಗೆ ಮಾರಿದರೆ ಮಾತ್ರ ರೈತರಿಗೆ ಅಥವಾ ಹೈನೋದ್ಯಮದಲ್ಲಿರುವವರಿಗೆ ಹಾಲು ಕೊಡುವ ಹೊಸ ಹಸು ಖರೀದಿಸಲು ಒಂದಿಷ್ಟು ಹಣ ಸಿಗುತ್ತದೆ. ಜೊತೆಗೆ ಯಾರೂ ಗೊಡ್ಡಾದ ಜಾನುವಾರುಗಳನ್ನು ಕಟ್ಟಿಕೊಂಡು ಅವುಗಳಿಗೆ ಮೇವು, ಹಿಂಡಿ ಎಂದೆಲ್ಲ ಹಣ ಖರ್ಚು ಮಾಡುವಷ್ಟು ದಡ್ಡರೂ ಅಲ್ಲ. ಈ ಲೆಕ್ಕಾಚಾರಗಳಿಂದ ಹಸುಗಳ ವಧೆಯಿಂದ ಕ್ಷೀರ ಅಭಾವ ಆಗುತ್ತದೆ ಎಂಬ ಮೋದಿಯ ವಾದವೇ ಟೊಳ್ಳು ಎಂದು ಗೊತ್ತಾಗುತ್ತದೆ.

ಹಾಗೆಯೇ ಕೇಂದ್ರ ಸರ್ಕಾರ ಮಾಂಸೋತ್ಪಾದನೆಯನ್ನು ಪ್ರೋತ್ಸಾಹಿಸುತ್ತಿರುವುದು ನಿಜ. ಆದರೆ ಇದು ಬರೀ ಗೋವಿನ ಮಾಂಸಕ್ಕೆ ಸೀಮಿತವಾಗಿಲ್ಲ. ಮಾಂಸೋತ್ಪಾದನೆಯಲ್ಲಿ ಕುರಿ, ಕೋಳಿ ಇತ್ಯಾದಿ ಪ್ರಾಣಿಗಳ ಮಾಂಸವೂ ಸೇರುತ್ತದೆ. ಹೈನುಗಾರಿಕೆ, ಕುರಿ-ಕೋಳಿ ಸಾಕಣಿಕೆ ರೈತರಿಗೆ ಒಂದಿಷ್ಟು ಹೆಚ್ಚಿನ ಆದಾಯವನ್ನು ತಂದುಕೊಡುವ ಮೂಲಕ ಅವರ ಬವಣೆಗಳನ್ನು ಕಡಿತ ಮಾಡುತ್ತದೆ. ಅಷ್ಟೇ ಅಲ್ಲ, ಕಷ್ಟಕಾಲ ಬಂದಾಗ ಅವುಗಳನ್ನು ಮಾರುವ ಮೂಲಕ ತಮ್ಮ ಆರ್ಥಿಕ ಸಮಸ್ಯೆಗಳನ್ನು ಒಂದಿಷ್ಟು ಮಟ್ಟಿಗೆ ನಿವಾರಿಸಿಕೊಳ್ಳಲೂ ನೆರವಾಗುತ್ತವೆ. ಎಲ್ಲರಿಗೂ ಗೊತ್ತಿರುವಂತೆ ಹೊಲ ಮತ್ತು ಜಾನುವಾರುಗಳನ್ನು ಹೊಂದಿರುವ ರೈತ ಬಿಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡರೆ ಆತನಿಗೆ ಕೊನೆಗೆ ಉಳಿಯುವುದು ಎರಡು ಆಯ್ಕೆಗಳು ಮಾತ್ರ. ಮೊದಲನೆಯದು ಜಾನುವಾರುಗಳನ್ನು ಮಾರುವುದು. ಅದೂ ಆತನ ಕೈಹಿಡಿಯದಿದ್ದರೆ, ಆತನಿಗೆ ಉಳಿಯುವ ಕೊನೆಯ ಆಯ್ಕೆ ಆತ್ಮಹತ್ಯೆ ಮಾಡಿಕೊಳ್ಳುವುದು. ಈಗ ಹಲವಾರು ಕಾರಣಗಳಿಗೆ ನಮ್ಮ ರೈತಾಪಿಗಳು ಆತ್ಮಹತ್ಯೆಗೆ ಶರಣಾಗುತ್ತಿರುವಾಗ ಅವರು ತಮ್ಮ ಜಾನುವಾರುಗಳನ್ನು ಮಾರಕೂಡದು ಎಂದರೆ ಅದು ರೈತದ್ರೋಹಿ ನಿಲುವಾಗದೆ ಇನ್ನೇನಾಗುತ್ತದೆ? ಆದ್ದರಿಂದ ಮೋದಿ ಮತ್ತಾತನ ಗೋ ಗೂಂಡಾಗಳು ನಿಜವಾಗಲೂ ಅಲ್ಪಸಂಖ್ಯಾತ ಮುಸಲ್ಮಾನರ ಕೊಲೆಗಡುಕರು ಮಾತ್ರವಲ್ಲ, ರೈತರ



ಕೊಲೆಗಡುಕರೂ ಆಗಿದ್ದಾರೆ.

ಇನ್ನು ಮಾಂಸೋತ್ಪಾದನೆಗೆ ಸರ್ಕಾರ ಸಬ್ಸಿಡಿ ಕೊಡುವುದೇನೋ ನಿಜ. ಆದರೆ ಹೈನೋದ್ಯಮಕ್ಕೂ ಸರ್ಕಾರಗಳು ಸಬ್ಸಿಡಿ ಕೊಡುತ್ತವೆ. ಆದರೆ ಮೋದಿಗೆ ಇಂತಹ ಸತ್ಯಗಳು ಬೇಕಿಲ್ಲ.

ಇನ್ನು ಜಾನುವಾರುಗಳ ಚರ್ಮದ ವಿಷಯಕ್ಕೆ ಬರುವುದಾದರೆ ಅವುಗಳ ಸುತ್ತ ಸಾವಿರಾರು ಕುಟುಂಬಗಳ ಬದುಕು ಹೆಣೆದುಕೊಂಡಿದೆ. ದನ, ಎಮ್ಮೆ, ಕುರಿಗಳ ಚರ್ಮವನ್ನು ಸುಲಿಯುವವರು, ಅದನ್ನು ಹದ ಮಾಡುವವರು, ಅವುಗಳಿಂದ ಚಪ್ಪಲಿ ಇತ್ಯಾದಿಗಳನ್ನು ತಯಾರಿಸುವವರು... ಹೀಗೆ ವಿವಿಧ ಸಮುದಾಯಗಳು ಮತ್ತು ವೃತ್ತಿಗಳು ಇವೆ. ಗೋ ಗೂಂಡಾಗಿರಿಯಿಂದಾಗಿ ಅವರೆಲ್ಲರ ಬದುಕು ನಾಶವಾಗುತ್ತಿದೆ.

ಉದಾಹರಣೆಗೆ ಮಹಾರಾಷ್ಟ್ರದ ಕೊಲ್ಲಾಪುರವನ್ನು ತೆಗೆದುಕೊಳ್ಳಬಹುದು. ಆ ರಾಜ್ಯದ ಸರ್ಕಾರ ಗೋರಕ್ಷಣೆ ಹೆಸರಲ್ಲಿ ದನಗಳ ವಧೆಯನ್ನು ನಿಷೇಧಿಸಿದಂದಿನಿಂದ ಅಲ್ಲಿನ ರೈತರು ಮತ್ತು ಹೈನೋದ್ಯಮದಲ್ಲಿರುವವರು ಮಾತ್ರ ಕಷ್ಟದಲ್ಲಿ ಸಿಲುಕಿಕೊಂಡಿಲ್ಲ, ಎಮ್ಮೆ ಚರ್ಮದಿಂದ ಖ್ಯಾತ ಕೊಲ್ಲಾಪುರಿ ಚಪ್ಪಲಿಗಳನ್ನು ತಯಾರಿಸುತ್ತಿದ್ದ ಸಮುದಾಯಗಳು ಈಗ ಎಮ್ಮೆ ಚರ್ಮದ ಅಭಾವದಿಂದ ಬೀದಿಪಾಲಾಗಿವೆ. ಹಸು, ಎಮ್ಮೆಗಳ ರಕ್ಷಣೆಯ ಹೆಸರಲ್ಲಿ ಮೋದಿ ಮತ್ತಾತನ ಪಟಾಲಂ ಮಾನವ ವಧೆಗೆ ಕಾರಣರಾಗಿದ್ದಾರೆ.

ಇವತ್ತು ದನದ ಮಾಂಸದ ಬೆಲೆ ಮಾರುಕಟ್ಟೆಯಲ್ಲಿ ಕೇಜಿಗೆ 210 ರೂಪಾಯಿ. ಇದು ಎಲ್ಲರಿಗೂ ಗೊತ್ತಿರುವಂತೆ ಅತಿ ಕಡಿಮೆ ಬೆಲೆಗೆ ಸಿಗುವ ಮಾಂಸ. ದನದ ಮಾಂಸ ಬರೀ ಬಡ ಮುಸಲ್ಮಾನರಿಗೆ ಮಾತ್ರವಲ್ಲ, ಬಡ ದಲಿತರಿಗೂ ಪೌಷ್ಠಿಕ ಮಾಂಸ. ತೊಗರಿಬೇಳೆಯ ಬೆಲೆಯನ್ನು ಗಗನಕ್ಕೇರಿಸಿರುವ ಮೋದಿ ಸರ್ಕಾರ ಇವತ್ತು ದನದ ಮಾಂಸವನ್ನೂ ನಿಷೇಧಿಸುತ್ತದೆ ಎಂದರೆ ಅದು ಬಡವರ ಹೊಟ್ಟೆ ಮೇಲೆ ಚಪ್ಪಡಿ ಕಲ್ಲು ಎಳೆಯುವುದಕ್ಕೆ ಸಮಾನ.

ಮೋದಿ ಸರ್ಕಾರದಡಿ ಗೋರಕ್ಷಣೆ ಹೆಸರಲ್ಲಿ ರೈತರ ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವವರ ಬದುಕು ಇನ್ನಷ್ಟು ಅತಂತ್ರವಾಗಿದೆ. ದಲಿತರ ಮತ್ತು ಅಲ್ಪಸಂಖ್ಯಾತರ ಆಹಾರವನ್ನೇ ಕಸಿದುಕೊಳ್ಳಲಾಗುತ್ತಿದೆ, ಚರ್ಮಗಳಿಂದ ವಸ್ತುಗಳನ್ನು ತಯಾರಿಸುವವರನ್ನು ಬೀದಿಪಾಲಾಗಿಸಲಾದೆ, ಗೋಗೂಂಡಾಗಳು ಜನರು ಭೀತಿಯಲ್ಲಿ ಬದುಕುವಂತೆ ಮಾಡುತ್ತಿದ್ದಾರೆ. ಇದೆಲ್ಲದರ ಜೊತೆಗೆ ದಲಿತರು, ದಮನಿತರು ತಮ್ಮ ಬದುಕನ್ನು ರೂಪಿಸಿಕೊಳ್ಳಲೂ ಸಾಧ್ಯವಾಗದಂತೆ ಅವರ ಭೂಮಿಯನ್ನೇ ಕಸಿದುಕೊಂಡು ಬೃಹತ್ ಕಂಪನಿಗಳಿಗೆ ಚಿಕ್ಕಾಸಿಗೆ ಮೋದಿ ನೀಡುತ್ತಿದ್ದಾನೆ.


ಇದೆಲ್ಲದರ ಹಿನ್ನೆಲೆಯಲ್ಲಿ 'ಆಹಾರ ನಮ್ಮ ಆಯ್ಕೆ, ಭೂಮಿ ನಮ್ಮ ಹಕ್ಕು' ಎಂಬ ಘೋಷವಾಕ್ಯದೊಂದಿಗೆ 'ಚಲೋ ಉಡುಪಿ' ಜಾಥಾ ನಡೆಯುತ್ತಿದೆ.

ಭಾರತವನ್ನು ಮೋದಿ ಮತ್ತು ಆತನ ಸಂಘ ಪಟಾಲಂನಿಂದ ರಕ್ಷಿಸುವುದು ಇವತ್ತಿನ ಜರೂರತ್ತಾಗಿದೆ. ಆ ನಿಟ್ಟಿನಲ್ಲಿ 'ಚಲೋ ಉಡುಪಿ' ರಾಜ್ಯದ 21ನೇ ಶತಮಾನದಲ್ಲಿ ಒಂದು ಪ್ರಮುಖ ಹೆಜ್ಜೆ ಆಗಲಿದೆ. ನೀವೂ ಬಂದು ಈ ಐತಿಹಾಸಿಕ ಸಭೆಯಲ್ಲಿ ಪಾಲ್ಗೊಳ್ಳಿ. ■

ದಲಿತ, ದಮನಿತರ ಜಾಥಾ

ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ನಡೆದ ಎರಡು ಕೊಲೆಗಳು ಭಾರೀ ಸುದ್ದಿ ಮಾಡಿವೆ. ಜುಲೈ 28ರಂದು ಉಡುಪಿ ನಗರದ ಶ್ರೀಮಂತ ಉದ್ಯಮಿಯೊಬ್ಬರ ಕೊಲೆಯಾಗಿದ್ದು ಮೃತರ ಪತ್ನಿ, ಪ್ರಾಯಕ್ಕೆ ಬಂದ ಅವರ ಮಗ ಮತ್ತು ಆ ಕುಟುಂಬಕ್ಕೆ ಪರಿಚಿತನಾದ ಪುರೋಹಿತ ವೃತ್ತಿಯ ಓರ್ವ ಯುವಕ ಕೊಲೆಯ ಆರೋಪಿಗಳಾಗಿದ್ದಾರೆ. ಉದ್ಯಮಿಯನ್ನು ಹೇಗೆ ಕೊಲ್ಲಲಾಯಿತು, ಆ ಕೃತ್ಯದಲ್ಲಿ ಭಾಗಿಗಳಾದವರು ಯಾರು, ಅದು ನಡೆದದ್ದಾದರೂ ಎಲ್ಲಿ ಇತ್ಯಾದಿ ಸಂದೇಹಗಳಿಗೆ ಯಾರ ಬಳಿಯೂ ನಿಖರವಾದ ಮಾಹಿತಿ ಇಲ್ಲ; ಕೊಲೆಯ ಕೃತ್ಯವನ್ನು ನೋಡಿದವರು ಯಾರೂ ಇಲ್ಲ, ಆದಾಗ್ಯೂ ಈ ಪ್ರಕರಣ ಮಾಧ್ಯಮಗಳಲ್ಲಿ ನವರಸಭರಿತವಾಗಿ ನಿರೂಪಿತಗೊಂಡಿತು. ಅದರಿಂದಾಗಿ ಕುಟುಂಬವೊಂದರ ಖಾಸಗಿ ಸಂಗತಿಯ ಬಗ್ಗೆ ಜನ ಮನಸ್ಸಿಗೆ ತೋಚಿದ್ದನ್ನೆಲ್ಲ ಆಡಿಕೊಂಡರು.

ಈ ಕೊಲೆಯ ಮೂರು ವಾರಗಳ ನಂತರ ಆಗಸ್ಟ್ 17ರ ರಾತ್ರಿ ಉಡುಪಿ ಜಿಲ್ಲೆಯ ಕೆಂಜಾರು ಎಂಬ ಹಳ್ಳಿಯಲ್ಲಿ 30ರ ಹರೆಯದ ಯುವಕ ಪ್ರವೀಣ್ ಪೂಜಾರಿಯವರನ್ನು ಹೊಡೆದು ಕೊಲ್ಲಲಾಯಿತು. ಉಡುಪಿಯ ಶ್ರೀಮಂತ ಉದ್ಯಮಿಯ ಕೊಲೆಗೆ ಅವರ ಸಾಂಸಾರಿಕ ಬಿಕ್ಕಟ್ಟು ಕಾರಣವೆಂದು ಹೇಳಲಾಗಿದೆ. ಆದರೆ ಪ್ರವೀಣ್ ಪೂಜಾರಿಯವರ ಕೊಲೆ ರಾಜಕೀಯ ಸಿದ್ಧಾಂತವೊಂದರಿಂದ ಪ್ರೇರಣೆ ಮತ್ತು ಸಮರ್ಥನೆಗಳನ್ನು ಪಡೆದಿರುವಂತಹದ್ದು. ಪ್ರವೀಣ್ ಪೂಜಾರಿ ಬಿಲ್ಲವ ಸಮುದಾಯದ ಬಡಕುಟುಂಬವೊಂದರಲ್ಲಿ ಹುಟ್ಟಿ ಬೆಳೆದವರು. ಅವರು ಕೆಂಜಾರಿನಲ್ಲಿ ಒಂದು ಸಣ್ಣ ಅಂಗಡಿ ನಡೆಸುವುದರ ಜೊತೆ ಸೇಂದಿ ವ್ಯಾಪಾರ ಮಾಡುತ್ತಿದ್ದರು. ಜೊತೆಗೆ ಒಂದು ಟೆಂಪೊ ಖರೀದಿಸಿ ಬಾಡಿಗೆಗೂ ಓಡಿಸುತ್ತಿದ್ದರು; ಸ್ವತಃ ತಾವೇ ಡ್ರೈವ್ ಮಾಡುತ್ತಿದ್ದರು. ಆಗಸ್ಟ್ 17ರ ತಡರಾತ್ರಿ ಪ್ರವೀಣ್ ಪೂಜಾರಿಯವರ ಗಾಡಿಯನ್ನು ಅವರ ಪರಿಚಿತರೊಬ್ಬರು ಬಾಡಿಗೆಗೆ ಗೊತ್ತು ಮಾಡಿ, ಅದರಲ್ಲಿ ಮೂರು ಕರುಗಳನ್ನು ಸಾಗಿಸುತ್ತಿದ್ದರು. ಕರಾವಳಿಯ ಹೆದ್ದಾರಿಗಳಲ್ಲಿ ಜಾನುವಾರು ಸಾಗಾಟ ಮಾಡುವವರೆಲ್ಲರೂ ಮುಸ್ಲಿಮರು ಮತ್ತು ಅವುಗಳನ್ನು ಸಾಗಿಸುವುದು ಕಸಾಯಿಖಾನೆಗೆ ಹೊರತು ಮತ್ತಾವ




ಉದ್ದೇಶಕ್ಕೂ ಅಲ್ಲ ಎಂಬ ಗ್ರಹಿಕೆ ಇಲ್ಲಿನ ಜನಸಾಮಾನ್ಯರ ಯೋಚನಾಕ್ರಮದಲ್ಲೇ ಸೇರಿಕೊಂಡಿದೆ. ಹಾಗಾಗಿ ಪ್ರವೀಣ್ ಪೂಜಾರಿಯವರ ಗಾಡಿಯಲ್ಲಿದ್ದ ಕರುಗಳನ್ನೂ ಕಸಾಯಿಖಾನೆಗೇ ಸಾಗಿಸಲಾಗುತ್ತಿದೆ ಎಂದು ಭಾವಿಸಿದ ಯುವಕರ ಗುಂಪೊಂದು ಗಾಡಿ ತಡೆದು ಪ್ರವೀಣ್ ಪೂಜಾರಿ ಅವರ ಮೇಲೆ ಹಲ್ಲೆ ನಡೆಸಿದೆ.

ಆ ರಾತ್ರಿ, ನಿರ್ಜನ ರಸ್ತೆಯ ನಡುವೆ ಒಟ್ಟು ಸೇರಿದ ಗುಂಪಿನಲ್ಲಿ ಸುಮಾರು 30ರಷ್ಟು ಯುವಕರಿದ್ದು ಹೆಚ್ಚಿನವರು ಹಿಂದೂ ಜಾಗರಣಾ ವೇದಿಕೆ ಎಂಬ ಸಂಘಟನೆಯವರು ಎಂದು ವರದಿಯಾಗಿದೆ. ಪ್ರವೀಣ್ ಪೂಜಾರಿಯವರ ಅಕಾಲ ಮರಣದಲ್ಲಿ ಕೊನೆಗೊಂಡ ಈ ಗುಂಪು ದಾಳಿಗೆ ಬಿ.ಜೆ.ಪಿಯ ಗೋಸಂರಕ್ಷಣೆಯ ರಾಜಕೀಯವೇ ಕಾರಣವಾಗಿತ್ತು, ಆದರೆ ಈ ದುರಂತದಲ್ಲಿ ಒಂದು ವ್ಯಂಗ್ಯವಿದೆ. ಹಿಂದೂ ಜಾಗರಣ ವೇದಿಕೆಯ ಗೋಸಂರಕ್ಷಕರಿಂದ ಕೊಲೆಯಾದ ಪ್ರವೀಣ್ ಪೂಜಾರಿ ಸ್ವತಃ ಬಿಜೆಪಿ ಕಾರ್ಯಕರ್ತರಾಗಿದ್ದರು. ಯಾವ ಕಾರಣಕ್ಕೆ ತನ್ನ ಮೇಲೆ ಈ ಹಲ್ಲೆ ನಡೆಯುತ್ತಿದೆ ಎಂದು ಅವರಿಗೆ ಗೊತ್ತಿತ್ತು, ತಮ್ಮನ್ನು ಹೊಡೆಯುತ್ತಿದ್ದವರಿಗೆ ಅವರು, "ನಾನು ಬಿಜೆಪಿ ಸದಸ್ಯ, ಹೊಡೆಯಬೇಡಿ" ಎಂದು ಬೇಡಿಕೊಂಡರು; ಕೊನೆಗೆ, "ನಾನು ತಪ್ಪು ಮಾಡಿದ್ದರೆ ಪೊಲೀಸರಿಗೆ ಒಪ್ಪಿಸಿ, ಈ ರೀತಿ ಹೊಡೆಯಬೇಡಿ" ಎಂದು ಗೋಗರೆದರು. ಇದು ಯಾವುದಕ್ಕೂ ಕಿವಿಗೊಡದ ಹಲ್ಲೆಕೋರರು ಪೂಜಾರಿಯವರನ್ನು ಹೊಡೆಯುವಷ್ಟು ಹೊಡೆದು ಆನಂತರ, ಸಮೀಪದ ಬ್ರಹ್ಮಾವರ ಪೊಲೀಸು ಠಾಣೆಗೆ ಫೋನ್ ಮಾಡಿ, 'ಅಕ್ರಮವಾಗಿ ಜಾನುವಾರು ಸಾಗಿಸುತ್ತಿದ್ದವರನ್ನು ಹಿಡಿದಿದ್ದೇವೆ. ಕೂಡಲೆ ಬನ್ನಿ' ಎಂದು ತಿಳಿಸಿದರು. ಠಾಣೆಯಿಂಧ ಪೊಲೀಸರು ಅಪರಾಧ ನಡೆದ ಸ್ಥಳ ತಲುಪುವಷ್ಟರಲ್ಲಿ ಪ್ರವೀಣ್ ಪೂಜಾರಿ ಮೃತ ಪಟ್ಟಿದ್ದರು.


ಪ್ರವೀಣ್ ಪೂಜಾರಿಯವರ ಕೊಲೆಯಿಂದಾಗಿ, ಕರಾವಳಿಯ ಜನ, ಮೊದಲ ಬಾರಿಗೆ ಬಿಜೆಪಿಯ ಗೋಸಂರಕ್ಷಣೆಯ ರಾಜಕೀಯ ಸಿದ್ಧಾಂತವನ್ನು ಪ್ರಶ್ನಿಸತೊಡಗಿದರು. ಜಾನುವಾರುಗಳನ್ನು ಸಾಕುವವರಲ್ಲಿ ಹೆಚ್ಚಿನವರು ಈ ಜಾನುವಾರುಗಳು ಮುದಿಯಾದ ನಂತರ ಅವುಗಳನ್ನು ಮಾರಿಬಿಡುತ್ತಾರೆ. ಕರಾವಳಿಯ ಹಳ್ಳಿಗಳಲ್ಲಿ ಜಾನುವಾರು ವ್ಯಾಪಾರ ಮಾಡುವವರು ಮತ್ತು ಸಾಗಾಟ ಮಾಡುವವರಲ್ಲಿ ಸಾಕಷ್ಟು ಜನ ಕೆಳಜಾತಿ ವರ್ಗಗಳ ಹಿಂದೂಗಳು. ಗೋವಿನ ಮೇಲಿನ ಭಕ್ತಿಯಿಂದ ರೈತರಲ್ಲಿ ಯಾರೂ ಜಾನುವಾರುಗಳನ್ನು ತಮ್ಮ ಹಟ್ಟಿಯಲ್ಲಿ ಅವು ಸಾಯುವವರೆಗೆ ಸಾಕುವುದಿಲ್ಲ; ಅವರಿಗೆ ಆ ತ್ರಾಣವೂ ಇಲ್ಲ, ಬಡ ರೈತರ ಹಟ್ಟಿಗಳು, ಮಠಮಾನ್ಯಗಳು ನಡೆಸುವ ಗೋಶಾಲೆಗಳಲ್ಲ, ಅದೂ ಅಲ್ಲದೆ ಜಾನುವಾರುಗಳನ್ನು ಹತ್ಯೆ ಮಾಡುವವರಲ್ಲಿ ಯಾರೂ, ಗೋಮಾತೆಯ ಭಕ್ತರಿಗೆ ನೋವಾಗಲಿ ಎಂಬ ಉದ್ದೇಶದಿಂದ ಹಾಗೆ ಮಾಡುವುದಿಲ್ಲ, ಜಾನುವಾರುಗಳನ್ನು ಕೊಲ್ಲುವುದು ಬೇಯಿಸಿ ತಿನ್ನಲೇ ಹೊರತು, ಅದಕ್ಕೆ ಬೇರೆ ಯಾವ ಕಾರಣವೂ ಇಲ್ಲ. 'ಕೊಂದ ಪಾಪ ತಿಂದು ಪರಿಹಾರ' ಎಂಬ ಗಾದೆ ಹೇಳುವುದಾದರೂ ಅದನ್ನೇ.

ಇವೆಲ್ಲ ತೀರತೀರ ಸರಳ ಸತ್ಯಗಳಾದರೂ ಬಿಜೆಪಿ



ಮತ್ತು ಅದರ ಗೋ ಸಂರಕ್ಷಣೆಯ ರಾಜಕೀಯ ಪ್ರೋತ್ಸಾಹಿಸುತ್ತಿರುವ ಮಠಾಧೀಶರು, ದೇವಾಲ ಮುಖ್ಯಸ್ಥರು ಹಾಗೂ ಧಾರ್ಮಿಕ ಮುಖಂಡರು ಈ ತಲೆ ಮೇಲೆ ಹೊಡೆದಂತೆ, ಗೋವಿನ ಪಾವಿತ್ರ್ಯ ಗೋ ಆರ್ಥಿಕ ಪ್ರಯೋಜನ, ಗೋ ಮೂತ್ರದ ಔಷಧ ಮತ್ತು ಗೋವಿನ ಹಾಲಿನಲ್ಲಿರುವ ಸತ್ವ ಇತ್ಯಾದಿ ಒಂದೇಸಮನೆ ಸುಳ್ಳಿನ ಮೇಲೆ ಸುಳ್ಳು ಹೇಳುತ್ತಿ ಪ್ರವೀಣ್ ಪೂಜಾರಿಯವರ ಕೊಲೆ ಈ ಸ ಸರದಾರರನ್ನೂ ಚೂರು ಅಲ್ಲಾಡಿಸಿದಂತೆ ಕಾಣುತ್ತದ ಬೆಳವಣಿಗೆಯಿಂದ ಎಚ್ಚೆತ್ತುಕೊಂಡ ಬಿಜೆಪಿ "ಪ್ರ ಪೂಜಾರಿ ತಮ್ಮ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾ ಅವರ ಅಕಾಲಮರಣ ಪಕ್ಷಕ್ಕಾದ ದೊಡ್ಡ ನಷ್ಟ" ಹೇಳಿಕೆ ಪ್ರಕಟಿಸಿತು. ಬಿ.ಜೆ.ಪಿ. ನಾಯಕರು ಪ್ರ ಪೂಜಾರಿಯವರ ಮನೆಗೆ ತೆರಳಿ, ಮನೆಯವರಿಗೆ ಸಾ ಹೇಳಿದರು; ಸಹಾಯಧನವನ್ನೂ ನೀಡಿದರು. ಜೆ ಪ್ರವೀಣ್ ಪೂಜಾರಿಯವರ ಮೇಲೆ ಹಲ್ಲೆ ನ ಗುಂಪಿನವರು ತಮ್ಮ ಪಕ್ಷಕ್ಕೆ ಸೇರಿದವರಲ್ಲ ಎಂದು ಹೇಳಿಕೊಂಡರು. ಹಿಂದೂ ಜಾಗರಣಾ ವೇದಿಕೆ, ಅಧಿಕೃ ಸಂಘ ಪರಿವಾರದ ಒಂದು ಸಂಘಟನೆಯೋ ಅಲ್ಲ ಸಿದ್ಧಾಂತ ಮತ್ತು ಕಾರ್ಯಕ್ರಮದ ಮಟ್ಟಿಗೆ ಆರ್‌ಎಸ್‌ಎಸ್‌ನದ್ದೇ ಇನ್ನೊಂದು ನಕಲು; ಅಳಿಯ ಮಗಳ ಗಂಡ ಎಂದಹಾಗೆ. ಬಿಜೆಪಿ ಈ ಸಾ ಸಹಾಯಧನ ಮತ್ತು ಠಕ್ಕು ಹೇಳಿಕೆಗಳ ಮುಖಾಂತ ಕೊಲೆಯ ಉತ್ತರದಾಯಿತ್ವದಿಂದ ತಪ್ಪಿಸಿಕೊ ಹವಣಿಸುತ್ತಿದೆ.

ಐಕ್ಯ ಹೋರಾಟ




ಇಸವಿ 2002 ಹಲವಾರು ಕಾರಣಗಳಿಂದ ದಲಿತರು ನೆನಪಿನಲ್ಲಿಡಬೇಕಾದ ವರ್ಷವಾಗಿದೆ. ಈ ವರ್ಷದಲ್ಲಿ ಹಿಂದೂತ್ವ ಶಕ್ತಿಗಳು ದಲಿತರೊಂದಿಗೆ ಆಡಿದ ಚೆಲ್ಲಾಟ ಮತ್ತು ಕ್ರೌರ್ಯ ಎಲ್ಲೆ ಮೀರಿತ್ತು ಹಾಗೂ 21ನೇ ಶತಮಾನಕ್ಕೆ ದಲಿತರೇ ದಲಿತರಿಗಾಗಿ ರೂಪಿಸಿದ 'ಭೂಪಾಲ್ ಘೋಷಣೆ' ಒಡಮೂಡಿತ್ತು.

2002 ರ ಆರಂಭಿಕ ದಿನಗಳಲ್ಲಿಯೇ ಅಂದರೆ ಜನವರಿ ತಿಂಗಳಿನಲ್ಲಿಯೇ '21 ನೇ ಶತಮಾನಕ್ಕೆ ದಲಿತರಿಗಾಗಿ ಹೊಸ ಯೋಜನೆ ರಚನೆ' ಎಂಬ ಅಂಶದ ಮೇಲೆ ದೇಶದ ಹಲವು ದಲಿತ ಬುದ್ಧಿಜೀವಿಗಳು 21 ನಿರ್ಣಯಗಳನ್ನು ಮಂಡಿಸಿದ್ದರು. ಅವೆಲ್ಲವೂ ಒಂದು ರೀತಿ ಸರ್ಕಾರಕ್ಕೆ ನೀಡಿದ ಶಿಫಾರಸ್ಸುಗಳಾಗಿದ್ದವು. ಅಂಬೇಡ್ಕರರ ಹೋರಾಟದ ರಥವನ್ನು ಮುಂದಕ್ಕೆ ನಡೆಸುವುದರಲ್ಲಿ ದಲಿತ ಬುದ್ಧಿಜೀವಿಗಳು ವಿಫಲರಾಗಿದ್ದೇವೆ ಎಂದು ಸಮಿತಿ ಸ್ವವಿಮರ್ಶೆ ಮಾಡಿಕೊಂಡಿತ್ತು. 21 ಅಂಶಗಳಲ್ಲಿ ಮೊದಲನೇ ಅಂಶವೇ 'ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಪ್ರತಿ ದಲಿತ ಕುಟುಂಬಕ್ಕೆ ತಕ್ಕಷ್ಟು ವ್ಯವಸಾಯ ಯೋಗ್ಯವಾದ ಭೂಮಿ ವಸತಿಯನ್ನು ಕಲ್ಪಿಸಬೇಕು' ಎಂದಿತ್ತು, ನಾಲ್ಕನೇ ಅಂಶ 'ದಲಿತ ಭೂಮಿಯನ್ನು ಆಕ್ರಮಿಸಿದ ದಲಿತೇತರರಿಂದ ತಕ್ಕ ಪರಿಹಾರವನ್ನು ವಸೂಲು ಮಾಡಿ, ಭೂಮಿಯನ್ನು ದಲಿತರಿಗೆ ವಾಪಾಸು ನೀಡುವಂತಹ ಕಾನೂನು ರೂಪಿಸಬೇಕು' ಎಂದಿತ್ತು, ಐದನೇ ಅಂಶ 'ಆದಿವಾಸಿಗಳ ಭೂಮಿಯನ್ನು ಸಂಪೂರ್ಣವಾಗಿ ಹಿಂದಕ್ಕೆ ಕೊಡಬೇಕು' ಎಂದಿತ್ತು, ಹದಿನಾರನೇ ಅಂಶ 'ದಲಿತರಿಗೆ ಸ್ವರಕ್ಷಣೆಗಾಗಿ ಆಯುಧಗಳಿಗೆ ಲೈಸೆನ್ಸ್ ನೀಡಬೇಕು' ಎಂದಿತ್ತು, ಹದಿನೇಳನೆ ಅಂಶ 'ದಲಿತರಿಗೆ ಅವಮಾನಕರ ಜಾಡಮಾಲಿ ವೃತ್ತಿಯನ್ನು ತಕ್ಷಣವೇ ನಿರ್ಮೂಲನೆ ಮಾಡಬೇಕು. ಪರ್ಯಾಯವಾಗಿ ಅವರಿಗೆ ತಕ್ಕ ಸರ್ಕಾರಿ ಸೌಲಭ್ಯವನ್ನು ಪುನರ್ವಸತಿ ಕ್ರಮವನ್ನು ರೂಪಿಸಬೇಕು. 1993 ರಲ್ಲಿ ಬಂದ ಡ್ರೈ ಲೆಟ್ರಿನ್, ಜಾಡಮಾಲಿ ವೃತ್ತಿ ನಿಷೇಧ ಕಾಯಿದೆಯನ್ನು ಕಠಿಣವಾಗಿ ಜಾರಿಗೊಳಿಸಬೇಕು. ಮುಖ್ಯವಾಗಿ ರೈಲ್ವೆ, ರಕ್ಷಣಾ ಶಾಖೆ, ಸ್ಥಳೀಯ ನಗರಸಭೆಗಳಲ್ಲಿ ಈ ಕಾಯ್ದೆಯ ಉಲ್ಲಂಘನೆಯನ್ನು ತಡೆಯಬೇಕು' ಎಂದಿತ್ತು, ಇದರ ಜೊತೆಗೆ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಹಲವಾರು ನಿರ್ಣಯಗಳನ್ನು ದಲಿತರ ಪರವಾಗಿ ಭೂಪಾಲ್ ಸಭೆ ನಿರ್ಣಯಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು, ಆದರೆ ಈ 21 ಅಂಶಗಳಲ್ಲಿ ಯಾವುದೇ ಸರ್ಕಾರವೂ ಸಹ ಇಡಿಯಾಗಿ ದಲಿತರ ಅಭಿವೃದ್ಧಿಗಾಗಿ ಒಂದೂ ಕಾರ್ಯಕ್ರಮವನ್ನೂ ರೂಪಿಸಲಿಲ್ಲ! ಓಟ್‌ಬ್ಯಾಂಕಿಗಾಗಿ ಕೇವಲ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದವು. ಮೇಲಿನ 21 ಅಂಶಗಳಲ್ಲಿ 'ಸರ್ಕಾರ ಶೇ. 30 ರಷ್ಟು ಉತ್ಪಾದನಾ ಸಾಮಗ್ರಿಗಳನ್ನು ದಲಿತರಿಂದಲೇ ಖರೀದಿಸಬೇಕು' ಎಂಬ ಅಂಶ ಮಾತ್ರ ಹೆಚ್ಚು ಸದ್ದು ಮಾಡಿತು. ಅದನ್ನೇ ಭೂಪಾಲ್ ಘೋಷಣೆ ಎಂದು ಪ್ರಚುರಪಡಿಸಲಾಯಿತಾದರೂ ಅದನ್ನೂ ಸಹ ಸರ್ಕಾರಗಳು ಗಂಭೀರವಾಗಿ ಪರಿಗಣಿಸಲಿಲ್ಲ.

ಅದೇ 2002 ನೇ ಇಸವಿಯ ಮಧ್ಯಭಾಗದಲ್ಲಿ ಹರ್ಯಾಣದ ಝುಜ್ಜಾರಿನಲ್ಲಿ ದನದ ಚರ್ಮ ಸುಲಿಯುತ್ತಿರುವ 5 ದಲಿತ ಯುವಕರನ್ನು ಹಿಂದೂತ್ವ ಶಕ್ತಿಗಳು ಪೊಲೀಸ್ ಠಾಣೆಯ ಮುಂದೆಯೇ ಬೆಂಕಿ ಹಚ್ಚಿ ಕೊಲ್ಲುತ್ತಿದ್ದರೆ, ಗುಜರಾತಿನ ಅಲ್ಪಸಂಖ್ಯಾತರ ಹತ್ಯಾಕಾಂಡದಲ್ಲಿ ಕೆಲವು ದಲಿತರು ಹಿಂದೂತ್ವ ಶಕ್ತಿಗಳ ಜೊತೆ ಸೇರಿದ್ದರು.

ಆ ಹತ್ಯಾಕಾಂಡದಲ್ಲಿ ಮುಸಲ್ಮಾನರನ್ನು ರಕ್ಷಿಸಿದ ಹಲವು ದಲಿತರೂ ಇದ್ದಾರೆ. ಆದರೆ ಹಿಂದೂತ್ವದ ಕಾಲ್ದಳಗಳಾಗಿ ಹೋರಾಡುವಂತಹ ತುರ್ತಾದರೂ ಕೆಲವು ದಲಿತರಿಗೆ ಏನಿತ್ತು? ಇದಕ್ಕೆ ಎರಡು ಉತ್ತರ ನೀಡಬಹುದು. ಒಂದು: ಹಿಂದೂತ್ವ ಶಕ್ತಿಗಳು 'ಸಮರಸತಾ' ಎಂಬ ಹಿಪ್ನಟೈಸ್ ಭಾಷೆ ಉಪಯೋಗಿಸಿ 'ಹಿಂದೂ ನಾವೆಲ್ಲ ಒಂದೂ' ಎಂಬ ನಾಟಕವಾಡಿದ್ದು. ಎರಡು: ಹಿಂದೂತ್ವದ ಈ ಸಂಚನ್ನು ನೋಡುತ್ತಲೇ ಅಮಾಯಕ ದಲಿತರಿಗಾಗಿ ದಲಿತ ಬುದ್ಧಿಜೀವಿಗಳು, ಮಾನವ ಹಕ್ಕು ಹೋರಾಟಗಾರರು, ಪ್ರಗತಿಪರರು ಯಾವುದೇ ಕಾರ್ಯಕ್ರಮವನ್ನೂ ಹಾಕಿಕೊಳ್ಳದೆ ದೂರ ಉಳಿದದ್ದು.

ಇಂದು ಹಿಂದೂತ್ವ ಶಕ್ತಿಗಳ ಹುನ್ನಾರವನ್ನು ಅರಿತಿರುವ ಗುಜರಾತ್ ದಲಿತರ ನಡೆ ಇಡೀ ದೇಶಕ್ಕೆ ಮಾದರಿಯಾಗಿದೆ. ಉನಾದ ದಲಿತರನ್ನು ಅಲ್ಲಿನ ಗೋರಕ್ಷಕರು ಮೃಗಗಳಂತೆ ಥಳಿಸಿದ್ದು ದೇಶಾದ್ಯಂತ ಸುದ್ದಿ ಮಾಡಿತು. ಅದನ್ನು ವಿರೋಧಿಸಿ ನಡೆದ ಸಂಘರ್ಷದಲ್ಲಿ ದಲಿತರೊಟ್ಟಿಗೆ ಮುಸಲ್ಮಾನ ಬಾಂಧವರು ಕೈ ಜೋಡಿಸಿದ್ದು ಚಾರಿತ್ರಿಕವಾದದ್ದಾಗಿದೆ. ಉತ್ತರ ಪ್ರದೇಶದಲ್ಲಿ ಹಿಂದೂತ್ವ ಶಕ್ತಿಗಳು ದನದ ಹೆಸರಿನಲ್ಲಿ ಅಖ್ಲಾಕ್‌ರನ್ನು ಕ್ರೂರವಾಗಿ ಕೊಂದದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಂತರ ಹೋರಾಟ ಅಲ್ಲಿನ ಮುಖ್ಯಮಂತ್ರಿಯ ಬದಲಾಯಿಸಿತಲ್ಲದೆ ಪ್ರಧಾನಿಯವರು ದಲಿತರ ಪರ ಗೋರಕ್ಷಕರ ವಿರುದ್ಧ ಬಾಯಿ ಬಿಡುವಂತೆ ಮಾಡಿ



ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶ ನರೇಂದ್ರ ಮೋದಿಯವರ ಸರ್ಕಾರ ಅಸ್ತಿತ್ವಕ್ಕೆ ಬಂದ ದೇಶದ ಯುವಜನತೆಯಲ್ಲೂ ಅಸಹನೆ ವಾತಾ ಸೃಷ್ಟಿಸಲು ಹವಣಿಸಲಾಯಿತು. ಮದ್ರಾಸಿನ ಐಐಟಿ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್ ಸಂಘಟನೆ ನಿಷೇಧಿಸುವುದರ ಮೂಲಕ ಕೇಂದ್ರ ಸ ವಿದ್ಯಾರ್ಥಿಗಳನ್ನು ಒಡೆದು ಆಳಲು ತೀರ್ಮಾ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ರೋಹಿತ್ ವೇ ಸೇರಿದಂತೆ ಐವರು ದಲಿತ-ದಮನಿತ ಯುವ ಅಮಾನತು ಮಾಡುವ ಮೂಲಕ, ಕ್ಯಾಂಪಸ್ಸಿನಿಂದ ಬಹಿ ಮಾಡುವ ಮೂಲಕ ಹಿಂದೂತ್ವ ಶಕ್ತಿಗಳಿಗೆ ಕೇಂದ್ರ ಸಂಪೂರ್ಣ ಬೆಂಬಲ ಘೋಷಿಸಿಕೊಂಡಿತು. ದೆಹ ಜೆಎನ್‌ಯು ವಿಶ್ವವಿದ್ಯಾಲಯದಲ್ಲಿ ಕನ್ಹಯ್ಯಾ ಕುಮಾ ದೇಶದ್ರೋಹಿ ಎಂದು ಬಿಂಬಿಸಿ ಜೈಲಿಗಟ್ಟಿತು. ತನ್ನ ಹಿಂದೂತ್ವ ಅಜೆಂಡಾಗಳ ವಿರುದ್ಧ ವಿದ್ಯಾರ್ಥಿಗಳನ್ನು ಮಾನಸಿಕವಾಗಿ, ದೈಹಿಕವಾಗಿ ಹಿಂಸಿ ಇವರ ಹುನ್ನಾರಕ್ಕೆ ರೋಹಿತ್ ವೇಮುಲ ಬಲಿದಾ ಬೇಕಾಯಿತು. ಆದರೆ ಯುವಸಮೂಹ ಈ ಫ ಶಕ್ತಿಗಳ ವಿರುದ್ಧ ಎದೆ ತಟ್ಟಿ ನಿಂತದ್ದು ನಮ್ಮ ನಿಬ್ಬೆರಗಾಗಿ ಸುತ್ತದೆ.

ಈ ಹಿನ್ನೆಲೆಯಲ್ಲಿ ಉನಾ ದಲಿತರ ಸಂಘರ್ಷ ಚ ವಾದದ್ದಾಗಿದೆ. ಇದು ದಲಿತರ ಸಾಮುದಾಯಿಕ ಗಳನ್ನು ಧ್ವನಿಸುತ್ತಿದೆ. ಉನಾ ದಲಿತರ ಘೋಷಣೆ 'ನಿಮ್ಮ ದನದ ಬಾಲ ನೀವೇ ಇಟ್ಟುಕೊಳ್ಳಿ, ನಮ್ಮ ಭ ನಮಗೆ ಕೊಡಿ', 'ಸತ್ತ ಹಸುಗಳ ಕಳೇಬರ ಮುಟ್ಟಲ ನಿಮ್ಮ ತಾಯಿಯನ್ನು ನೀವೇ ನೋಡಿಕೊಳ್ಳಿ' ಘೋಷಣೆಗಳೊಂದಿಗೆ ಆರಂಭವಾದ ಉನಾ ದ ಅಸ್ಮಿತಾ ಯಾತ್ರೆ ಕೇವಲ ಗುಜರಾತಿನ ಬಿಜೆಪಿ ಸರ್ಕಾ ಮಾತ್ರ ಬೆದರಿಸಲಿಲ್ಲ, ಇಡೀ ಭಾರತದ ಸಂಪ್ರದಾಯ ಗಳನ್ನು ಬೆಚ್ಚಿಬೀಳಿಸಿದೆ.

ಈ ಮಾದರಿಯಿಂದ ಪ್ರೇರಣೆಗೊಂಡ ಕರ್ನಾ ದಲಿತರು ಮತ್ತು ಪ್ರಗತಿಪರರು ಒಂದು ಹೆಜ್ಜೆ ಮ ಯೋಚಿಸಿ ಕರ್ನಾಟಕದಲ್ಲಿ ದಲಿತರ-ದಮ

ಸಾಮಾಜಿಕ ಮತ್ತು ಆರ್ಥಿಕ ನ್ಯಾಯವೂ ಬೇಕು: ಜಿಗ್ನೇಶ್



ಸಂದರ್ಶನ

ಜಿಗ್ನೇಶ್ ಮೆವಾನಿ ಈಗ ಗುಜರಾತಿನ ದಲಿತರ ಪಾಲಿಗೆ ಭರವಸೆಯ ಹೊಸ ನಾಯಕ. ಕಳೆದ ಜುಲೈ ತಿಂಗಳಲ್ಲಿ ಗುಜರಾತಿನ ಉನಾದಲ್ಲಿ ಗೋರಕ್ಷಕರಿಂದ ದಲಿತರ ಮೇಲೆ ನಡೆದ ಅಮಾನವೀಯ ಹಲ್ಲೆಯನ್ನು ವಿರೋಧಿಸಿ ರಾಜ್ಯದಾದ್ಯಂತ ನಡೆದ ಚಳವಳಿಗಳಲ್ಲಿ ಇವರದು ಸಕ್ರಿಯ ಪಾತ್ರ. 'ಉನಾ ದಲಿತ ಅತ್ಯಾಚಾರ ಹೋರಾಟ ಸಮಿತಿ'ಯ ನಾಯಕರೂ ಆಗಿರುವ ಮೆವಾನಿ, ಇತ್ತೀಚೆಗೆ ಅಹಮದಾಬಾದ್‌ನಲ್ಲಿ ರಸ್ತೆತಡೆ ಚಳವಳಿಯನ್ನು ಪ್ರಾರಂಭಿಸಿ ದಲಿತರಿಗೆ ಹಂಚಲಾದ ಭೂಮಿಯ ಖಾತೆ ಮಾಡಿಸಿಕೊಡುವ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಲು ಕಾರಣರಾದರು.

'ದಿ ಹಿಂದೂ' ಪತ್ರಿಕೆಯ ಜಿ.ಸಂಪತ್, ಜಿಗ್ನೇಶ್ ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ. 'ಚಲೋ ಉಡುಪಿ' ಚಳವಳಿಯಲ್ಲಿ ಭಾಗವಹಿಸಲಿರುವ ಜಿಗ್ನೇಶ್ ಸಂದರ್ಶನವನ್ನು 'ಚಲೋ ಉಡುಪಿ ಬಳಗ' ಕನ್ನಡದ ಓದುಗರಿಗಾಗಿ ಕನ್ನಡೀಕರಿಸಿದೆ.

* *ಪ್ರಶ್ನೆ: ಭೂರಹಿತ ದಲಿತರಿಗೆ ಸರ್ಕಾರ ತಲಾ ಐದು ಎಕರೆ ಭೂಮಿಯನ್ನು ಕೊಡಬೇಕು ಎಂಬುದು ನೀವು ಮತ್ತು ನಿಮ್ಮ ಚಳವಳಿಯ ಮುಖ್ಯ ಬೇಡಿಕೆ. ಇದು ಆಗುಹೋಗುವ ಮಾತೇ? ದಲಿತರಿಗೆ ಕೊಡೋಕೆ ಭೂಮಿ ಎಲ್ಲಿದೆ?*

ಉತ್ತರ: ಪ್ರತಿ ಜಿಲ್ಲೆ, ಪ್ರತಿ ತಾಲೂಕಿನಲ್ಲೂ ಸರ್ಕಾರದ ವಶದಲ್ಲಿ ಸಾಗುವಳಿ ಮಾಡದ ಭೂಮಿ ಇದೆ. ಅದನ್ನೆಲ್ಲ ಭೂರಹಿತರಿಗೆ ಹಂಚಬಹುದು. ಗುಜರಾತ್ ಭೂಸ್ವಾಧೀನ ತಿದ್ದುಪಡಿಯನ್ನು ಜಾರಿ ಮಾಡಿದರೆ ಸಾವಿರಾರು ಎಕರೆ ಸರ್ಕಾರದ ವಶಕ್ಕೆ ಬರುತ್ತೆ. ಇದರ ಜೊತೆಗೆ ಸರ್ಕಾರ ಮನಸ್ಸು ಮಾಡಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯ ಪ್ರಕಾರ ಸರ್ಕಾರವೇ ಭೂಮಿಯನ್ನು ಖರೀದಿಸಿ ಭೂರಹಿತರಿಗೆ ಹಂಚಬಹುದು. ಟಾಟಾಗಳಿಗೆ, ಅಂಬಾನಿಗಳಿಗೆ, ಅದಾನಿಗಳಿಗೆ, ವಿಶೇಷ ಆರ್ಥಿಕ ವಲಯಗಳಿಗೆ ಕೊಡಲು ಸರ್ಕಾರದ ಹತ್ತಿರ ಭೂಮಿ ಇದ್ದಮೇಲೆ ದಲಿತರಿಗೆ ಆದಿವಾಸಿಗಳಿಗೆ ಹಿಂದುಳಿದವರಿಗೆ ಕೊಡಲು ಇರಲೇಬೇಕಲ್ಲವಾ?

* *ಕಾರ್ಪೊರೇಟ್‌ನವರಿಗೆ ಸರ್ಕಾರ ಭೂಮಿ ಹಂಚೋದು ಆರ್ಥಿಕ ಅಭಿವೃದ್ಧಿಯ ಭಾಗವಾಗಿ. ದಲಿತರಿಗೆ ಐದು ಎಕರೆ ಭೂಮಿ ಕೊಡೋದರಿಂದ ಯಾವ ಅಭಿವೃದ್ಧಿ ಆಗುತ್ತೆ?*

ಭೂಸುಧಾರಣೆ ಮೊದಲ ಪಂಚವಾರ್ಷಿಕ ಯೋಜನೆಯ ಭಾಗವಾಗಿತ್ತು, ಅದರ ಉದ್ದೇಶವೇ ಸಮ ಸಮಾಜವನ್ನು ದೇಶದಲ್ಲಿ ನಿರ್ಮಾಣ ಮಾಡುವ ಮತ್ತು ಭೂರಹಿತರಿಗೆ ಹಾಗೂ ನಿರ್ಗತಿಕರಿಗೆ ಕೃಷಿಭೂಮಿ ಕಲ್ಪಿಸುವುದಾಗಿತ್ತು. ಈಗಲೂ ದೇಶದಲ್ಲಿ ಬಹುಪಾಲು ಜನ ತಮ್ಮ ಜೀವನಾಧಾರಕ್ಕೆ ನಂಬಿರುವುದು ಕೃಷಿಯನ್ನೇ. ನಮ್ಮ ಬೇಡಿಕೆಯ ಮೂಲಕ ನಾವು ಅಭಿವೃದ್ಧಿಯ ಇನ್ನೊಂದು ಮಾದರಿಯನ್ನು ಮುಂದಿಡುತ್ತಿದ್ದೇವೆ ಅಷ್ಟೆ. ಸಂಪತ್ತು ಮತ್ತು ಸಂಪನ್ಮೂಲಗಳ ಸರಿಯಾದ ವಿತರಣೆ, ಉಳುಮೆಗಾರರಿಗೆ ನೆಲ ಎಲ್ಲ ಅಭಿವೃದ್ಧಿಯ ಭಾಗ.

* *ನಿಮ್ಮ ಸರೋಢ ಭೂಹೋರಾಟದ ಗೆಲುವಿನ ಬಗ್ಗೆ ಸ್ವಲ್ಪ ಹೇಳಿ.*


ಭೂಸುಧಾರಣೆ ಕಾಯ್ದೆ ಯಶಸ್ವಿಯಾಗಿ ಕಾಗದದ ಮೇಲೆ ಜಾರಿಯಾಗಿರುವ ಏಕೈಕ ರಾಜ್ಯವೆಂದರೆ ಗುಜರಾತ್! ಭೂಒಡೆತನದ ಬಗ್ಗೆ ಇಲ್ಲಿ ಸರಿಯಾದ ದಾಖಲೆಗಳನ್ನು ಯಾರೂ ಒದಗಿಸುವುದಿಲ್ಲ, ರೈತರೇನು ಕಾಗದದ ಮೇಲೆ ವ್ಯವಸಾಯ ಮಾಡೋಕೆ ಸಾಧ್ಯನಾ? ಸರೋಢದ ಕತೆಗೆ [illegible], ಇಲ್ಲಿನ ನೂರ ಹದಿನೈದು ಕುಟುಂಬಗಳಿಗೆ [illegible] ಇಪ್ಪತ್ತು ಭಾಗ ಭೂಮಿಯನ್ನು 2006ರಲ್ಲಿ ನೀಡಲಾಗಿತ್ತು, ತೊಂಬತ್ತು ದಿನಗಳೊಳಗೆ ಖಾತೆ ಪತ್ರವನ್ನು ಇವರಿಗೆಲ್ಲ ಕೊಡಬೇಕಾಗಿತ್ತು, ಆದರೆ 2016ರಲ್ಲೂ ಅವರಿಗೆ ಖಾತೆ ಮಾಡಿ ಕೊಟ್ಟಿರಲಿಲ್ಲ. ಈ ಕುಟುಂಬಗಳು ಸತತ ಒಂಬತ್ತು ವರ್ಷ ಧರಣಿ ಕೂರುವುದು, ಕಚೇರಿಗಳಿಗೆ ಮನವಿ ಕೊಡುವುದು ಇವನ್ನೆಲ್ಲ ಮಾಡುತ್ತಲೇ ಬಂದಿದ್ದರು. ಭೂಮಿ ಕೊಡಿ ಇಲ್ಲವೇ ಈ ದೇಶದಿಂದ ನಮ್ಮನ್ನು ಹೊರದಬ್ಬಿ ಅಂತ ಇವರು ಸರ್ಕಾರಕ್ಕೂ ಮನವಿ ಕೊಟ್ಟಿದ್ದರು. ಈ ತಿಂಗಳು ನಾವು ಹೋರಾಟ ಕೈಗೆತ್ತಿಕೊಂಡು, ಅಹಮದಾಬಾದ್‌ನಲ್ಲಿ ರಸ್ತೆ ತಡೆ ಚಳವಳಿ ಶುರುಮಾಡಿದೆವು. ಪೊಲೀಸರ ದೌರ್ಜನ್ಯಕ್ಕೂ ಹೆದರಲಿಲ್ಲ. ಕೊನೆಗೆ ಸರ್ಕಾರ ಮಣಿದು ಭೂಮಿಯ ಖಾತೆ ಪತ್ರಗಳನ್ನು ಸಂಬಂಧಪಟ್ಟವರಿಗೆ ಕೊಡಲು ಒಪ್ಪಿತು. ಈಗಾಗಲೇ ಜಮೀನನ್ನು ಅಳತೆ ಮಾಡಿ, ಖಾತೆ ಮಾಡಿ ಕೊಡುತ್ತಿದ್ದಾರೆ.

* *ಸೆಪ್ಟೆಂಬರ್ ಹದಿನಾರನೇ ತಾರೀಖು ನೀವು ದೆಹಲಿಯಿಂದ ಅಹಮದಾಬಾದ್‌ಗೆ ಬರುವಾಗ ನಿಮ್ಮನ್ನ ಅರೆಸ್ಟ್ ಮಾಡಿದ್ದರಲ್ಲ, ಯಾಕೆ?*

ನಾನು ಅರೆಸ್ಟ್ ಆಗಿದ್ದು ಗುಜರಾತ್ ಮಾದರಿಯ ಬಗ್ಗೆ ಮಣಗಟ್ಟಲೆ ವಿಷಯವನ್ನ ಹೇಳುತ್ತೆ. ಒಟ್ಟಿನಲ್ಲಿ ಸರ್ಕಾರ ಗುಜರಾತ್ ದಲಿತರ ಪ್ರತಿಭಟನೆಯಿಂದ ಎಷ್ಟೊಂದು ಬೆಚ್ಚಿದೆ ಅನ್ನೋದಕ್ಕೆ ಸಾಕ್ಷಿ ಇದು.

* *ನಿಮಗನಿಸುವಂತೆ ಇವತ್ತು ದಲಿತ ರಾಜಕಾರಣ ಎದುರಿಸುತ್ತಿರುವ ದೊಡ್ಡ ಸವಾಲು ಯಾವುದು?*

ಮನುವಾದಕ್ಕೆ ಧಿಕ್ಕಾರ ಅನ್ನೋ ತರದ ಘೋಷಣೆಗಳಲ್ಲೇ ದಲಿತ ರಾಜಕಾರಣ ಸಿಕ್ಕಿಹಾಕಿಕೊಂಡುಬಿಟ್ಟಿತು ಅಂತ



ಒಮ್ಮೊಮ್ಮೆ ಅನಿಸುತ್ತದೆ. ಅದು ಸೀಮಿತ ಮಟ್ಟವನ್ನು ಮೀರಿ ಮುಂದಕ್ಕೆ ಹೋಗಬೇಕಿತ್ತು; ಆದರೆ ಐಡೆಂಟಿಟಿ ಪಾಲಿಟಿಕ್ಸ್‌ನ ಹುದುಲಿನೊಳಕ್ಕೆ ಸಿಕ್ಕಿಬಿತ್ತು. ಈಗ ದಲಿತ ರಾಜಕಾರಣದ ಮುಂದಿರುವ ಸವಾಲೆಂದರೆ, ತನ್ನತನವನ್ನು ಹುಡುಕಿಕೊಳ್ಳೋದು ಮತ್ತು ದಲಿತರ ನಿತ್ಯದ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳೋದು. ಜೊತೆಗೆ ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ನ್ಯಾಯಕ್ಕೋಸ್ಕರವೂ ಹೋರಾಡೋದು.

* *ದಲಿತರಲ್ಲಿ ಒಗ್ಗಟ್ಟು ಮೂಡುವುದು ಕಷ್ಟವೆನ್ನುತ್ತೀರಾ? ಹೌದೆನ್ನುವುದಾದರೆ, ನೀವು ಅದನ್ನು ಎದುರಿಸಲು ಮಾಡಿಕೊಂಡಿರುವ ಸಿದ್ಧತೆ ಏನು?*

ದಲಿತರಲ್ಲಿ ಒಗ್ಗಟ್ಟು ಮೂಡುವುದು ಕಷ್ಟ ಅನ್ನೋದು ನಿಜ. ಜಗತ್ತಿನ ದಲಿತರೆಲ್ಲ ಒಂದಾಗಿ ಅನ್ನೋದನ್ನ ನಾವು ನಮ್ಮ ಘೋಷಣೆಯಾಗಿ ಮಾಡಿಕೊಂಡಿದ್ದೇವೆ. ಆದರೆ ಇತ್ತೀಚಿನ ಎನ್‌ಜಿಓ ಸಮೀಕ್ಷೆಯೊಂದು ದಲಿತರಲ್ಲೇ ಸಣ್ಣಪುಟ್ಟ ಜಾತಿಗಳ ಮೇಲೆ 'ಮುಂದುವರಿದ' ದಲಿತರ ತಾರತಮ್ಯ ಧೋರಣೆ ವ್ಯಾಪಕವಾಗಿರುವುದನ್ನು ಹೇಳುತ್ತಿದೆ. ಈ ಆಂತರಿಕ ಬಿಕ್ಕಟ್ಟನ್ನೂ ಜರೂರಾಗಿ ಪರಿಹರಿಸಬೇಕಿದೆ. ಇದಾಗದೆ ದಲಿತ ವಿಮೋಚನೆಗೆ ಅರ್ಥ ಇಲ್ಲ. ಮುಂದಿನ ದಿನಗಳಲ್ಲಿ ಬೇರೆ ಬೇರೆ ತರದ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳಲಿದ್ದೇವೆ. ಅಂತರ್ಜಾತಿ ಮದುವೆಯಂತಹ ಕಾರ್ಯಕ್ರಮಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆ. ಫೆಬ್ರುವರಿ ತಿಂಗಳ ಪ್ರೇಮಿಗಳ ದಿನವನ್ನು ಅಂತರ್ಜಾತಿ ಮದುವೆಗಳಿಗೆ ಉತ್ತೇಜನ ಕೊಡಲು ಬಳಸಿಕೊಳ್ಳುತ್ತೇವೆ. ಇದು ಜಾತಿವಿರೋಧಿ ರಾಜಕಾರಣಕ್ಕೂ ನೆರವಾಗಲಿದೆ ಅಂದುಕೊಳ್ಳುತ್ತೇನೆ.


* *ವೈಯಕ್ತಿಕ ಪ್ರಗತಿಯೇ ಒಂದು ಹಂತದಲ್ಲಿ ಸಮುದಾಯದ ಪ್ರಗತಿಗೆ ತೊಡರುಗಾಲಾಗುತ್ತಿದೆ ಅನ್ನೋದು ದಲಿತ ರಾಜಕಾರಣದ ಬಗ್ಗೆ ಇರುವ ಟೀಕೆ. ದಲಿತನೊಬ್ಬ ಅಧಿಕಾರಕ್ಕೆ ಬಂದರೆ ದಮನಿತರ ಪರವಾದ ದನಿಗೆ ಸೂಲು ಕೂಡಿತು ಅಂತ ಜನ ಭಾವಿಸುತ್ತಿದ್ದರೆ, ಅಧಿಕಾರದಿಂದ ದಕ್ಕುವ ಸವಲತ್ತುಗಳು ಸಮುದಾಯದ ತನಕ ತಲುಪದೆ ಹೋಗುವುದೂ ಇದೆಯಲ್ಲ?*

ಇದನ್ನು ನಾನೂ ಒಪ್ಪುತ್ತೇನೆ. ಆದರೆ ಭೂರಹಿತರ ಪರವಾಗಿ ನಡೆಯುತ್ತಿರುವ ರಾಜಕಾರಣ ಹೀಗೆ ವೈಯಕ್ತಿಕ ಮಟ್ಟದಲ್ಲಿಲ್ಲ; ಅದು ಹೆಚ್ಚು ಸಮುದಾಯ ಕೇಂದ್ರಿತವಾಗಿದೆ. ದಲಿತ ರಾಜಕಾರಣಿಗಳೂ ಬುದ್ಧಿಜೀವಿಗಳೂ ಅಧಿಕಾರಕ್ಕೆ ಬಂದ ಮೇಲೆ ಸಮುದಾಯದ ಏಳಿಗೆಯನ್ನು ಮರೆತಿದ್ದನ್ನು ಈ ತನಕ ನೋಡಿದ್ದೇವೆ. ಆದರೆ ಹೋರಾಟಗಳು ಸಮುದಾಯದ ಏಳಿಗೆಯನ್ನೇ ಗಮನದಲ್ಲಿಟ್ಟುಕೊಂಡು ರೂಪುಗೊಳ್ಳಬೇಕು ಮತ್ತು ಅದಕ್ಕೆ ಬದ್ಧವಾಗಿರಬೇಕು ಅಂತ ದಲಿತರಿಗೀಗ ಮನವರಿಕೆಯಾಗುತ್ತಿದೆ. ಅಲ್ಲದೆ ರಾಜಕಾರಣಿಗಳಿಂದಲೇ ಎಲ್ಲವೂ ಸಾಧ್ಯ ಅಂತ ದಲಿತ ಚಳವಳಿ ಯಾವತ್ತೂ ನಂಬಿಕೊಂಡು ಕುಳಿತಿಲ್ಲ.

* *ಇದು ಐಡೆಂಟಿಟಿ ಪಾಲಿಟಿಕ್ಸ್‌ನ ಮಿತಿ ಅಲ್ಲವೇ?*

ಒಂದು ಮಟ್ಟಿಗೆ ಹೌದು. ಐಡೆಂಟಿಟಿ ಪಾಲಿಟಿಕ್ಸ್‌ನಲ್ಲಿ ಕೆಲವು ದೋಷಗಳಿವೆ. ಒಳ್ಳೆಯ ಕೆಟ್ಟ ಕೆಲವು ಆಯಾಮಗಳೂ ಇವೆ. ರಾಜಕೀಯ ಮಾಡುವಾಗ ಅವನ್ನೆಲ್ಲ ನಾವು ಪರಿಶೀಲಿಸಿಯೇ ಮುಂದುವರೆಯಬೇಕಾಗುತ್ತದೆ.


* *ಕಮ್ಯುನಿಸ್ಟರ ಬಗ್ಗೆ ದಲಿತರಲ್ಲಿ ಭಿನ್ನಾಭಿಪ್ರಾಯ ಇರುವಂತಿದೆ. ಕಮ್ಯುನಿಸ್ಟರು ಜಾತಿ ಪ್ರಶ್ನೆಯನ್ನ ಹಿನ್ನೆಲೆಗೆ*



ದೂಡಿಬಿಟ್ಟಿದ್ದಾರೆ ಅನ್ನೋದು ಅಂಬೇಡ್ಕರ್‌ವಾದಿಗಳ ಆರೋಪ. ಕಮ್ಯುನಿಸ್ಟರ ಬಗ್ಗೆ ನಿಮ್ಮ ನಿಲುವೇನು?

ಕಮ್ಯುನಿಸ್ಟರನ್ನು ನಮ್ಮ ಹೋರಾಟದ ಜೊತೆಗಾರರು ಎಂದು ನಾನಾದರೂ ಭಾವಿಸುತ್ತೇನೆ. ಇದು ಕಮ್ಯುನಿಸ್ಟರು ದಲಿತರ ಜೊತೆ ಸೇರುವ ಅಥವಾ ದಲಿತರು ಕಮ್ಯುನಿಸ್ಟರೊಂದಿಗೆ ಹೋಗುವ ಪ್ರಶ್ನೆ ಅಲ್ಲ. ಇದನ್ನು ದಲಿತರ ಎಡಪಂಥೀಯತೆಯ ವಿಸ್ತರಣೆ ಅಂತ ಬೇಕಾದರೆ ಕರೆಯಿರಿ. ಅಂದರೆ ವರ್ಗ ಹೋರಾಟವನ್ನು ಅರ್ಥೈಸಿಕೊಳ್ಳುವ ತೀಕ್ಷ್ಣ ವಿಧಾನ ಇದು. ವರ್ಗರಹಿತ ಸಮಾಜವನ್ನು ಸೃಷ್ಟಿಸುವುದರಲ್ಲಿ ನಾವು ಸೋತರೂ ಕೊನೇಪಕ್ಷ ಈಗ ಇರುವುದಕ್ಕಿಂತ ಕಡಿಮೆ ಅಸಮಾನತೆಯಿರುವ ಸಮಾಜವನ್ನು ಸೃಷ್ಟಿಸುವ ಗುರಿಯನ್ನಾದರೂ ಇಟ್ಟುಕೊಳ್ಳಬೇಕಾಗುತ್ತದೆ. 'ದನದ ಬಾಲ ನೀವೇ ಇಟ್ಟುಕೊಳ್ಳಿ, ನಮಗೆ ಭೂಮಿ ಕೊಡಿ' ಎನ್ನುವ ನಮ್ಮ ಘೋಷಣೆ ಮತೀಯವಾದಿ ರಾಜಕಾರಣಕ್ಕೆ ವಿರುದ್ಧವಾಗಿರುವಂತೆ ನಮ್ಮ ಬದುಕಿನ ಪ್ರಶ್ನೆಗಳನ್ನೂ ಮುಂದಕ್ಕೆ ಒಡ್ಡುತ್ತಿದೆಯಲ್ಲ...

ಹಾಗೆ ನೋಡುವುದಾದರೆ, ಭಾರತದ ಕಮ್ಯುನಿಸ್ಟರೂ ಕಡೆಗಣಿಸಲಾಗದ ತಪ್ಪುಗಳನ್ನು ಮಾಡಿದ್ದಾರೆ. ಅಂಬೇಡ್ಕರ್‌ವಾದಿ ರಾಜಕಾರಣವೂ ಕೆಲವು ತಪ್ಪುಗಳನ್ನು ಮಾಡಿದೆ. ನಾವು ಕಮ್ಯುನಿಸ್ಟರನ್ನು ಅವರ ತಪ್ಪುಗಳಿಗೆ ಟೀಕೆ ಮಾಡೋಣ. ಆದರೆ ಅವರು ನಮ್ಮ ಜೊತೆ ಬರುವುದಾದರೆ ಅವರನ್ನು ತಿರಸ್ಕರಿಸುವ ಮಟ್ಟಕ್ಕೆ ನಾನಂತೂ ಹೋಗುವುದಿಲ್ಲ. ಯಾವುದೇ ಜನಪರ ಚಳವಳಿಗೆ ಅಷ್ಟರಮಟ್ಟಿಗಿನ ಮುಕ್ತ ಮನಸ್ಸು ಇರಬೇಕು. ನಮಗಂತೂ ಇದೆ. 'ದಲಿತರ ಸಮಸ್ಯೆಗಳನ್ನು ಗಂಭೀರವಾಗಿ ಮತ್ತು ನಿರಂತರವಾಗಿ ಕೈಗೆತ್ತಿಕೊಂಡು ಹೋರಾಟ ಮಾಡಿದಾಗ ಮಾತ್ರ ದಲಿತರು ಕಮ್ಯುನಿಸ್ಟರನ್ನು ನಂಬಲು ಶುರುಮಾಡಬಹುದು. ಇದಕ್ಕೆ ಸ್ವಲ್ಪ ಕಾಲ ಹಿಡಿಯಬಹುದು.



* *ಇದೆಲ್ಲ ಸೈದ್ಧಾಂತಿಕವಾಗಿ ಚೆನ್ನಾಗಿಯೇನೋ ಕಾಣುತ್ತಿದೆ. ಆದರೆ ಪ್ರಯೋಗವಾಗಿ ಯಶಸ್ವಿಯಾಗೋದು ಕಷ್ಟ ಅನಿಸುತ್ತೆ. ನಾಯಕತ್ವ ತಮ್ಮ ಕೈಯಲ್ಲಿದ್ದಾಗ ಮಾತ್ರ ಕಮ್ಯುನಿಸ್ಟರು ನಿರಾತಂಕವಾಗಿರುತ್ತಾರೆ ಅಂತ ಇಲ್ಲಿ ಚರಿತ್ರೆ ಹೇಳುತ್ತಿದೆಯಲ್ಲ?*

ಇರಬಹುದು. ಆದರೆ ನಮ್ಮ ವಿಷಯದಲ್ಲಿ ಹಾಗಿಲ್ಲವಲ್ಲ! ಉನಾ ದಲಿತ ದೌರ್ಜನ್ಯ ಹೋರಾಟ ಸಮಿತಿಗೆ ಸಂಬಂಧಪಟ್ಟಂತೆ ಇಲ್ಲಿ ನಾಯಕತ್ವ ನಮ್ಮದೇ, ಕಮ್ಯುನಿಸ್ಟರು ನಮ್ಮ ಜೊತೆಗಿದ್ದಾರೆ ಅಷ್ಟೆ. ನನಗನ್ನಿಸುವುದೇನೆಂದರೆ, ಯಾವುದೇ ಚಳವಳಿಯಿರಲಿ, ಸಾಮಾಜಿಕ ನ್ಯಾಯದ ಪರವಾಗಿ ಬಹಳ ತೀವ್ರವಾದ ಬದ್ಧತೆ ನಮಗಿದ್ದರೆ ಜನ ನಮ್ಮೊಟ್ಟಿಗೆ ಬಂದೇ ಬರುತ್ತಾರೆ. ಅಲ್ಲದೆ ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವ ನಮ್ಮ ಸಾಮರ್ಥ್ಯ, ತಿಳಿವಳಿಕೆ, ನಮಗಿರುವ ಸ್ಪಷ್ಟತೆ, ಚಳವಳಿಗಳನ್ನ ರೂಪಿಸುವ ಕ್ಷಮತೆ ಇವೆಲ್ಲ ಬಹಳ ದೊಡ್ಡ ಪಾತ್ರ ವಹಿಸುತ್ತವೆ.

* *ದಲಿತರು ಮುಸ್ಲಿಮರು ಒಂದಾಗುವುದು ಮುಖ್ಯ ಅಂತ ನೀವು ಪದೇಪದೇ ಹೇಳುತ್ತಿದ್ದೀರಿ. ಅದಷ್ಟು ಸುಲಭವೇ?*

ರಾಜಕಾರಣದಲ್ಲಿ ಅದಷ್ಟು ಸುಲಭವಲ್ಲ ಅಂತ ನಾನೂ ಒಪ್ಪುತ್ತೇನೆ. ಆದರೆ ಸದ್ಯಕ್ಕಂತೂ ಅದೊಂದು ಸಾಧ್ಯತೆಯಾಗಿ ತೋರುತ್ತಿದೆ. 2002ರ ಗುಜರಾತ್ ಗಲಭೆಗಳಲ್ಲಿ ದಲಿತರೂ ಭಾಗಿಗಳಾಗಿದ್ದರು. ಸಂಖ್ಯೆ ತೀರಾ ಕಡಿಮೆ ಇರಬಹುದು, ಆದರೆ ದಲಿತರೂ ಭಾಗವಹಿಸಿದ್ದರು ಅನ್ನೋ ಸಂಗತಿ ಇವತ್ತಿಗೂ ನಮ್ಮನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿದೆ. ದಲಿತರ ಈ ಕೇಸರೀಕರಣವನ್ನೂ ಎದುರಿಸಬೇಕಾದ ಸವಾಲು ಈಗ ನಮ್ಮ ಮುಂದಿದೆ. ಇದನ್ನು ತಡೆಗಟ್ಟಲು ದಲಿತರು ಮುಸ್ಲಿಮರು ಒಂದಾಗುವುದು ಮುಖ್ಯ. ಇದರಲ್ಲೇ ಮುಸ್ಲಿಮರ ಒಳಿತಿದೆ; ದಲಿತರದೂ. ನನಗಿಬ್ಬರು ತಂಗಿಯರಿದ್ದರೆ ನಾನು ಒಬ್ಬಳನ್ನು ವಾಲ್ಮೀಕಿ ಜಾತಿಯವನಿಗೆ, ಇನ್ನೊಬ್ಬಾಕೆಯನ್ನು ಮುಸಲ್ಮಾನನಿಗೆ ಮದುವೆ ಕೊಡುತ್ತಿದ್ದೆ ಅಂತ ನಾನೊಮ್ಮೆ ಹೇಳಿದ್ದೆ. ಅಂತರ್‌ಜಾತೀಯ, ಅಂತರ್‌ಧರ್ಮೀಯ ಮದುವೆಗಳು ದಲಿತರಲ್ಲಿ ಸಾಮಾನ್ಯವಾಗಬೇಕು. ಈಗ ಕಲ್ಪನೆಯಂತೆ ಕಾಣುತ್ತಿರುವುದು ಮುಂದೊಂದು ದಿನ ವಾಸ್ತವವಾಗಬಾರದು ಎಂದೇನಿಲ್ಲವಲ್ಲ?

* *ದಲಿತರು ಸಂಘ ಪರಿವಾರದೊಂದಿಗೆ ಕೈಜೋಡಿಸುತ್ತಿರುವ ವಿದ್ಯಮಾನದ ಬಗ್ಗೆ ಏನು ಹೇಳುತ್ತೀರಾ?*

ಕ್ಷಮಿಸಿ, ಮುಟ್ಠಾಳತನದ ನಡೆಗಳನ್ನು ವಿವರಿಸೋಕೆ ನನಗೆ ಕಷ್ಟವಾಗುತ್ತೆ.

* *ನಿಮ್ಮ ಮುಂದಿನ ಯೋಜನೆಗಳು?*

ಸಂಘ ಪರಿವಾರ ವಿರೋಧಿ ರಾಜಕಾರಣವನ್ನ ಗುಜರಾತಿನಲ್ಲಿ ಬೆಳೆಸುವುದರ ಬಗ್ಗೆ ನಮಗೆ ಸ್ಪಷ್ಟ ನಿಲುವುಗಳಿವೆ. ಗುಜರಾತಿನ ಆಚೆಗೂ ಇದನ್ನ ಒಯ್ಯುವ ಗುರಿ ಇದೆ. ನೋಡಬೇಕು ಏನಾಗುತ್ತೆ ಅಂತ. ಈ ತಿಂಗಳ ಇಪ್ಪತ್ತೇಳಕ್ಕೆ ಗುಜರಾತಿನ ದಲಿತರನ್ನೆಲ್ಲ ದೊಡ್ಡಮಟ್ಟದಲ್ಲಿ ಸೇರಿಸೋಕೆ ಪ್ರಯತ್ನಿಸುತ್ತಿದ್ದೇವೆ. ಹಿಂದುಳಿದವರು, ಆದಿವಾಸಿಗಳು, ಮುಸ್ಲಿಮರು, ರೈತರು, ಕಾರ್ಮಿಕ ಸಂಘಟನೆಗಳು ದಲಿತರ ಜೊತೆಯಲ್ಲಿ ಬಂದರೆ ಸಂಘ ಪರಿವಾರ ಮತ್ತು ಬಿಜೆಪಿಯ ವಿರುದ್ಧ ದೊಡ್ಡ ಮೈತ್ರಿಕೂಟ ರಚನೆಯಾಗಬಹುದು. ಈ ಸಮ್ಮೇಳನದಲ್ಲಿ ಸಾಂಸ್ಕೃತಿಕ ಪ್ರಶ್ನೆಗಳನ್ನು, ಜೊತೆಗೆ ಜನರ ದಿನನಿತ್ಯದ ಬದುಕಿಗೆ, ಅವರ ಜೀವನಾಧಾರಕ್ಕೆ ಪೂರಕವಾದ ಪ್ರಶ್ನೆಗಳನ್ನು ಮುನ್ನೆಲೆಗೆ ತರಲಿದ್ದೇವೆ. ಗುಜರಾತ್ ಮಾದರಿಯ ಪೊಳ್ಳುತನವನ್ನು ಬಯಲಿಗೆಳೆಯಲಿದ್ದೇವೆ. ಅಕ್ಟೋಬರ್ ಒಂದನೇ ತಾರೀಖು, ಭೂರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಐದು ಎಕರೆ ಭೂಮಿಯನ್ನು ನೀಡಬೇಕೆಂಬ ನಮ್ಮ ಬೇಡಿಕೆಯ ಭಾಗವಾಗಿ ನರೇಂದ್ರ ಮೋದಿಯವರ ವಿಧಾನಸಭಾ ಕ್ಷೇತ್ರವಾಗಿದ್ದ ಅಹಮದಾಬಾದ್‌ನ ಮಣಿನಗರ್‌ನಲ್ಲಿ ರೈಲುತಡೆ ಚಳವಳಿಯನ್ನು ಹಮ್ಮಿಕೊಂಡಿದ್ದೇವೆ.

(ಕೃಪೆ: ದಿ ಹಿಂದೂ, 23 ಸೆಪ್ಟೆಂಬರ್ 2016)

ದಲಿತ, ದಮನಿತರ ಜಾಥಾ

04 ⏮

ಇಂತಹ ದಗಲ್ಬಾಜಿತನದ ತಂತ್ರಗಾರಿಕೆ ಹೊರತುಪಡಿಸಿ ಬೇರೆ ಏನನ್ನೂ ಬಿಜೆಪಿಯಿಂದ ನಿರೀಕ್ಷಿಸುವಂತಿಲ್ಲ. ಆದರೆ ಬಿಜೆಪಿಗೆ ಪ್ರಧಾನ ಎದುರಾಳಿಯೂ ರಾಜ್ಯದಲ್ಲಿ ಆಳುವ ಪಕ್ಷವೂ ಆಗಿರುವ ಕಾಂಗ್ರೆಸ್‌ಗೆ ಏನಾಗಿದೆ? ಪ್ರವೀಣ್ ಪೂಜಾರಿಯವರ ಕೊಲೆಗೆ ಕಾರಣವಾಗಿರುವ ಬಿಜೆಪಿಯ ಕೋಮುದ್ವೇಷ ಮತ್ತು ಹಿಂಸೆಯ ರಾಜಕೀಯವನ್ನು ಬಯಲಿಗೆಳೆಯುವುದು ಆ ಪಕ್ಷದ ಮೊದಲ ಕರ್ತವ್ಯವಾಗಿತ್ತು, ಅದಕ್ಕೆ ಬದಲಾಗಿ, ಕಾಂಗ್ರೆಸ್ ಪಕ್ಷ ಕೂಡ ಸಾಂತ್ವನ, ಸಹಾನುಭೂತಿ, ಪರಿಹಾರಧನಗಳ ಬಿಜೆಪಿಯ ಪಲಾಯನವಾದಿ ಮಾರ್ಗವನ್ನೇ ಅನುಸರಿಸುತ್ತಿದೆ. ಪ್ರವೀಣ್ ಪೂಜಾರಿಯವರ ಕೊಲೆಗೆ ಕಾರಣವಾಗಿರುವ ಬಿಜೆಪಿಯ ಹಿಂದೂತ್ವ ಸಿದ್ಧಾಂತದ ವಿರುದ್ಧ ಜನಾಂದೋಲನ ಸಂಘಟಿಸುವುದರ ಬದಲು, ಕಾಂಗ್ರೆಸ್ ಥೇಟು ಬಿಜೆಪಿಯ ಹಾಗೆ ಕೊಲೆಯ ಹಿಂದಿನ ರಾಜಕೀಯವನ್ನು ಜನರಿಂದ ಮರೆಮಾಚುತ್ತಿದೆ. ಉಡುಪಿ ನಗರದ ಉದ್ಯಮಿ ಮತ್ತು ಕೆಂಜಾರಿನ ಪ್ರವೀಣ್ ಪೂಜಾರಿಯವರ ಕೊಲೆಗಳ ನಡುವೆ ಕಾಂಗ್ರೆಸ್ ಪಕ್ಷಕ್ಕೆ ಯಾವ ವ್ಯತ್ಯಾಸವೂ ಕಾಣುವುದಿಲ್ಲವೆ?

ಬಿಜೆಪಿಯ ಹಿಂದೂತ್ವ ರಾಜಕೀಯದ ಹಿಂಸೆ ಮತ್ತು ಕಾಂಗ್ರೆಸ್ ಅನುಸರಿಸುತ್ತಿರುವ ಪಲಾಯನವಾದಿ ಧೋರಣೆಗಳು ಒಟ್ಟಾಗಿ ಜನಸಾಮಾನ್ಯರ ಆಹಾರದ ಆಯ್ಕೆಯ ಹಕ್ಕನ್ನು ಮೊಟಕುಗಳಿಸಿದೆ. ಅದೂ ಸಾಲದ್ದಕ್ಕೆ ಖಾಸಗೀಕರಣದ ಹೆಸರಿನಲ್ಲಿ ಸಾರ್ವಜನಿಕ ಆಸ್ತಿಯನ್ನು ಪರಭಾರೆಗೊಳಿಸುವುದರಲ್ಲಿ ಎರಡೂ ಪಕ್ಷಗಳೂ ಶಾಮೀಲಾಗಿದೆ. ಈ ಪಕ್ಷಗಳ ಮನೆಮುರುಕುತನದಿಂದ ಜನ ರೋಸಿ ಹೋಗಿದ್ದಾರೆ. ಈ ಜನಗಳನ್ನು ಒಟ್ಟು ಸೇರಿಸಿ ರಾಜ್ಯಮಟ್ಟದ ಪ್ರತಿರೋಧವನ್ನು ಸಂಘಟಿಸಲು ದಲಿತ ಸಂಘರ್ಷ ಸಮಿತಿಯ ಹಲವು ಬಣಗಳು, ಕೋಮುಸೌಹಾರ್ದ ವೇದಿಕೆ, ಸಮತಾದಳ, ಎಡಪಕ್ಷಗಳು ಹಾಗೂ ಜನಪರ ಸಂಘಟನೆಗಳು ಮುಂದಾಗಿವೆ. ಈ ಪ್ರತಿರೋಧದ ಮುಖ್ಯ ಕಾರ್ಯಕ್ರಮವಾಗಿ ಅಕ್ಟೋಬರ್ 4 ರಂದು ಬೆಂಗಳೂರಿನಿಂದ ಜಾಥಾ ಹೊರಟು ಅಕ್ಟೋಬರ್ 9 ಭಾನುವಾರದಂದು ಉಡುಪಿಯಲ್ಲಿ ಒಂದು ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ. "ಆಹಾರ ನಮ್ಮ ಆಯ್ಕೆ ಭೂಮಿ ನಮ್ಮ ಹಕ್ಕು" ಎಂದು ಪ್ರತಿಪಾದಿಸಲು ಆಯೋಜಿಸಲಾಗಿರುವ ಈ 'ಉಡುಪಿ ಚಲೋ' ಜಾಥಾಕ್ಕೆ ಮಾದರಿ ಮತ್ತು ಸ್ಫೂರ್ತಿಯಾಗಿರುವುದು ಗುಜರಾತ್‌ನ 'ಚಲೋ ಉನಾ' ಕಾರ್ಯಕ್ರಮ.

ಜುಲೈ 11 ರಂದು ಗುಜರಾತ್‌ನ ಉನಾ ಎಂಬಲ್ಲಿ ಸತ್ತ ಹಸುವಿನ ಚರ್ಮ ಹದ ಮಾಡುವ ಕಾಯಕದಲ್ಲಿ ತೊಡಗಿದ್ದ ದಲಿತರ ಮೇಲೆ ನಡೆದ ಹಿಂಸೆಯ ದೃಶ್ಯಗಳನ್ನು ದೇಶದ ಜನ ಕಂಡಿದ್ದಾರೆ; ಅದರ ಭೀಕರತೆಗೆ ಬೆಚ್ಚಿ ಬಿದ್ದಿದ್ದಾರೆ. ಉನಾದ ದೌರ್ಜನ್ಯದ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಡೆದಿವೆ. ಈ ಪ್ರತಿಭಟನೆಗಳಲ್ಲೆಲ್ಲ ಪ್ರಮುಖವಾಗಿರುವುದು 'ಚಲೋ ಉನಾ' ಜಾಥಾ. ಪ್ರಗತಿಪರ ಸಂಘಟನೆಗಳು, ಎಡಪಕ್ಷಗಳು, ದಲಿತ ಮತ್ತು ಮುಸ್ಲಿಮ್ ಸಮುದಾಯಗಳವರು ಮತ್ತು ಚಿಂತಕರು ಒಟ್ಟಾಗಿ ಆಗಸ್ಟ್ ತಿಂಗಳ ಎರಡನೆಯ ವಾರ ಗುಜರಾತ್‌ನ ರಾಜಧಾನಿ ಅಹ್ಮದಾಬಾದ್‌ನಿಂದ, ಜಾಥಾ ಹೊರಟು ಆಗಸ್ಟ್ 15ರಂದು ಉನಾದಲ್ಲಿ ಒಂದು ಭಾರೀ ಸಮಾವೇಶವನ್ನು ನಡೆಸಿದರು. ಈ ಕಾರ್ಯಕ್ರಮದ ಮುಂಚೂಣಿಯಲ್ಲಿದ್ದ ಗುಜರಾತ್‌ನ ಯುವ ದಲಿತ ನೇತಾರ ಜಿಗ್ನೇಶ್ ಮೇವಾನಿ 'ಚಲೋ ಉಡುಪಿ' ಜಾಥಾದ ಸಮಾರೋಪ ಸಮಾವೇಶದಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದಾರೆ.


'ಆಹಾರ ನಮ್ಮ ಆಯ್ಕೆ ಭೂಮಿ ನಮ್ಮ ಹಕ್ಕು' ಎಂಬ ಧ್ಯೇಯವಾಕ್ಯವನ್ನು ಮುಂದಿಟ್ಟುಕೊಂಡು ಸಂಘಟಿಸಲಾಗುತ್ತಿರುವ 'ಚಲೋ ಉಡುಪಿ' ಜಾಥಾದ ಸಮಾರೋಪ ಸಮಾವೇಶಕ್ಕೆ ಕರ್ನಾಟಕದಲ್ಲಿ ಉಡುಪಿಗಿಂತ ಸೂಕ್ತವಾದ ಸ್ಥಳ ಇನ್ನೊಂದಿಲ್ಲ. ಉಡುಪಿ ಹೇಳಿಕೇಳಿ ಒಂದು ಧಾರ್ಮಿಕ ಕ್ಷೇತ್ರ. ಇಲ್ಲಿನ ಮಠಾಧೀಶರುಗಳಲ್ಲಿ ಹೆಚ್ಚಿನವರು ಗೋಸಂರಕ್ಷಣೆಯ ಹೆಸರಿನಲ್ಲಿ ನಡೆಯುತ್ತಿರುವ ಹಿಂಸೆಗೆ ತಾತ್ವಿಕ ಸಮರ್ಥನೆ ಒದಗಿಸುವುದರ ಜೊತೆಗೆ ಹಿಂದೂತ್ವ ರಾಜಕೀಯದ ಪೋಷಕರೂ ಆಗಿದ್ದಾರೆ. ಸಂಘ ಪರಿವಾರದ ಕಾಲಾಳುಗಳು ನಡೆಸುವ ಹಲ್ಲೆಗಳಲ್ಲಿ ಎದ್ದು ಕಾಣುವ ಹಿಂಸೆ ಇದ್ದರೆ, ಈ ಮಠಾಧೀಶರುಗಳ ಸಂಕಲ್ಪದಲ್ಲೇ ಹಿಂಸೆ ಅಂತರ್ಗತವಾಗಿದೆ. ಉಡುಪಿಯಲ್ಲಿ ವರ್ಣಾಶ್ರಮ ಧರ್ಮದ ಪರಂಪರಾಗತ ಅಸಮಾನತೆಯೊಂದಿಗೆ, ಈಗ ಹಿಂದೂತ್ವದ ಕ್ರೌರ್ಯವೂ ಸೇರಿಕೊಂಡಿದೆ. ಈ ದೇಶದ ಬಹುಸಂಖ್ಯಾತರ ಆಹಾರ ಪದ್ಧತಿಯ ಬಗ್ಗೆ ಉಡುಪಿಯ ಧಾರ್ಮಿಕ ಮುಖಂಡರಿಗೆ ಎಲ್ಲಿಲ್ಲದ ತಿರಸ್ಕಾರ. ಇವರ ಪ್ರಕಾರ ಈ ನಾಡಿನ ಬಹುಜನರ ಮಾಂಸಾಹಾರ ತಾಮಸ; ಗೋಮಾಂಸ ತಿನ್ನುವುದಂತೂ ಮಹಾಪಾಪ. ಇಂತಹ ಜೀವ ವಿರೋಧೀ ವಿಚಾರಗಳಿಂದಾಗಿ ಬಜರಂಗದಳ, ಹಿಂಜಾವೇ ಮುಂತಾದ ಹಿಂದೂತ್ವ ಸಂಘಟನೆಗಳ ಬಡಿಗೆ ವೀರರಿಗೆ ಉಡುಪಿ ಚಿಂತನ ಚಿಲುಮೆ ಎಂಬ ಕುಖ್ಯಾತಿ ಗಳಿಸಿದೆ.

ಶಿಕ್ಷಣ, ಆರೋಗ್ಯ ವಸತಿ ಮುಂತಾದ ಮೂಲಭೂತ ಸೇವೆ, ಸೌಲಭ್ಯಗಳನ್ನು ಈಗ ಸರಕಾರ, ಖಾಸಗಿ ಬಂಡವಾಳಶಾಹಿಗೆ ಒಪ್ಪಿಸುತ್ತಿದೆ. ಉತ್ಪಾದನೆ ಮತ್ತು ಮಾರುಕಟ್ಟೆಗಳಂತೂ ಯಾವತ್ತೋ ಖಾಸಗೀಕರಣಗೊಂಡಿವೆ. ಇದುವರೆಗೆ ತನ್ನ ಒಡೆತನದಲ್ಲಿದ್ದ ಉದ್ಯಮ, ಆಸ್ತಿ ಭೂಮಿ ಮತ್ತು ಭೂಮಿಯ ಅಡಿಯಲ್ಲಿರುವ ಖನಿಜ ಸಂಪತ್ತನ್ನು ಸಹ ಈಗ ಸರಕಾರ ಖಾಸಗಿ ಬಂಡವಾಳಶಾಹಿಗೆ ಒಪ್ಪಿಸುತ್ತಿದೆ. ಖಾಸಗೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಈ ಹಗಲು ದರೋಡೆಗೆ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ಪಕ್ಷಭೇದವೇ ಇಲ್ಲ, ಹಾಗಿರುತ್ತ ಬಡ



ರೈತನಿಗೆ ತಾನು ಸಾಕಿರುವ ಜಾನುವಾರುಗಳನ್ನು ವಿಲೇವಾರಿ ಮಾಡುವ ಸ್ವಾತಂತ್ರ್ಯವಿಲ್ಲವೆ? ಸಾಮಾನ್ಯ ಜನರಿಗೆ ತಾವು ಏನನ್ನು ತಿನ್ನಬಹುದು, ಏನನ್ನು ತಿನ್ನಬಾರದು ಎಂದು ನಿರ್ಧರಿಸುವ ಹಕ್ಕು ಇಲ್ಲವೆ? ಮಠಾಧಿಪತಿಗಳು ಮತ್ತು ಹಿಂದೂತ್ವ ಸಂಘಟನೆಗಳಿಗೆ ಈ ವಿಷಯದಲ್ಲಿ ತಾಕೀತು ಮಾಡಲು ಪರವಾನಗಿ ಕೊಟ್ಟವರು ಯಾರು? ಉಡುಪಿಯ ಪಟ್ಟಭದ್ರರ ಮುಂದೆ ಈ ಸವಾಲುಗಳನ್ನು ಇಡಲೆಂದೇ 'ಉಡುಪಿ ಚಲೋ' ಜಾಥಾ ನಾಡಿನ ಹಲವು ಜಿಲ್ಲೆ ತಾಲೂಕುಗಳನ್ನು ಹಾದು ಬಂದು ಉಡುಪಿಯಲ್ಲಿ ಸಮಾವೇಶ ನಡೆಸುತ್ತಿದೆ.

ಉನಾದಲ್ಲಿ ದಲಿತರ ಮೇಲೆ ಗೋ ಸಂರಕ್ಷಕರು ಹಲ್ಲೆ ಎಸಗಿದ್ದಕ್ಕೆ ಪ್ರತಿಭಟನೆಯಾಗಿ ಗುಜರಾತ್‌ನ ದಲಿತರು, ಸವರ್ಣೀಯರ ಜಾನುವಾರುಗಳ ಶವಗಳನ್ನು ವಿಲೇವಾರಿ ಮಾಡುವ ತಮ್ಮ ವೃತ್ತಿಯನ್ನು ಮುಂದುವರಿಸಲು ನಿರಾಕರಿಸುತ್ತಿದ್ದಾರೆ. ಹಾಗಾಗಿ ಆ ರಾಜ್ಯದ ಜನ ಈಗ ಸತ್ತು ನಾರುತ್ತಿರುವ ಜಾನುವಾರುಗಳ ವಾಸನೆಯನ್ನೇ ಉಸಿರಾಡುತ್ತಿದ್ದಾರೆ. ದಲಿತರ ಈ ಪ್ರತಿಭಟನೆ, ಬೌದ್ಧ ಧರ್ಮ ಸ್ವೀಕರಿಸಿದ ನಂತರ ದಲಿತ ನಾಯಕ ಬಿ.ಆರ್.ಅಂಬೇಡ್ಕರ್ ಮಾಡಿದ ಭಾಷಣವನ್ನು ನೆನಪಿಸುತ್ತದೆ.



1956, ಅಕ್ಟೋಬರ್ 14ರಂದು ಮಹಾರಾಷ್ಟ್ರದ ನಾಗಪುರದಲ್ಲಿ ಅಂಬೇಡ್ಕರ್ ಬೌದ್ಧ ಧರ್ಮದ ದೀಕ್ಷೆ ಪಡೆದರು. ಅದರ ಮರುದಿನ ಆ ಕುರಿತು ಅವರು ಮಾಡಿದ ಭಾಷಣದಲ್ಲಿ ಹಿಂದೂ ಧರ್ಮ ಮತ್ತು ಆಚರಣೆಗಳ ಕುರಿತು ಅತ್ಯಂತ ಮೂಲಭೂತವಾದ ವಿಮರ್ಶೆಯ ಮಾತುಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಿದ್ದಾರೆ.

ತನ್ನ ಭಾಷಣದ ಪ್ರಾರಂಭದಲ್ಲಿಯೇ ಅಂಬೇ[illegible] ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ತಾನು [illegible] ನಾಗಪುರವನ್ನೇ ಆಯ್ದುಕೊಂಡೆ ಎಂಬುದನ್ನು ವಿವರಿಸು[illegible] ನಾಗಪುರ ಆರ್‌ಎಸ್‌ಎಸ್‌ನ ಕೇಂದ್ರವಾಗಿರುವುದೇ [illegible] ಕಾರಣ ಎಂಬ ಮಾತನ್ನು ಅಂಬೇಡ್ಕರ್ ಅಲ್ಲಗಳೆಯುತ್ತ[illegible] ಆದರೆ ತನ್ನ ಭಾಷಣದಲ್ಲಿ ಮುಂದೆ ಅವರು ಹೇ[illegible] ಮಾತುಗಳು ಮಾತ್ರ ಭಾರತೀಯ ಸಂಸ್ಕೃತಿಯ ಹೆಸ[illegible] ಆರ್‌ಎಸ್‌ಎಸ್ ಎತ್ತಿ ಹಿಡಿಯುವ ವೈದಿಕ, ಬ್ರಾ[illegible] ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹವು. ಅಂಬೇ[illegible] ಹೇಳುತ್ತಾರೆ, "ಭಾರತದಲ್ಲಿ ಬೌದ್ಧ ಧರ್ಮ[illegible] ತಮ್ಮದಾಗಿಸಿಕೊಂಡವರಲ್ಲಿ ನಾಗಾ ಆದಿವಾಸಿ[illegible] ಮೊದಲಿಗರು. ನಾಗರು ಆರ್ಯರ ಕಡು ವೈರಿ[illegible] ಆರ್ಯರೊಡನೆ ನಡೆದ ಹಲವು ಯುದ್ಧಗಳ ನ[illegible] ಅಳಿದು ಉಳಿದ ಕಟ್ಟಕಡೆಯ ನಾಗನ ಸಂತತಿಯ[illegible] ನಾವು ದಲಿತರು; ನಾಗಪುರ ನಾಗಾಗಳ ಮ[illegible] ನೆಲೆಯಾಗಿತ್ತು. ಈ ಊರಿಗೆ ನಾಗಪುರ ಎಂಬ ಹೆ[illegible] ಎಂದದ್ದು ಕೂಡ ಆ ಕಾರಣದಿಂದಲೆ....."

ಅಂಬೇಡ್ಕರ್ ತಮ್ಮ ಭಾಷಣದಲ್ಲಿ ತಾನು ನಾಗಪುರ[illegible] ಯಾಕೆ ಬೌದ್ಧನಾದೆ ಎಂದು ವಿವರಿಸುವುದರ ಮೂಲಕ[illegible] ನಾಡಿನ ಅವೈದಿಕ, ಶೂದ್ರ, ಶ್ರಮಣ ಸಂಸ್ಕೃತಿಗಳನ್ನು ಸ್ಮ[illegible] ನೆನಪಿಸುತ್ತಾರೆ. ಮುಂದೆ ತನ್ನ ಭಾಷಣದಲ್ಲಿ ಸವರ್ಣೀ[illegible] ಹಿಂದೂಗಳ ಬಗ್ಗೆ ಹೇಳುತ್ತ "ಅವರು ಜೀವಂತವಿರುವ ಎಮ್[illegible] ಹಾಲು ಕುಡಿಯುವುದು ಮತ್ತು ಸತ್ತಾಗ, ಅವುಗಳ ಶವ[illegible] ನಾವು ನಮ್ಮ ಹೆಗಲ ಮೇಲೆ ಹೊತ್ತು ಸಾಗಿಸುವುದು[illegible] ಇದು ವಿಚಿತ್ರವಲ್ಲವೇ? ಅವರ ತಾಯಂದಿರು ತೀರಿಕೊಂ[illegible] ಮಾತ್ರ ಅವರು ಆ ಶವಗಳನ್ನೂ ಒಯ್ಯಲು ನಮಗೆ [illegible] ಕೊಡುವುದಿಲ್ಲ?" ಅಂಬೇಡ್ಕರ್ ಅವರ ಈ ಸವಾ[illegible] ಇದುವರೆಗೂ ಗೋಮಾತೆಯ ಭಕ್ತರು ಉತ್ತರಿಸಿಲ್ಲ. [illegible] ಉನಾದ ಘಟನೆಯ ನಂತರ ಗುಜರಾತ್‌ನ ದಲಿತರು [illegible] ಈ ಸವಾಲನ್ನು ಸಜೀವಗೊಳಿಸಿದ್ದಾರೆ. ನಾಗಪುರದ[illegible] ಭಾಷಣದಲ್ಲಿ ಮುಂದೆ ಹಿಂದೂ ಧರ್ಮವನ್ನು ತ್ಯಜಿಸುವ[illegible] ನಿರ್ಧಾರದ ಬಗ್ಗೆ ಅಂಬೇಡ್ಕರ್ ಹೀಗೆ ಹೇಳುತ್ತಾರೆ: "[illegible] ಹಿಂದೂವಾಗಿ ಹುಟ್ಟಿದ್ದರೂ ಹಿಂದೂವಾಗಿ ಸಾಯುವ[illegible] ಎಂದು ಬಹಳ ಹಿಂದೆಯೇ ಪ್ರತಿಜ್ಞೆ ಮಾಡಿದ್ದೆ. ಬೌದ್ಧ ಧ[illegible] ದೀಕ್ಷೆ ಪಡೆದು ನಾನು ನನ್ನ ಮಾತನ್ನು ಉಳಿಸಿಕೊಂಡಿ[illegible] ನರಕವೊಂದರಿಂದ ಬಿಡುಗಡೆಯಾಗಿದೆ ಎಂದು ಈಗ [illegible] ಅನ್ನಿಸುತ್ತಿದೆ."

ಆರ್‌ಎಸ್‌ಎಸ್ ಎತ್ತಿ ಹಿಡಿಯುವ ಹಿಂದೂ ಧ[illegible] ಅಂಬೇಡ್ಕರ್ ಅವರಿಗೆ ನರಕದ ಹಾಗೆ ಕಂಡಿತ್ತು. ಹಿಂ[illegible] ಧಾರ್ಮಿಕ ಕ್ಷೇತ್ರವೂ ಹಿಂದೂತ್ವ ರಾಜಕೀಯದ ಭದ್ರ ನೆಲೆ[illegible] ಆಗಿರುವ ಉಡುಪಿ ಆ ಅರ್ಥದಲ್ಲಿ ನರಕ ಸದೃಶವೇ[illegible] ಹಾಗಾಗಿ ಗುಜರಾತ್‌ನ 'ಚಲೋ ಉನಾ' ಜಾಥಾದಿಂದ[illegible] ಅಂಬೇಡ್ಕರ್ ವಿಚಾರಗಳಿಂದಲೂ ಸ್ಫೂರ್ತಿ ಪಡೆದ[illegible] ಕರ್ನಾಟಕದ ದಲಿತ ದಮನಿತರ ಜಾಥಾ ಸಮಾರೋಪಗೊ[illegible] ಉಡುಪಿಯೇ ಅತ್ಯಂತ ಸೂಕ್ತವಾದ ಸ್ಥಳ.

■ ಜಿ. ರಾಜಶೇ[illegible]

ಐಕ್ಯ ಹೋರಾಟ

04 ⏮ ಲ

ಮೇಲಾಗುತ್ತಿರುವ ದೌರ್ಜನ್ಯಗಳ ವಿರುದ್ಧ ಹಮ್ಮಿಕೊಂಡಿರುವ ಹೋರಾಟವೇ 'ಸ್ವಾಭಿಮಾನಿ ಸಂಘರ್ಷ ಜಾಥಾ'. ಈ ಜಾಥಾದ ನೇತೃತ್ವವನ್ನು 'ದಲಿತರ-ದಮನಿತರ ಸ್ವಾಭಿಮಾನ ಹೋರಾಟ ಸಮಿತಿ' ವಹಿಸಿಕೊಂಡಿದೆ. ಭಾಸ್ಕರ್ ಪ್ರಸಾದ್, ಹುಲಿಕುಂಟೆ ಮೂರ್ತಿ, ವಿಕಾಸ್ ಆರ್ ಮೌರ್ಯ, ನಂದಕುಮಾರ್ ಮುಂತಾದ ದಲಿತ ಯುವಕರ ಜೊತೆಗೆ ದಲಿತೇತರರು ಸಕ್ರಿಯವಾಗಿ ಕೈಜೋಡಿಸಿದ್ದಾರೆ.

ಇನ್ನೂ ವಿಶೇಷವೆಂದರೆ ನಾಡಿನ ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆ, ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ಮಹಿಳಾ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಮುಸ್ಲಿಂ ಸಂಘಟನೆಗಳು, ಕ್ರೈಸ್ತ ಸಂಘಟನೆಗಳು, ಹಿಂದುಳಿದ ಜಾತಿಗಳ ಸಂಘಟನೆಗಳು, ಅಲೆಮಾರಿ ಬುಡಕಟ್ಟು ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು ಈ ಜಾಥಾಕ್ಕೆ ತಮ್ಮ ತುಂಬು ಹೃದಯದ ಬೆಂಬಲವನ್ನು ಘೋಷಿಸಿವೆ. ಇದು ನಿಜಕ್ಕೂ ಚಾರಿತ್ರಿಕವಾದ ಸಂಗತಿ ಎನ್ನಬಹುದು. ಏಕೆಂದರೆ ಈ ಮೇಲಿನ ಪ್ರತಿಯೊಂದೂ ಸಂಘಟನೆಗಳೂ ತಮ್ಮ ಮಟ್ಟದಲ್ಲಿ ಸಮಾಜದ ತಾರತಮ್ಯಗಳ ವಿರುದ್ಧ ಹೋರಾಡುತ್ತಲೇ ಬಂದಿವೆ. ಆ ಹೋರಾಟಗಳು ಸಮಾಜಕ್ಕೆ ಒಳಿತನ್ನುಂಟುಮಾಡಿವೆ. ಆದರೆ ಈ ರೀತಿಯ ಸಮಾನ ಮನಸ್ಕ ಸಂಘಟನೆಗಳೆಲ್ಲವೂ ಐಕ್ಯವಾಗುವ ಸಾಧ್ಯತೆಗಳು ಅಸಾಧ್ಯವೆಂದೇ ಹೇಳಲಾಗುತ್ತಿದ್ದ ದಿನಗಳಲ್ಲಿ 'ಸ್ವಾಭಿಮಾನಿ ಸಂಘರ್ಷ ಜಾಥಾ'ಕ್ಕೆ ಒಗ್ಗಟ್ಟಿನಲ್ಲಿ ಕೈಜೋಡಿಸಿರುವುದು ಮಾನವ ಪರ ಚಳವಳಿಗೆ ಹೊಸ ಬೆಳಕನ್ನು ನೀಡಿದೆ.

ಕರ್ನಾಟಕದಲ್ಲಿಯೂ ಕಂಬಾಲಪಲ್ಲಿ, ನಾಗಲಾಪಲ್ಲಿಯಿಂದ ಹಿಡಿದು ಸಂತೇಮರಳ್ಳಿಯವರೆಗೆ ದಲಿತರ ನರಮೇಧಗಳಿಗೆ ನ್ಯಾಯ ಮರೀಚಿಕೆಯಾಗಿಯೇ ಉಳಿದಿದೆ. ಇತ್ತೀಚೆಗೆ ದನದ ನೆಪವೊಡ್ಡಿ ಗೋರಕ್ಷಕರು ಕೊಪ್ಪದ ಜಯಪುರದಲ್ಲಿ ದಲಿತ ಕುಟುಂಬಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದವು. ಪ್ರವೀಣ್ ಪೂಜಾರಿ ಎಂಬ ಬಿಲ್ಲವ ಯುವ ಮುಖಂಡನನ್ನು ಗೋರಕ್ಷಣೆ ನೆಪದಲ್ಲಿ ಹಿಂದೂತ್ವ ಶಕ್ತಿಗಳು ಅಮಾನವೀಯವಾಗಿ ಥಳಿಸಿ ಹತ್ಯೆ ಮಾಡಿದ್ದವು. ಹೀಗೆ ಕರಾವಳಿ ಭಾಗದಲ್ಲಿ ದಲಿತರ ಮೇಲೆ, ಹಿಂದುಳಿದವರ ಮೇಲೆ ಮತ್ತು ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ಗೋ ರಕ್ಷಕರಿಂದ ದೌರ್ಜನ್ಯ ನಡೆಯುತ್ತಿದೆ. ಇದನ್ನು ತಡೆಗಟ್ಟಲು ವಿಶೇಷ ಕಾಯ್ದೆಯ ಅಗತ್ಯವಿದೆ. ಆದ್ದರಿಂದ 'ಸ್ವಾಭಿಮಾನಿ ಸಂಘರ್ಷ ಜಾಥಾ' 'ಆಹಾರ ನಮ್ಮ ಆಯ್ಕೆ, ಭೂಮಿ ನಮ್ಮ ಹಕ್ಕು' ಎಂಬ ಘೋಷಣೆಯೊಂದಿಗೆ ಬೆಂಗಳೂರಿನಿಂದ ಉಡುಪಿಯವರೆಗೂ 'ದಲಿತರ-ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ' ವಾಹನ ಜಾಥಾ ಹಮ್ಮಿಕೊಂಡಿದೆ. ಫ್ಯಾಸಿಸ್ಟ್ ಶಕ್ತಿಗಳನ್ನು ವಿರೋಧಿಸಿ ದಲಿತ-ದಮನಿತರ ಘನತೆಯನ್ನು ಎತ್ತಿಹಿಡಿಯುವುದು ಈ ಜಾಥಾದ ಪ್ರಮುಖ ಉದ್ದೇಶವಾಗಿದೆ. ಅದಲ್ಲದೆ ಈ ಜಾಥಾ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

- ದಲಿತರು ಮತ್ತು ಇತರೆ ದಮನಿತ ಸಮುದಾಯಗಳಿಗೆ ಸರ್ಕಾರ 5 ಎಕರೆ ಜಮೀನು ನೀಡಬೇಕು.



- ಮಲ ಹೊರುವ ಪದ್ಧತಿ ಸಂಪೂರ್ಣ ನಿಷೇಧಗೊಳ್ಳಬೇಕು. [illegible] ವೃತ್ತಿಯಲ್ಲಿರುವವರಿಗೆ ಸರ್ಕಾರ ಪರ್ಯಾಯ ಉದ್ಯೋಗ ವ್ಯವಸ್ಥೆ[illegible] ಮಾಡಬೇಕು.
- ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಕಾನೂ[illegible] ಇನ್ನೂ ಬಿಗಿಗೊಳಿಸಬೇಕು. ದಲಿತ ಪರ ಸಾಕ್ಷಿಗಳಿಗೆ ರಕ್ಷಣೆ ನೀಡಬ[illegible] ವಿಶೇಷ ನ್ಯಾಯಾಲಯಗಳನ್ನು ಹೆಚ್ಚಿಸಿ ವಿಚಾರಣೆಯನ್ನು ತ್ವ[illegible] ಪೂರ್ಣಗೊಳಿಸಬೇಕು.
- ಮಹಿಳೆಯರ ಮೇಲಿನ ಅತ್ಯಾಚಾರ-ದೌರ್ಜನ್ಯಗಳಿಗೆ ಕಠಿಣ [illegible] ಖಾತ್ರಿಗೊಳಿಸುವ ಕ್ರಮಗಳಾಗಬೇಕು. ದೇವದಾಸಿ ಪದ್ಧತಿಯನ್ನು ಸಂಪ[illegible] ನಾಶ ಮಾಡಲು ತ್ವರಿತಗತಿಯಲ್ಲಿ ಸರ್ಕಾರ ಮುಂದಾಗಬೇಕು.

ಹೀಗೆ ಹಲವು ಬೇಡಿಕೆಗಳನ್ನು ಸ್ವಾಭಿಮಾನಿ ಸಂಘರ್ಷ [illegible] ತನ್ನೊಡಲಿನಲ್ಲಿಟ್ಟುಕೊಂಡಿದ್ದು ಇವುಗಳ ಜಾರಿಗೆ ಪ್ರಾಮಾಣಿಕ ಹೋ[illegible] ಮಾಡುತ್ತದೆ.

'ಉಡುಪಿ ಚಲೋ' ಮೊದಲ ಹಂತದ ಕಾರ್ಯಕ್ರಮವಾಗಿದ್ದು, ಎ[illegible] ಹಂತದಲ್ಲಿ ಪ್ರತಿ ಜಿಲ್ಲೆಯನ್ನೂ ಕೇಂದ್ರವಾಗಿಟ್ಟುಕೊಂಡು ಕಾರ್ಯ[illegible] ರೂಪಿಸುತ್ತದೆ. ಮೂರನೇ ಹಂತಕ್ಕೆ ಬೆಂಗಳೂರಿನಲ್ಲಿ ಒಂದು 'ಮಹಾಸಮ[illegible] ನಡೆಸಲು ಉದ್ದೇಶಿಸಿದೆ.

ಒಟ್ಟಾರೆ ಧರ್ಮ, ದನ, ಜಾತಿಯ ಹೆಸರಿನಲ್ಲಿ ಮನುಷ್ಯ ಮತ್ತು ಮ[illegible] ನಡುವೆ ದ್ವೇಷ ಬಿತ್ತುವ ಕಾಯಕವನ್ನೇ ತಮ್ಮದಾಗಿಸಿಕೊಂಡಿರುವ ಶಕ್ತಿಗಳ ವಿರುದ್ಧ ಅಸಮಾಧಾನವನ್ನು ಜನತೆ ತನ್ನೊಡಲಿನಲ್ಲಿ ಇರಿಸಿಕೊಂ[illegible] ಅದನ್ನು ಹೊರಹಾಕಲು ಸರಿಯಾದ ಐಕ್ಯ ವೇದಿಕೆ ಬೇಕಾಗಿತ್ತು. [illegible] 'ಸ್ವಾಭಿಮಾನಿ ಸಂಘರ್ಷ ಜಾಥಾ' ಆ ಕೊರತೆ ನೀಗಿಸಿದೆ [illegible] ಹೇಳಬಹುದಾಗಿದೆ.


ಉನಾ ಮಾದರಿಯಿಂದ ಪ್ರೇರಿತಗೊಂಡಿರುವ ಈ ಜಾಥಾ [illegible] ದಲಿತರ ಸಮಸ್ಯೆಗಳಿಗೆ ಸೀಮಿತವಾಗದೆ ಎಲ್ಲಾ ದಮನಿತರ ಮತ್ತು ಮಹಿ[illegible] ಸಮಸ್ಯೆಗಳನ್ನು ಪ್ರಶ್ನಿಸುವತ್ತ ಹೆಜ್ಜೆ ಹಾಕಿದೆ. ಪ್ರಜಾಪ್ರಭುತ್ವದಲ್ಲಿ ಮತ್ತು ಭಾ[illegible] ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವವರೆಲ್ಲರೂ ಇದರಲ್ಲಿ ಪಾಲ್ಗೊ[illegible] ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡಬೇಕಾದ ಜವಾ[illegible] ಪ್ರಜ್ಞಾವಂತರ ಮೇಲಿದೆ.

ಮರಣ ಮೃದಂಗ

ನನ್ನ ತಮಟೆ ಹರಿದುಹೋಗಿದೆ
ಎದೆಯಗಲ ಚರ್ಮ ಬೇಕಾಗಿದೆ
ದನದ್ದು....
ಜುಂಗು ಕಿತ್ತು ರಂಪಿಗೆ ಆಡಿಸಿ
ಅಡಗಲ್ಲಿನಲ್ಲಿ
ತಟ್ಟಿ ಹದ ಮಾಡಿ
ಹದಿನಾರು ಎಳೆ ಬಿಗಿದು
ಎಳೆ ಬಿಸಿಲಿಗಿಡಿದು
ಬಾರಿಸಬೇಕಿದೆ.

ರಣಬಾಜಿ, ಹುಲಿ ಹೊಡೆತ
ಎರಡೇಟು...
ನೋವು ನೀಗಿಸಿಕೊಳ್ಳಬೇಕಿದೆ
ಶತಮಾನಗಳದ್ದು

ಸತ್ತ ದನವೊಂದಿದ್ದರೆ
ಕೊಟ್ಟು ಬಿಡಿ
ನನ್ನ ತಮಟೆ ಹರಿದುಹೋಗಿದೆ.



ಮುತ್ತಾತ ಮೆಚ್ಚಿ ಬಾರಿಸಿದ ತಮಟೆ
ತಾತ ತಲೆ ಎತ್ತಿ ಬಡಿದ ತಮಟೆ
ಅಪ್ಪ ಕುಣಿ ಕುಣಿದು ಅಬ್ಬರಿಸಿದ ತಮಟೆ
ಸಾವಿನ ಸೂತಕಕೂ
ದೇವರ ಒಡ್ಡೋಲಗಕೂ
ಒಪ್ಪುಳ್ಳ ತಮಟೆ

ಸತ್ತ ದನವೊಂದಿದ್ದರೆ ಕೊಡಿ
ತಮಟೆ ಬಿಗಿಯಬೇಕಿದೆ
ನಿಮ್ಮ ಮೆರವಣಿಗೆಗೆ!!!

ದೇವರು
ನಡು ನಡುರಸ್ತೆಯಲ್ಲಿ ನಿಂತಿದ್ದಾನೆ
ಹೆಣವೊಂದು ಚಟ್ಟ ಏರಲೊಲ್ಲುತ್ತಿಲ್ಲ
ಸಂಪ್ರದಾಯ ಮುಕಾ ದೀತು
ಹೆಣಕೆ ಮೋಕ್ಷವಿಲ್ಲ
ದೇವರಿಗೆ ಸುಖವಿಲ್ಲ

ದಯಮಾಡಿ
ಸತ್ತ ದನವೊಂದಿದ್ದರೆ ಕೊಡಿ
ನನ್ನ ತಮಟೆ ಹರಿದುಹೋಗಿದೆ
ಎದೆಯಗಲ ಚರ್ಮ ಬೇಕಾಗಿದೆ..

ಮಕ್ಕಳು ಹಸಿದಿದ್ದಾರೆ
ನೀರುಣಿಸಿ ಇವತ್ತೂ
ಮಲಗಿಸಬೇಕಿದೆ

[illegible]
ತಮಟೆ ಬಾರಿಸಿ

ಸತ್ತ ದನವೊಂದಿದ್ದರೆ ಕೊಡಿ
ತಮಟೆ ಬಿಗಿಯಬೇಕಿದೆ
ಮಕ್ಕಳಿಗಾಗಿ

ನನ್ನವರನ್ನು ಕಟ್ಟಿ ಹೊಡೆಯಲಾಗುತ್ತಿದೆ
ಜೀವಂತ ಸುಟ್ಟು ಕೊಲ್ಲಲಾಗುತ್ತಿದೆ
ತಿಂದುಂಡು ತೇವಲು ತೀರಿಸಿಕೊಳ್ಳಲಾಗುತ್ತಿದೆ
ಅವರನ್ನೆಲ್ಲಾ ನೇಣುಗಂಬಕೆ
ರಥಬೀದಿಯಲ್ಲಿ
ಮೆರವಣಿಗೆ ಕರೆದೊಯ್ಯಬೇಕಿದೆ

ಸತ್ತ ದನವೊಂದಿದ್ದರೆ ಕೊಡಿ
ಎದೆಯಗಲ ಚರ್ಮ ಬೇಕಿದೆ
ಎಂದೂ ಹರಿಯದ
ರಣಬಾಜಿ ಗಡಚಿಕ್ಕುವಂತೆ
ತಮಟೆ ಬಿಗಿಯಬೇಕಿದೆ.

■ ಎನ್.ರವಿಕುಮಾರ್, ಶಿವಮೊಗ್ಗ

ಸ್ವಾಭಿಮಾನದ ನಡೆ

ಉಡುಪಿ ಚರಿತ್ರೆ ಬರೆಯಲಿ
ಇದರ ನೆನಪು ಹೆಜ್ಜೆಹಜ್ಜೆಗೂ ಬರಲಿ
ಚಲೋ ಚಲೋ ಉಡುಪಿ

ಹೆದ್ದಾರಿಯೊಳಗೆ ಎಲ್ಲವ ನುಗ್ಗಿ ನಡೆಯಲಿ
ಬೆಂಕಿಯ ಬೇಧಿಸಿ ಹೊರಡಲಿ
ಚಲೋ ಚಲೋ ಉಡುಪಿ

ಪರಂಪರೆಯ ದಾಳಿಯ ಧ್ವಂಸವ ಮಾಡುತ
ಮಿಂಚಿನ ವೇಗದಲಿ ಹೊರಡಲಿ
ಚಲೋ ಚಲೋ ಉಡುಪಿ

ಧರ್ಮವ ಕಿತ್ತು ಗಡಿಯ ಮೆಟ್ಟಿ
ಎಲ್ಲರೂ ಒಂದೇ ಪಥದಲಿ ಸಾಗಲಿ
ಚಲೋ ಚಲೋ ಉಡುಪಿ

ಭೋರ್ಗರೆವ ಜಲಪಾತದಂತೆ
ಹದ್ದಿನ ಕಣ್ನೋಟದಂತೆ
ಚಲೋ ಚಲೋ ಉಡುಪಿ

ದಮನಿತರ ಶಕ್ತಿ ಧರೆಯೊಳಗೆ ಬೆಳಗಲಿ
ದೊರೆಯೊಳಗೆ ನಡುಕ ಹುಟ್ಟಲಿ
ಚಲೋ ಚಲೋ ಉಡುಪಿ

ಬಿತ್ತಬೇಕಿದೆ ತಿನ್ನಬೇಕಿದೆ
ಬಯಸಿ ಅರಸೀ ಅರಸೀ
ಚಲೋ ಚಲೋ ಉಡುಪಿ

ದಲಿತ ಸೂರ್ಯನ ರಶ್ಮಿ
ಮನೆ ಮನೆ ಬೆಳಗಲಿ ಮನವ ತಟ್ಟಲಿ
ಚಲೋ ಚಲೋ ಉಡುಪಿ


ಸ್ವಾಭಿಮಾನದ ಪಂಜು ಹಿಡಿಯುತ
ಸಾಲುಸಾಲು ಸಾಗಿಬರಲಿ
ಚಲೋ ಚಲೋ ಉಡುಪಿ

ಮನುವಿನ ಮದ್ದುಕಿತ್ತೊಗೆಯೋಣ
ಮುಗಿಲ ಅಗಲಕೆ ಕೀರ್ತಿಯ ಪಸರಿಸೋಣ
ಚಲೋ ಚಲೋ ಉಡುಪಿ

ಮೂಲಭೂತವಾದಿಗಳ
ಮೂಲೆಗೆತಳ್ಳುತ್ತ ಮುನ್ನಡೆ
ಚಲೋ ಚಲೋ ಉಡುಪಿ

■ ಮಲ್ಲಿಕಾರ್ಜುನ ಕೋರವರ್
ಪತ್ರಿಕೋದ್ಯಮ ವಿದ್ಯಾರ್ಥಿ
ಬದುಕು ಕಮ್ಯೂನಿಟಿ ಕಾಲೇಜು, ಬೆಂಗಳೂರು

ಉಡುಪಿಯಲ್ಲಿ ನೀಲಿ ಪರ್ಯಾಯ



ಉಡುಪಿಯಲ್ಲಿ ಮತ್ತೆ ಪರ್ಯಾಯ
ಉಡುಪಿನಲ್ಲಿ ನೀಲಿ ಪರ್ಯಾಯ

ಕೇಸರಿ ಬಾವುಟಕೆ ..
ನೀಲಿ ಬಾವುಟ ಪರ್ಯಾಯ

ಕೋಮುವಾದಕೆ.....
ಮಾನವತಾವಾದ ಪರ್ಯಾಯ

ಮನುವಾದಿಗಳಿಗೆ.,...
ಅಂಬೇಡ್ಕರ್ ವಾದಿಗಳ ಪರ್ಯಾಯ

ಗಂಟೆ ಜಾಗಟೆಗೆ......
ಸಿಡಿಲ ತಮಟೆ ಪರ್ಯಾಯ

ಲದ್ದಿ ಜೀವಿಗಳಿಗೆ.....
ಬುದ್ಧಿಜೀವಿಗಳು ಪರ್ಯಾಯ

(ಅ)ಶುದ್ಧ ಸಸ್ಯಾಹಾರಕೆ ....
ಶುದ್ಧ ಮಾಂಸಾಹಾರ ಪರ್ಯಾಯ

ಹೊಡಿ ಬಡಿ ಸಂಸ್ಕೃತಿಗೆ...
ಪ್ರೀತಿ ಕೊಡೋ ಸಂಸ್ಕೃತಿ ಪರ್ಯಾಯ

ಗೋವಿನ ಹಾಡಿಗೆ....
ನೋವಿನ ಹಾಡು ಪರ್ಯಾಯ

ವಿಕಾರ ಸಮಾವೇಶಕೆ .....
ಸ್ವೀಕಾರ ಸಮಾವೇಶ ಪರ್ಯಾಯ

ಮೂಢನಂಬಿಕೆಗಳಿಗೆ.....
ವೈಚಾರಿಕ ಅರಿವು ಪರ್ಯಾಯ

ದೇವ ಘೋಷಣೆಗೆ....
ಜೈ ಭೀಮ್ ಘೋಷಣೆ ಪರ್ಯಾಯ

ದನದ ದೇಶಪ್ರೇಮಿಗಳಿಗೆ...
ಮನದ ದೇಶ ಪ್ರೇಮಿಗಳು ಪರ್ಯಾಯ

ಚಲೋ ಉಡುಪಿಗೆ...
ನೀಲಿ ಪರ್ಯಾಯಕೆ ...!!

■ ವರದ

ಚಲೋ ಉಡುಪಿ ಜಾಥಾ ಕಾರ್ಯಕ್ರಮದ ವಿವರಗಳು

4 ಅಕ್ಟೋಬರ್ 2016, ಮಂಗಳವಾರ

ಬೆಳಗ್ಗೆ 11: ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜಾಥಾ ಉದ್ಘಾಟನೆ.
ಸಂಜೆ 5: ನೆಲಮಂಗಲದಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ರಾತ್ರಿ ವಾಸ್ತವ್ಯ ನೆಲಮಂಗಲ

5 ಅಕ್ಟೋಬರ್ 2016, ಬುಧವಾರ

ಬೆಳಗ್ಗೆ 10: ಕುಣಿಗಲ್‌ನಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ಸಂಜೆ 4: ಚನ್ನರಾಯಪಟ್ಟಣದಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ರಾತ್ರಿ ವಾಸ್ತವ್ಯ ಹೊಳೆನರಸೀಪುರ

6 ಅಕ್ಟೋಬರ್ 2016, ಗುರುವಾರ

ಬೆಳಗ್ಗೆ 10: ಹೊಳೆನರಸೀಪುರದಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ಸಂಜೆ 4: ಹಾಸನದಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ರಾತ್ರಿ ವಾಸ್ತವ್ಯ ಬೇಲೂರು

7 ಅಕ್ಟೋಬರ್ 2016, ಶುಕ್ರವಾರ

ಬೆಳಗ್ಗೆ 11: ಬೇಲೂರಿನಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ಸಂಜೆ 4: ಚಿಕ್ಕಮಗಳೂರಿನಲ್ಲಿ ಬಹಿರಂಗ ಸಭೆ ಮತ್ತು ನಾಟಕ ಪ್ರದರ್ಶನ.
ರಾತ್ರಿ ವಾಸ್ತವ್ಯ ಕೊಪ್ಪ

8 ಅಕ್ಟೋಬರ್ 2016, ಶನಿವಾರ

ಬೆಳಗ್ಗೆ 11: ಕೊಪ್ಪದಲ್ಲಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ.
ರಾತ್ರಿ ವಾಸ್ತವ್ಯ ಉಡುಪಿಯಲ್ಲಿ


9 ಅಕ್ಟೋಬರ್ 2016, ಭಾನುವಾರ

ಬೆಳಗ್ಗೆ 11: ಉಡುಪಿಯಲ್ಲಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ.


(ಇತರೆ ವಿವರಗಳು: ಮುಂದಿನ ವಾರ)

ಹೊಸದುರ್ಗ


ಗೋವಿಂದಪ್ಪನ ಹಟ್ಟಿಗೆ ‘ಗೂಳಿ’ಯಾಗಲಿದ್ದಾನಾ ಯಡ್ಡಿ ಪುತ್ರ?




ಗೋವಿಂದಪ್ಪ



ಗೂಳಿಹಟ್ಟಿ ಶೇಖರ್



ವಿಜಯೇಂದ್ರ



2018ರ ಚುನಾವಣೆಯ ಕಾವು ರಾಜ್ಯದಲ್ಲಿ ಸಣ್ಣಗೆ ಬಿಸಿ ಮುಟ್ಟಿಸಲು ಶುರು ಮಾಡಿದೆ. ಇಷ್ಟುದಿನ ಕಳೆದುಹೋಗಿದ್ದ ಖಾದಿ ಮುಖಗಳೆಲ್ಲ ಈಗೀಗ ಜನಾನುರಾಗಿ ಗೆಟಪ್ಪಿನಲ್ಲಿ ರಾರಾಜಿಸುತ್ತಿವೆ. ಇತ್ತ ಹೊಸದುರ್ಗದಲ್ಲೂ ಅಂತಹ ಬದಲಾವಣೆಯನ್ನು ಕಾಣಬಹುದು. ಆದಾಗ್ಯೂ ಸದ್ಯದ ಮಟ್ಟಿಗಂತೂ ಇಲ್ಲಿ ಶಾಸಕ ಗೋವಿಂದಪ್ಪನದೇ ಹವಾ ಇದೆ. ಹಾಳೂರಿಗೆ ಉಳಿದವನೇ ಗೌಡ ಎನ್ನುವಂತೆ ಬರಲಿರುವ 2018ರ ಚುನಾವಣೆಯಲ್ಲಿ ಗೋವಿಂದಪ್ಪನ ಹೆಸರೊಂದೇ ಚಾಲ್ತಿಯಲ್ಲಿರುವುದು. 2008ರಲ್ಲಿ ಆಕಸ್ಮಿಕ ಪಕ್ಷೇತರ ಶಾಸಕನಾಗಿ ಯಡ್ಡಿಯ ಕೃಪಾಶೀರ್ವಾದದಿಂದ ಆಟದ ಮಂತ್ರಿಯೂ ಆಗಿ ಒಂದಷ್ಟು ತಿಂಗಳು ಮಿರಿಮಿರಿ ಮಿಂಚಿ ಕೊನೆಗೆ ವಿಧಾನಸೌಧದಲ್ಲಿ ಅಂಗಿ ಆರಕೊಂಡ ಕಮಂಗಿಯಾಗಿದ್ದ ಗೂಳಿಹಟ್ಟಿಯೂ ಈ ಬಾರಿ ಸದ್ದು ಮಾಡುತ್ತಿಲ್ಲ ಅನ್ನೋದೆ ವಿಶೇಷ. ಇನ್ನು 2008, 2013ರಲ್ಲಿ ಎರಡು ಬಾರಿ ಯಡ್ಡಿ ಜಾತ್ಯಸ್ಥನೆಂಬ ಕಾರಣಕ್ಕೆ ಬಿಜೆಪಿ ಟಿಕೆಟು ಗಿಟ್ಟಿಸಿಕೊಂಡು 2008ರಲ್ಲಿ ಗೂಳಿಯಿಂದ ಗುಮ್ಮಿಸಿಕೊಂಡು, 2013ರಲ್ಲಿ ಗೋವಿಂದಪ್ಪನಿಂದ ನಾಮ ತೀಡಿಸಿಕೊಂಡ ಲಿಂಗಮೂರ್ತಿ ಎಂಬ ಲಿಂಗವಂತನ ಫೇಸು ಇವತ್ತಿಗೂ ಕಾಣೆಯಾದವರ ಪಟ್ಟಿಯಲ್ಲೇ ಇದೆ.

ಇತ್ತೀಚಿನ ಹೊಸದುರ್ಗ ರಾಜಕಾರಣದಲ್ಲಿ ಗೂಳಿಹಟ್ಟಿಯದೇ ಒಂದು ಖದರ್ರು. ಇಲ್ಲಿ ಬಾಲ್ಯ ಸವೆಸಿ ಬೆಂಗಳೂರು ಸೇರಿಕೊಂಡಿದ್ದ ಗೂಳಿ ಜೆಡಿಎಸ್‌ನ ವೈ.ಎಸ್.ವಿ. ದತ್ತಾ ಮೇಷ್ಟ್ರ ಶಿಷ್ಯತ್ವ ಸ್ವೀಕರಿಸಿ ಒಂದಷ್ಟು ಪಾಠ ಕಲಿತರೂ ಪೊಲಿಟಿಕ್ಸ್‌ನ ಅಸಲೀ ಪಟ್ಟುಗಳನ್ನು ಕರಗತ ಮಾಡಿಕೊಳ್ಳುವ ಮೊದಲೇ ಅಡ್ನಾಡಿ ರಾಜಕಾರಣಿ ಯಾಗಿ ಹೊಸದುರ್ಗಕ್ಕೆ ವಕ್ಕರಿಸಿಕೊಂಡಿದ್ದ. ಬರುವಾಗಲೇ ಭರ್ಜರಿ ಹವಾ ಬೀಸುತ್ತಲೇ ಬಂದುಬಿಟ್ಟ. ಹಣದ ಹೊಳೆ ಹರಿಸಿದ, ಬೋರು ಕೊರೆಸಿದ, ಬಡವರ ಮನೆಯ ಮಗಳ ಮದುವೆ, ತಿಥಿ, ಮಕ್ಕಳ ಆಟ, ಊರಮ್ಮನ ಜಾತ್ರೆ, ದೇವರ ಕಳಸ, ಅದ್ಯಾವುದೋ ದೇವರಿಗೆ ಬೆಳ್ಳಿ ಮುಖ, ಕೈಕಾಲು ಅಂತಾ ಅವನು ಬೀಸಿದ ಭರ್ಜರಿ ಹವಾಕ್ಕೆ ಹೊಸದುರ್ಗಕ್ಕೆ ಹೊಸದುರ್ಗವೇ ಮರುಳಾಗಿಹೋಗಿತ್ತು. 2008ರ ವಿಧಾನಸಭಾ ಚುನಾವಣೆಯಲ್ಲಿ ಕೈ ಪಾರ್ಟಿಯ ಗೋವಿಂದು, ಬಿಜೆಪಿಯ ಲಿಂಗು ಸೋತು ಗೂಳಿ ಎದುರು ಧೂಳೀಪಟವಾಗಿ ಹೋದರು. ಗೂಳಿಹಟ್ಟಿಗೆ ಅದೆಲ್ಲಿಂದ ರೊಕ್ಕ ಬಂತು ಅನ್ನೋದು ಈಗಲೂ ಚಿದಂಬರ ರಹಸ್ಯ. ಅದೇನೋ ಗಣಿದಂಧೆ, ಊಟಿ ಬಳಿ ರಬ್ಬರ್ ತೋಟ, ಬೆಂಗಳೂರಿನ ಗಂಡಸತ್ತ ಶ್ರೀಮಂತ ಮಾರ್ವಾಡಿ ಹೆಂಗಸಿನ ಗೆಳೆತನ ಅಂತೆಲ್ಲಾ ಕ್ಷೇತ್ರದ ತುಂಬಾ ಗೂಳಿಹಟ್ಟಿ ಬಗ್ಗೆ ರೂಮರುಗಳೇ ರಂಜನೆ ನೀಡಿದವಾದರೂ ಅವ್ಯಾವ ವರ್ತಮಾನಗಳೂ ಇದುವರೆಗೂ ಸತ್ಯ ಅಂತ ನಿಕ್ಕಿಯಾಗಿಲ್ಲ, ಗೂಳಿ ತಾನು ಹರಿಸಿದ ಅಷ್ಟೂ ರೊಕ್ಕದ ಮೂಲ ಮಾತ್ರ ಇದುವರೆಗೂ ಯಾರಿಗೂ ಗುಟ್ಟುಬಿಟ್ಟುಕೊಟ್ಟಿಲ್ಲ. ಅದೇನೇ ಇರಲಿ, ಐದು ವರ್ಷ ಹೊಸದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಿಗೆ ಪರಮಾಪ್ತನಂತೆ ಅವತರಿಸಿದ್ದ. ಆದರೆ 2013ರ ಚುನಾವಣೆಯ ವೇಳೆಗೆ ಗೂಳಿಯೂ ಸುಸ್ತು ಹೊಡೆದಿದ್ದ. ಅಷ್ಟೊತ್ತಿಗಾಗಲೇ ಬಿಜೆಪಿ ನಂಬಿ, ಕೆಟ್ಟು ಅಂಗಿ ಹರಿದುಕೊಳ್ಳುವಷ್ಟು ಬಿಕಾರಿಯಾಗಿದ್ದ ಗೂಳಿ ಕೈ ಮುಗಿದು ಸಿಂಪತಿ ಗಿಟ್ಟಿಸಲೋಗಿ ಮಕಾಡೆ ಮಲಗಿದ. ಕೈ ಪಾರ್ಟಿಯ ಗೋವಿಂದಪ್ಪ ಎದ್ದು ಬಂದ.

ಹಾಗೆ ನೋಡಿದರೆ ಗೋವಿಂದಪ್ಪ ಹೊಸದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾದವನು. ಹೊಸದುರ್ಗದಿಂದ 20 ಕಿಲೋ ಮೀಟರುಗಳ ದೂರದ ಬೆಲಗೂರು ಗ್ರಾಮದ ಗೋವಿಂದಪ್ಪ ಪ್ರಾಮಾಣಿಕ ಮನುಷ್ಯ ಅಂತ ಜನ ನಂಬುತ್ತಾರೆ. ಗೋವಿಂದಪ್ಪನ ತಂದೆ ಗಾಳಪ್ಪ 1987ರಲ್ಲೇ ಬೆಲಗೂರು ಮಂಡಲ ಪಂಚಾಯ್ತಿ ಸದಸ್ಯರಾಗಿ, ಅಧ್ಯಕ್ಷರಾಗಿ ಆಯ್ಕೆಯಾಗಿದ್ದವರು. ರಾಜಕಾರಣಿಯಾಗಿ ಈಗಲೂ ಬೆಲಗೂರಿನಲ್ಲಿ ತಕ್ಕಮಟ್ಟಿನ ಹೆಸರು ಗಳಿಸಿಕೊಂಡವರು. ಮಂಡಲ ಪಂಚಾಯ್ತಿಯನ್ನು 1987ರಲ್ಲೇ ಮಾದರಿಯ ಪಂಚಾಯ್ತಿಯಾಗಿಸಿದವರು. ಅಲ್ಲಿಂದಲೇ ಕುರುಬರ ಗಾಳಪ್ಪ ಹೊಸದುರ್ಗ ತಾಲ್ಲೂಕಿನಲ್ಲಿ ರಾಜಕೀಯ ಗಾಂಭೀರ್ಯ ಉಳಿಸಿಕೊಂಡರು. ಅಪ್ಪನ ರಾಜಕೀಯ ಹೆಜ್ಜೆ ಗುರುತಲ್ಲೇ ಹೆಜ್ಜೆ ಊರಿದ ಗೋವಿಂದಪ್ಪ ಬೆಲಗೂರಿನಿಂದ ಮೈಸೂರಿಗೆ ಬಂದು ಡಿಗ್ರಿ ಮುಗಿಸಿ ಊರಿಗೆ ಮರಳಿ ರಾಜಕೀಯ ಪ್ರವೇಶ ಮಾಡಿದರು. ಅಪ್ಪ ಗಾಳಪ್ಪನ ರಾಜಕಾರಣ ಗೋವಿಂದಪ್ಪನ ಕೈ ಹಿಡಿಯಿತು. ಮೊದಲ ಮೆಟ್ಟಿಲಾಗಿ ಗ್ರಾಮ ಪಂಚಾಯ್ತಿ ಸದಸ್ಯರಾಗಿ, ಅಧ್ಯಕ್ಷರಾಗಿ ನಂತರ ತಾ.ಪಂ. ಸದಸ್ಯರಾಗಿ ಬೆಲಗೂರನ್ನು ಮಾದರಿ ಪಂಚಾಯ್ತಿ ಮಾಡಿದರು. ಬೆಲಗೂರು 2000 ಜನಸಂಖ್ಯೆಯ ಗ್ರಾಮವಾಗಿದ್ದರೂ ಮಂಡಲ ಪಂಚಾಯ್ತಿಗೆ ವಾರ್ಷಿಕ ಆದಾಯ ಲಕ್ಷಾಂತರ ರೂಪಾಯಿಗಳು. ಕಸ ಸಾಗಿಸುವ ಆಟೋ, ಟ್ರ್ಯಾಕ್ಟರು, ಟಿಪ್ಪರ್‌ಗಳು ಅಂತೆಲ್ಲ ಪುರಸಭೆಯ ವ್ಯವಸ್ಥೆ ಬೆಲಗೂರಲ್ಲಿದೆ. ಹಾಗಾಗಿಯೇ ಗೋವಿಂದಪ್ಪ 1999ರಲ್ಲಿ ಹೊಸದುರ್ಗ ವಿಧಾನಸಭಾ ಕ್ಷೇತ್ರಕ್ಕೆ ಕೈ ಪಾರ್ಟಿಯಿಂದ ಟಿಕೆಟು ಕೇಳಿದರು. ದುರಂತವೆಂದರೆ 1997ರಲ್ಲಿ ತಾನೇ ರಾಜಕೀಯಕ್ಕೆ ತಂದು ತರಬೇತಿ ನೀಡಿ ಜಿ.ಪಂ. ಟಿಕೆಟು ಕೊಡಿಸಿ ಗೆಲ್ಲಿಸಿದ್ದ ಉಮಾದೇವಿ 1999ರ ವಿಧಾನಸಭಾ ಚುನಾವಣೆಯಲ್ಲಿ ಕೈ ಪಾರ್ಟಿಯ ಟಿಕೆಟಿಗೆ ಅಡ್ಡಗಾಲಾಕಿದಳು. ಆದರೆ ಮತದಾರರ ಬೆಂಬಲದಿಂದ 1999ರ ಚುನಾವಣೆಯಿಂದ ಹಿಂದೆ ಸರಿಯದೆ ಪಕ್ಷೇತರರಾಗಿ ಕಣಕ್ಕಿಳಿದರು. ಆ ಚುನಾವಣೆಯಲ್ಲಿ ಉಮಾದೇವಿ ಠೇವಣಿ ಕಳಕೊಂಡು ಮನೆ ಸೇರಿದರೆ ಪಕ್ಷೇತರ ಗೋವಿಂದಪ್ಪ ಭರ್ಜರಿ ಜಯ ಸಾಧಿಸಿದರು. ಆಗಲೇ ಚಿತ್ರದುರ್ಗ ರಾಜಕಾರಣದಲ್ಲಿ ಗೋವಿಂದಪ್ಪನ ರಾಜಕೀಯ ಸಂಚಲನ ಶುರುವಾದದ್ದು. 1999ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ತಾವೇ ಖುದ್ದು ಶಾಸಕ ಗೋವಿಂದಪ್ಪನನ್ನು ಪಾರ್ಟಿಗೆ ಸೇರಿಸಿಕೊಂಡರು. ಅಲ್ಲಿಂದ ಶಾಸಕ ಗೋವಿಂದಪ್ಪ ಹೊಸದುರ್ಗದಲ್ಲಿ ಮನೆಮಾತಾದರು. 1999, 2004 ರಲ್ಲಿ ಶಾಸಕರಾಗಿದ್ದರೂ 2008ರಲ್ಲಿ ಅದೇ ಗೂಳಿಹಟ್ಟಿಯ ಹವಾದಲ್ಲಿ ಕೊಚ್ಚಿಹೋದರು. ಆಗ ಗೋವಿಂದಪ್ಪ ಮತದಾರರೆದುರು ಜಿಗುಟುತನ ಮೆರೆದರು. ಗೆದ್ದೇ ಗೆಲ್ಲುತ್ತೇನೆ, 2 ಬಾರಿ ಶಾಸಕನಾಗಿ ಕ್ಷೇತ್ರ ಉದ್ಧಾರ ಮಾಡಿದ್ದೇನೆ, ನನ್ನ ಬಿಟ್ಟು ಮತ್ಯಾರನ್ನು ಗೆಲ್ಲಿಸುತ್ತಾರೆ ಎನ್ನುವ ಅತಿಯಾದ ಆತ್ಮವಿಶ್ವಾಸ ಗೋವಿಂದಪ್ಪನ ಗೆಲುವಿಗೆ ಮುಳುವಾಯಿತು. ಆಗ ಗೂಳಿಹಟ್ಟಿ ಕ್ಷೇತ್ರದಲ್ಲಿ ಗೂಳಿಯಂಗೇ ರಾಜಕೀಯ ಎಂಟ್ರಿ ನೀಡಿದ್ದ. ಹಡಬೆ ದುಡ್ಡು, ಅವಕಾಶವಾದಿ ರಾಜಕಾರಣ, ಹೆಂಡತಿ-ಮಕ್ಕಳು ಅಂತಾ ಸಂಸಾರವಿಲ್ಲದ ನಕಲಿ ಸನ್ಯಾಸಿ, ಹಾಗಂತ ಹಣ-ಆಸ್ತಿಯ ಮೋಹವಿರದಿದ್ದ ಗೂಳಿ ಜನರಿಗೆ ಮಂಕುಬೂದಿ ಎರಚಿದ. ಮೊದಲೇ ಹೊಸದುರ್ಗ ಹಿಂದುಳಿದ ಕ್ಷೇತ್ರ, ಬರಗಾಲ, ನೆಲದಲ್ಲಿ ನೀರಿಲ್ಲ, ಆಕಾಶದಲ್ಲಿ ಮಳೆಹನಿಯಿಲ್ಲ, ಬಡತನದ ಬವಣೆಯ ಕ್ಷೇತ್ರವನ್ನು 2008ರ ಚುನಾವಣೆಯಲ್ಲಿ ಈ ಗೂಳಿ ಕ್ಷೇತ್ರದ ಮತದಾರರನನ್ನು ತನ್ನ ಹಡಬೆ ರೊಕ್ಕಕ್ಕೆ ಬಲಿ ನೀಡಿ ಕುಲಗೆಡಿಸಿದ್ದಲ್ಲದೇ ಬರುವ ಚುನಾವಣೆಗಳೆಲ್ಲಾ ದುಬಾರಿಯಾಗುವಂತೆ ಮಾಡಿಬಿಟ್ಟ. 2013ರ ಚುನಾವಣೆಯಲ್ಲಿ ಗೂಳಿ ಬರಿಗೈಲಿ ಚುನಾವಣೆ ಮಾಡಿ ಪಾಠ ಕಲಿತ. ಮತದಾರ ಭರ್ಜರಿ ಹೊಡೆತವನ್ನೇ ನೀಡಿದರು.

2013ರ ಚುನಾವಣೆಯಲ್ಲಿ ಗೋವಿಂದಪ್ಪನಿಗೆ ಕೈ ಟಿಕೆಟು ನಿರಾಯಾಸವಾಗಿಯೇ ಕೈಸೇರಿತ್ತು, ಅಷ್ಟೊತ್ತಿಗಾಗಲೇ ಗೂಳಿ ಮಂತ್ರಿಯಾಗಿ ಮೆರೆದು ಮಾಜಿಯಾಗಿ ಸುಸ್ತುಹೊಡೆದಿದ್ದ. 2013ರ ಚುನಾವಣೆಯಲ್ಲಿ ಗೆದ್ದ ಗೋವಿಂದಪ್ಪ ಮೂರು ವರ್ಷಗಳಿಂದ ಹುಷಾರಾಗಿಯೇ ರಾಜಕೀಯ ಮಾಡುತ್ತಿದ್ದಾರೆ. ಕ್ಷೇತ್ರದ ಮುನ್ನೂರಕ್ಕೂ ಹೆಚ್ಚು ಗ್ರಾಮಗಳಲ್ಲೂ ತನ್ನ ಹವಾ ಉಳಿಸಿಕೊಂಡಿದ್ದಾರೆ. ಹೊಸದುರ್ಗಕ್ಕೆ ನೀರಿನ ಬವಣೆ ಇಂದು ನಿನ್ನೆಯದಲ್ಲ, ಬರಗಾಲ ಅಮರಿಕೊಂಡಾಗ ಕುಡಿಯುವ ನೀರಿಗೆ ವಿಪರೀತ ತತ್ವಾರ ಇಲ್ಲಿ, ಇಂತಹ ಕ್ಷೇತ್ರಕ್ಕೆ ಭದ್ರಾ ನದಿಯಿಂದ ನೀರು ಹರಿಸಲು ಅಪ್ಪರ್ ಭದ್ರಾ ಯೋಜನೆಗೆ ಶ್ರಮಿಸಿದ್ದಾರೆ. ಈಗಾಗಲೇ 1 ಟಿಎಂಸಿ ನೀರಿಗೆ 3000 ಕೋಟಿ ಮಂಜೂರಾಗಿದೆ. ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಗೆ ಆಧುನಿಕ ಸೌಲಭ್ಯಗಳು ಹರಿದುಬಂದಿವೆ. ಕೊರಟಗೆರೆ ಬಳಿಯ ವೇದಾವತಿ ನದಿಗೆ 8 ಕೋಟಿ ವೆಚ್ಚದ ಬ್ಯಾರೇಜಿನ ನಿರ್ಮಾಣ ಮುಕ್ತಾಯದ ಹಂತದಲ್ಲಿದೆ. ಅಪ್ಪರ್ ಭದ್ರಾ ಮುಗಿದು ಬಹುಕೆರೆಗಳಿಗೆ ನೀರು ತುಂಬಿಸುವ ಯೋಜನೆ ಪೂರ್ಣಗೊಂಡರೆ ಹೊಸದುರ್ಗದ ಬರಗಾಲದ ಬವಣೆ ಕೊಂಚ ತಣಿಯುತ್ತದೆ. ದಾಳಿಂಬೆ ಬೆಳೆದು ದುಡ್ಡು ಮಾಡಿದ್ದ ರೈತ ಈಗ ಬೋರುಗಳಲ್ಲಿ ಹನಿ ನೀರಿಲ್ಲದೆ ಬರಿಗೈ ದಾಸಯ್ಯನಾಗಿದ್ದಾನೆ. ಈ ಅಪ್ಪರ್ ಭದ್ರಾ ಯೋಜನೆ ಪೂರ್ಣಗೊಂಡು ನೀರು ಹರಿದರೆ ಹೊಸದುರ್ಗದ ರೈತನ ಮುಖದಲ್ಲಿ ನಗು ಅರಳುತ್ತದೆ. ಕೆರೆ ತುಂಬಿ ಭೂಮಿಯಲ್ಲಿ ಅಂತರ್ಜಲ ಮೈದುಂಬಿದರೆ ರೈತನ ಹೊಲಗಳು ಹಸಿರು ತಡಿಗಳಾಗುವುದು ಗ್ಯಾರಂಟಿ. ಹಾಗಾಗಿಯೇ ಈ ಒಂದು ವಿಷಯಕ್ಕೆ ಶಾಸಕ ಗೋವಿಂದಪ್ಪ ಮತದಾರರ ಮನದಲ್ಲಿ ಉಳಿಯುತ್ತಾರೆ. ಹಾಗೇ ಗ್ರಾಮೀಣ ಪ್ರದೇಶಗಳು ಕಾಂಕ್ರೀಟು ರಸ್ತೆ, ಚರಂಡಿ, ಬೆಳಕು, ಶಾಲೆ ಅಂತೆಲ್ಲ ತರಾತುರಿಯಲ್ಲಿ ಪ್ರಗತಿ ಕಂಡಿವೆ. ಪ್ರತೀ ಗ್ರಾಮ ಪಂಚಾಯ್ತಿಗಳೂ ಯಾವ ಪುರಸಭೆಗಳಿಗೇನು ಕಡಿಮೆಯಿಲ್ಲ.

ಹಾಗೇ ಗೋರೂರು, ಹಾಸನ ಡ್ಯಾಂನಿಂದ ಹೇಮಾವತಿ ನದಿಗೆ ನೀರು ಹರಿಸುವ ಮಹತ್ವದ ಯೋಜನೆ 2008ರಲ್ಲಿ ಶಾಸಕನಾಗಿದ್ದ ಗೂಳಿಹಟ್ಟಿಯ ಅವಧಿಯಲ್ಲೇ ಮಂಜೂರಾಗಿತ್ತು, ಆದರೆ ಅರ್ಧಂಬರ್ಧ ಕಾಮಗಾರಿಯಾಗಿ ಸದ್ಯ ಕಾಮಗಾರಿ ನಿಂತಿದೆ. ಅದಕ್ಕೀಗ ಗೋವಿಂದಪ್ಪ ಚಾಲನೆ ನೀಡುವ ಪ್ರಯತ್ನ ಮಾಡಬೇಕಿದೆ. ಹಾಗಾದಲ್ಲಿ ಹೊಸದುರ್ಗ ಕ್ಷೇತ್ರದ ಅರ್ಧ ಕ್ಷೇತ್ರ ನೀರಾವರಿಯಾಗುವುದು ಗ್ಯಾರಂಟಿ. ಈ ಯೋಜನೆ ಈ ಭಾಗದ ರೈತರ ಹಲವು ದಶಕಗಳ ಕನಸು. ಹಾಗೊಂದು ವೇಳೆ ಯೋಜನೆ ಪೂರ್ಣಗೊಂಡು ನೀರು ಬಲ್ಲಾಳಸಮುದ್ರದ ಕೆರೆಗೆ ಹರಿದರೆ ಹೊಸದುರ್ಗದ ಚಿತ್ರಣವೇ ಬೇರೆಯಾಗುತ್ತದೆ. ಹಾಗೇ ಗೋವಿಂದಪ್ಪನ ರಾಜಕೀಯ ಚಿತ್ರಣವೂ ಬೇರೆಯಾಗುತ್ತದೆ.

2008ಕ್ಕೂ ಮೊದಲು ಚುನಾವಣೆಗಳನ್ನೆಲ್ಲಾ ಜಾತ್ಯತೀತವಾಗಿಯೇ ಎದುರಿಸಿದ್ದ ಗೋವಿಂದಪ್ಪ 2008ರ ಚುನಾವಣೆಯ ನಂತರ ಜಾತಿ ರಾಜಕಾರಣದ ಮೋಹಕ್ಕೆ ಬಲಿಯಾದರೆನ್ನುವ ಆಪಾದನೆಯಿದೆ. ಹೊಸದುರ್ಗ 1.83 ಲಕ್ಷ ಮತದಾರರಿರುವ ಕ್ಷೇತ್ರ. ಇಲ್ಲಿ ಕುರುಬರು, ನಾಯಕರು, ಗೊಲ್ಲರು, ದಲಿತರು ಅಂತೆಲ್ಲ 50 ಸಾವಿರ ಮತಗಳಿವೆ. ಲಿಂಗಾಯತರು (ಒಟ್ಟಾರೆ) 50 ಸಾವಿರವಾದರೆ ಉಳಿದಂತೆ ಅಲ್ಪಸಂಖ್ಯಾತರು ಮತ್ತು ಹೊಸದುರ್ಗ ಪಟ್ಟಣದಲ್ಲಿ ದೇವಾಂಗ ಸಮುದಾಯದ ಮತಗಳೇ ಹೆಚ್ಚಿವೆ. ಕುರುಬರ ಸಂಖ್ಯೆ ಕಮ್ಮಿಯಿದ್ದರೂ ಗೋವಿಂದಪ್ಪನನ್ನು 3 ಬಾರಿ ಈ ಕ್ಷೇತ್ರದ ಮತದಾರರು ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ಆದರೆ ಅದ್ಯಾಕೋ 2013ರ ಚುನಾವಣೆಯ ನಂತರ ಈತನಿಗೆ ಜಾತಿಬ್ಯಾನಿ ಅಮರಿಕೊಂಡಿದೆ. ಈಗ ಮತ್ತೊಂದು ಆಪಾದನೆ ಗೋವಿಂದಪ್ಪನ ಹೆಸರಿಗೆ ಶನಿಯಾಗಿ ಬೆನ್ನುಹತ್ತಿದೆ. ಅದೇ ಮರಳುದಂಧೆ!

ಹೊಸದುರ್ಗದ ರೈತರ ಜೀವನಾಡಿ ವೇದಾವತಿ ನದಿಯಿಂದ ಪ್ರತೀದಿನ ಟಿಪ್ಪರ್ ಲಾರಿಗಳಲ್ಲಿ 50 ಲೋಡು ಮರಳು ಬೆಂಗಳೂರಿಗೆ ರವಾನೆಯಾಗುತ್ತದೆ. 1 ಲೋಡಿಗೆ 60 ಸಾವಿರವಂತೆ. ಈ ಮರಳು ದಂಧೆಗೆ ಶಾಸಕ ಗೋವಿಂದಪ್ಪನೇ ಸಾತ್ ನೀಡಿದ್ದಾರೆ ಎನ್ನುವ ಆಪಾದನೆಯಿದೆ. ಮರಳು ಸಾಗಿಸುವ ಲಾರಿಗಳ ಮೇಲೆ ‘ಕನಕ’ ಎ... ಬ್ರಾಂಡ್ ನೇಮಿದ್ದರೆ ಈ ಆ ಲಾರಿಗಳನ್ನು ಹೊಸದು... ಪೊಲೀಸರು ಕೈಹಾಕಿ ನಿಲ್ಲಿಸುವುದಿಲ್ಲ, ಆದರೆ ಸಾ... ಜನ ಸ್ವಂತ ಮನೆ ಕಟ್ಟಲು ಗಾಡಿಯಲ್ಲಿ ಮರಳು ತುಂ... ಅದೇ ಪೊಲೀಸರು ಅಂತವರನ್ನು ಕಟಕಟೆಗೆ ... ನಿಲ್ಲಿಸುತ್ತಿದ್ದಾರೆ. ಈ ವಾತಾವರಣವೀಗ ಗೋವಿಂ... ಹೆಸರಿಗೆ ಮಸಿ ಬಳಿಯುತ್ತಿದೆ. ಈ ದಂಧೆ ಗೋವಿಂ... ಗಮನಕ್ಕೆ ಬಂದೇ ಜಾತ್ಯಸ್ಥರು ಈ ದಂಧೆಗೆ ಕೈಹಾಕಿದಾ... ಅಥವಾ ಅವರ ಹೆಸರಲ್ಲಿ ನಡೆಯುತ್ತದೆಯೋ ಶಾ... ಉತ್ತರಿಸಬೇಕು. ಒಂದಂತೂ ಸತ್ಯ, ಇಂಥಾ ದಂಧೆ ಶಾ... ಗಮನತಪ್ಪಿ ನಡೆಯಲು ಸಾಧ್ಯವಿಲ್ಲ, ಈಗಲಾದರೂ ಗೋವಿಂದಪ್ಪ ಎಚ್ಚೆತ್ತುಕೊಳ್ಳಬೇಕಿದೆ.

2018ರ ವಿಧಾನಸಭಾ ಚುನಾವಣೆ ... ಗೋವಿಂದಪ್ಪನಿಗೆ ಅಷ್ಟು ಸುಲಭದ್ದಾಗಿರುವುದಿಲ್ಲ, ಇ... ಒಂದೂವರೆ ವರ್ಷವಷ್ಟೇ ಹತ್ತಿರವಿರುವ ಚುನಾ... ಬಿಜೆಪಿ, ಜೆಡಿಎಸ್ ಪಾರ್ಟಿಗಳು ಒಳಗೊಳಗೇ ... ಶುರುಮಾಡಿವೆ. ಅದೇ ಬಿಜೆಪಿಯಿಂದ ಲಿಂಗಮ... ಮತ್ತೆ ಟಿಕೇಟು ತರುವ ಪ್ರಯತ್ನ, ಅದೇ ಗೂ... ಪಕ್ಷೇತರನಾಗುವ ಅಂದಾಜು ನಿಜವಾದರೆ ಹಾಲಿ ... ಗೋವಿಂದಪ್ಪ ನಿರಾಯಾಸವಾಗಿ ಗೆದ್ದುಬರುತ್ತಾರೆ. ಅದಷ್ಟು ಸುಲಭವಾಗಿಲ್ಲ.


ಚುನಾವಣೆ ಹತ್ತಿರ ಬಂದಂತೆಲ್ಲ ಹೊಸದುರ್ಗ ಮ... ಹೊಸಹೊಸ ಚುನಾವಣಾ ರಾಜಕೀಯ ಸುದ್ದಿ... ಗ್ರಾಸವಾಗುತ್ತಿದೆ. ಈ ಕ್ಷೇತ್ರದ ಮೇಲೆ ಬಿಜೆಪಿ ರಾಜ... ಯಡ್ಡಿಯ ಕಣ್ಣುಬಿದ್ದಿದೆ. ಕ್ಷೇತ್ರದಲ್ಲಿ ತನ್ನ ಸ್ವಜಾತಿ ಮ... ಹೆಚ್ಚಿರುವ ಕಾರಣದಿಂದ ಇತ್ತ ಗಮನವಿದೆ. ಹಾ... ತಾನೇ ನಿಲ್ಲುವ ಅಥವಾ ಶಿಕಾರಿಪುರದ ಶಾಸಕ ... ರಾಘವೇಂದ್ರ ನಿಲ್ಲಿಸುತ್ತಾನೆಂದಲ್ಲ, ಯಡ್ಡಿಯ ಮ... ಮಗ ವಿಜಯೇಂದ್ರನನ್ನು ಇಲ್ಲಿ ಪ್ರತಿಷ್ಠಾಪನೆ ಮ... ಪ್ರಯತ್ನಗಳು ನಡೆಯುತ್ತಿವೆ ಎಂಬ ವರ್ತಮಾನ... ಹಾಗೆ ನೋಡಿದರೆ ಪಕ್ಷೇತರ ಶಾಸಕನಾಗಿ 20... ಸೋತ ಗೂಳಿಹಟ್ಟಿ ಸದ್ಯ ಬಿಜೆಪಿ ಪಾರ್ಟಿಯಲ್ಲಿ ಕುಂ... ಹೊಸದುರ್ಗದಲ್ಲಿ ಲಿಂಗಮೂರ್ತಿಗೆ ಟಿಕೆಟು ತಪ್ಪಿಸಿ... ಬೇಕು ಎನ್ನುವ ವರಸೆ ಎಸೆದು ಯಡ್ಡಿಗೆ ಸಮಸ್ಯೆಯಾ... ಇನ್ನು ಲಿಂಗಮೂರ್ತಿ ಜಾತ್ಯಸ್ಥ ಯಡ್ಡಿಯನ್ನೇ ... ರಾಜಕೀಯ ಜೀವ ಹಿಡಕೊಂಡು ಕುಂತಿದ್ದಾನೆ.

ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯಪ್ರವೃತ್ತನಾ... ಯಡ್ಡಿ ಸಮಸ್ಯೆಯಾಗಬಹುದಾದ ಗೂಳಿಹಟ್ಟಿಗೆ ಪರ್ಯಾ... ದಾರಿಯೊಂದನ್ನು ಸಿದ್ಧ ಮಾಡಿದ್ದಾನೆನ್ನುವ ಮಾತ... ಕೇಳಿಬರುತ್ತಿವೆ. ಗೂಳಿಯನ್ನು ಕರೆದು ಕಿವಿಯೂ... ಯಡ್ಡಿ 'ನೀನು ಹೊಸದುರ್ಗ ಬಿಟ್ಟು ಹೊಳಲ್ಕೆರೆಗ... ಅಲ್ಲಿ ನಮ್ಮವರೇ ಚಂದ್ರಪ್ಪನಿಗೆ ಟಿಕೆಟು ಕೊಡಬೇಡ... ಅದ್ಯಾರೋ ಹನುಮಕ್ಕನನ್ನು ಬೆನ್ನತ್ತಿದ್ದಾರೆ. ನೀನು ಅಲ್ಲಿ... ಪ್ರಚಾರ ಶುರುಮಾಡು, ನಿನಗೇ ಹೊಳಲ್ಕೆರೆ ... ಗ್ಯಾರಂಟಿ' ಅಂದಿದ್ದಾನಂತೆ. ಆ ರೀತಿ ಗೂಳಿ... ಹೊಳಲ್ಕೆರೆಗೆ ಸಾಗಹಾಕಿ, ಸರಣಿ ಸೋಲುಗಳಿಂದ ... ಲಿಂಗಮೂರ್ತಿಯನ್ನು ಸೈಡಿಗೆ ಸರಿಸಿ ಎರಡನೇ... ವಿಜಯೇಂದ್ರನಿಗೆ ಹೊಸದುರ್ಗವನ್ನು ... ಕೊಡಬೇಕೆನ್ನುವುದು ಯಡ್ಡಿ ಲೆಕ್ಕಾಚಾರವಂತೆ. ಯ... ಈ ಐಡಿಯಾಕ್ಕೆ ಸರಿ ಎಂದಿರುವ ಗೂಳಿ "ಹೊ... ಟಿಕೆಟು ನನಗೇ ಅಂತಾ ಅನೌನ್ಸ್ ಮಾಡಿ ಪಾರ್ಟಿ... ಪ್ರಕಟಣೆ ಕೊಡಿ, ಹಾಗಾದರೆ ನಾನು ಹೊಸ... ಬಿಟ್ಟುಕೊಡುವೆ" ಅಂತಾ ಪಟ್ಟು ಹಿಡಿದಿದ್ದಾನಂ... ಇದು ಬಗೆಹರಿದಿಲ್ಲ, ಆದರೆ ಯಡ್ಡಿ ಕಣ್ಣಾಕಿ ... ಮಗನಿಗೆ ನೆಲೆ ಕಲ್ಪಿಸುವುದು ಅಗತ್ಯವಾಗಿದೆ. ಹೊಸದುರ್ಗ ಯಡ್ಡಿ ಕೈಗೆ ಬರುವ ಸಾಧ್ಯ... ಚುನಾವಣೆ ಅದಕ್ಕೆಲ್ಲಿ ತಕ್ಕ ಉತ್ತರ ನೀಡುತ್ತದೆ.

ಗೋವಿಂದಪ್ಪನಿಗೆ ಸಮಸ್ಯೆ ಇರುವುದೇ ಇಲ್ಲಿ... ವಕ್ಕರಿಸಿದರೆ ಅವನ ಜಾತಿ ಒಂದಾಗಿ ಯಡ್ಡಿ ಸೇ... ವಿಜಯೇಂದ್ರನ ಗೆಲುವಿಗೆ ಸಾಥ್ ನೀಡಿದರೆ ಅಚ್ಚ... ಹಾಗೊಂದುವೇಳೆ ಗೂಳಿ ಇಂತಹ ಆಫರ್‌ಗೆ ... ಬಿಜೆಪಿ ಬಿಟ್ಟು ಮತ್ತೆ ಪಕ್ಷೇತರನಾದರೂ ಗೋವಿಂ... ಎಡವಟ್ಟು ಗ್ಯಾರಂಟಿ. ಹಾಗಾಗಿಯೇ ಸದ್ಯ ತನ್ನ ... ಕೇಳಿಬಂದಿರುವ ಸ್ವಜಾತಿ ವ್ಯಾಮೋಹ, ... ದಂಧೆಯಂತಹ ಆಪಾದನೆಗಳನ್ನು ಕಡಿದುಕೊಂಡು ... ಜನನಾಯಕನಾಗಬೇಕಿದೆ. ಮುಖ್ಯವಾಗಿ ಅಹಿಂದ ವ... ಕ್ರೋಢೀಕರಿಸಿಕೊಂಡರೆ ಮಾತ್ರ ಯಡ್ಡಿಗೆ ... ಹೊಡೆಯಬಹುದು.

■ ಟಿ.ಎನ್. ಷ...

ಚಳ್ಳಕೆರೆ: ಭ್ರಷ್ಟ 'ಪ್ರಕಾಶ'ನಿಗೆ ದುಷ್ಟ ರಾಜನ 'ಮಾಂಜ'!



ಪ್ರಕಾಶ್

ಚಳ್ಳಕೆರೆಯ ಎರಡು ಭ್ರಷ್ಟ ಸರ್ಕಾರಿ ತಿಮಿಂಗಿಲಗಳು ಮೊನ್ನೆ ಚಿತ್ರದುರ್ಗದ ಜೈಲು ಪಾಲಾಗಿವೆ. ಭ್ರಷ್ಟಾಚಾರ ನಿಗ್ರಹ ದಳ ನಡೆಸಿದ ಧಿಡೀರ್ ದಾಳಿಗೆ ಹದಿನೈದು ಸಾವಿರ ಹೇಸಿಗೆ ರೊಕ್ಕದ ಸಮೇತ ತಗುಲಿಕೊಂಡವರು ಚಳ್ಳಕೆರೆ ತಾಲ್ಲೂಕು ಪಂಚಾಯ್ತಿಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ ಮತ್ತು ಅವನ ಪಟಾಲಮ್ ಶಿಷ್ಯನಂತೆ ಅಂಡೂರಿದ್ದ ದೊಡ್ಡುಳ್ಳಾರ್ತಿಯ ಪಿಡಿಒ ಬಸವರಾಜ. ವಿಪರ್ಯಾಸವೆಂದರೆ ಈ ಇಬ್ಬರು ಸರ್ಕಾರಿ ಲಂಚಕೋರರನ್ನು ವ್ಯವಸ್ಥಿತವಾಗಿ ಬಲೆಗೆ ಕೆಡವಿರೋದು ಅವರ ಬಗಲ್ ಕಾ ದುಶ್ಮನ್ ಕಂ ಮಹಾ ಖಾದಿ ಖಟಿಂಗ ರಾಜ.

ಚಳ್ಳಕೆರೆ ತಾಲ್ಲೂಕು ಪಂಚಾಯ್ತಿಯಿಂದ ನಡೆಸಲಾದ ಅಭಿವೃದ್ಧಿ ಕಾಮಗಾರಿಗಳಿಗೆ, ಅದರಲ್ಲೂ ಸಿವಿಲ್ ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಸಲುವಾಗಿ ಕಾಮಗಾರಿ ನಡೆದಲ್ಲೆಲ್ಲ ಗುತ್ತಿಗೆದಾರನ ಹೆಸರು, ಖರ್ಚಾದ ಮೊತ್ತ ಯೋಜನೆಯ ಹೆಸರು ಮತ್ತು ಮುಗಿದ ಅವಧಿ ಇತ್ಯಾದಿ ವಿವರಗಳನ್ನು ಬರೆಸಿದ ಬೋರ್ಡ್ ನೆಡುವ ಗುತ್ತಿಗೆಯನ್ನು ಕರೆಯಲಾಗಿತ್ತು. ಆ ಗುತ್ತಿಗೆಗೆ ಕೈಹಾಕಿದವನೇ ಈ ರಾಜ. ಅದು ಲಕ್ಷಗಳ ವ್ಯವಹಾರ. ಕಂಟ್ರಾಕ್ಟುದಾರ ಸೋಗಿನ ಈ ರಾಜ ತಕ್ಕಮಟ್ಟಿಗೆ ರಾಜಕಾರಣದಲ್ಲೂ ಪಳಗಿದ ಆಸಾಮಿ. ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣನ ಪರಮಶಿಷ್ಯ. ಸಾಲದ್ದಕ್ಕೆ ತನ್ನ ಹೆಂಡತಿ ದಾಕ್ಷಾಯಿಣಿಯನ್ನು ಕಳೆದ ಅವಧಿಯಲ್ಲಿ ದೊಡ್ಡುಉಳ್ಳಾರ್ತಿ ಕ್ಷೇತ್ರದಿಂದ ತಾಲ್ಲೂಕು ಪಂಚಾಯ್ತಿ ಮೆಂಬರಾಗಿಸಿದ್ದ. ಹೆಂಡತಿ ದಾಕ್ಷಾಯಿಣಿ ಹೆಸರಿಗೆ ತಾ.ಪಂ. ಮೆಂಬರಾಗಿದ್ದರೂ ಆಗೆಲ್ಲ ರಾಜನದ್ದೇ ದರುಬಾರಾಗಿತ್ತು. ಈಗಾಕೆ ಮಾಜಿ, ಈತ ಕಂಟ್ರ್ಯಾಕ್ಟ್ ಕಸುಬುದಾರ. ಶಾಸಕ ಎನ್.ವೈ. ಬೆಂಬಲದಿಂದ ರಾಜ ಕೊಬ್ಬಿಹೋಗಿದ್ದಾನೆ.

ಅಂಥಾ ರಾಜನಿಗೇ ಗಂಟುಬಿದ್ದವರು ಇಒ ಪ್ರಕಾಶ ಮತ್ತು ಪಿಡಿಒ ಬಸವರಾಜ. ಫಲಕ ನೆಡುವ ಗುತ್ತಿಗೆ ಕಾರ್ಯ ಮುಗಿದು ಬಿಲ್ ಮಾಡಿಸುವ ಹಂತ ಬಂದಾಗ ಪ್ರಕಾಶ, ಪಿ.ಡಿ.ಓ. ಬಸವರಾಜ ಮತ್ತು ರಾಜನ ನಡುವೆ ಕಮೀಶನ್ ವ್ಯವಹಾರದಲ್ಲಿ ತಕರಾರು ಶುರುವಾಗಿದೆ. ಇಂಥಾ ಕಾಮಗಾರಿಗಳಲ್ಲಿ ಲಂಚ ಪರ್ಸೆಂಟೇಜ್ ಲೆಕ್ಕದಲ್ಲಿ ಬಟವಾಡೆಯಾಗೋದು ಸಾಮಾನ್ಯ. ಅದರಂತೆ ತಮಗೆ 35 ಸಾವಿರ ರೂಪಾಯಿ ನೀಡಿದರೇನೇ ಬಿಲ್ ಪಾಸ್ ಮಾಡುವುದು ಅಂತಾ ಪ್ರಕಾಶ ಮತ್ತು ಬಸವರಾಜ ಹಠ ಹಿಡಿದಿದ್ದರು. ಅದಕ್ಕೆ ರಾಜನೂ ಒಪ್ಪಿ 20 ಸಾವಿರ ಮುಂಗಡ ಹಣ ಕೊಟ್ಟಿದ್ದ. ಪ್ರತಿಯಾಗಿ ಒಂದು ಕಂತಿನ ಬಿಲ್ ಕೂಡಾ ಪಾಸ್ ಆಗಿತ್ತು. ಇನ್ನು ಬಾಕಿ ಹದಿನೈದು ಸಾವಿರ ಸಂದಾಯವಾದಾಗಲೇ ಉಳಿದ ಕಂತಿನ ಬಿಲ್ ಪಾಸ್ ಮಾಡುವುದೆಂಬ ಒಪ್ಪಂದ ಮೊದಲೇ ಏರ್ಪಟ್ಟಿತ್ತು. ಆಗಲೇ ನೋಡಿ ರಾಜ ತನ್ನ ಸವರಂಗಿ ಆಟ ಶುರುಹಚ್ಚಿಕೊಂಡಿದ್ದು. ಇತ್ತ ತಾನು ಲಂಚ ಕೊಡುವ ವಿಚಾರ ಭ್ರಷ್ಟಾಚಾರ ನಿಗ್ರಹ ದಳಕ್ಕೆ ತಲುಪುವಂತೆ ಮಾಡಿ, ಅದೇ ಸಮಯಕ್ಕೆ ದಾಳಿ ನಡೆಯುವಂತೆ ವ್ಯವಸ್ಥೆ ಮಾಡಿದ ರಾಜ, ಪ್ರಕಾಶ ಮತ್ತು ಬಸವರಾಜನಿಗೆ ಜೈಲಿನ ದಾರಿ ತೋರಿಸಿದ್ದಾನೆ.

ಭ್ರಷ್ಟಾಚಾರ 'ಪ್ರಕಾಶಿ' ಸುತ್ತಿದೆ

ರಾಜ ಎಂಬ ಖತರ್ನಾಕ್ ಆಸಾಮಿ ತೋಡಿದ ಖೆಡ್ಡಾಕ್ಕೆ ದಬಾಕಿಕೊಂಡು ಜೈಲು ಸೇರಿರುವ ತಾಲ್ಲೂಕು ಪಂಚಾಯ್ತಿ ಇಒ ಪ್ರಕಾಶ ಕಳೆದ ಮೂರು ವರ್ಷದಿಂದ ಚಳ್ಳಕೆರೆಯನ್ನು ಹುರಿದು ಮುಕ್ಕಿದ ಪರಿಯೇನೂ ಕಮ್ಮಿಯಿಲ್ಲ. ಕಸುಬುದಾರಿ ಪ್ರಕಾಶ ಮೂಲತಃ ಭ್ರಷ್ಟ ಅಪ್ಪನ ಮಗ. ಇವನ ತಂದೆ ಕಡೂರು ತಾಲ್ಲೂಕಿನ ಗ್ರಾಮ ಪಂಚಾಯ್ತಿಯಲ್ಲಿ ಕಾರ್ಯದರ್ಶಿಯಾಗಿದ್ದ. ಅಖಂಡ ಭ್ರಷ್ಟ ಅಂತಲೇ ಹೆಸರು ಮಾಡಿದ್ದ ಆತ ನಿವೃತ್ತಿಯಾಗುವ ಮೊದಲೇ ಮೃತಪಟ್ಟಿದ್ದರಿಂದ ಅನುಕಂಪದ ನೆಪದಲ್ಲಿ ಪ್ರಕಾಶನಿಗೆ ಸರ್ಕಾರಿ ಉದ್ಯೋಗ ಒಲಿದುಬಂದಿತ್ತು. ಗ್ರೇಡ್ 1 ಕಾರ್ಯದರ್ಶಿಯಾಗಿ ಅದೇ ಕಡೂರು ಕ್ಷೇತ್ರದಲ್ಲಿ ಅಪ್ಪನ ಕಮೀಶನ್ ಕಸುಬು ಕರಗತ ಮಾಡಿಕೊಂಡ ಪ್ರಕಾಶ ಆಮೇಲೆ ವಕ್ಕರಿಸಿಕೊಂಡಿದ್ದೇ ಚಿತ್ರದುರ್ಗದ ಚಳ್ಳಕೆರೆಯೆಂಬ ಬರಗಾಲದ ನಾಡಿಗೆ. ಬಂದಾಗಿನಿಂದ ಚಳ್ಳಕೆರೆಯಲ್ಲಿ ಯಾರ್ಯಾರನ್ನು ಹ್ಯಾಗ್ಯಾಗೆ ಪಳಗಿಸಬೇಕು ಎಂಬುದನ್ನು ಕರಗತ ಮಾಡಿಕೊಳ್ಳುತ್ತಲೇ ಸ್ಥಳೀಯ ರಾಜಕಾರಣಿಗಳಿಗೆ ಆಪ್ತನಾಗಿಬಿಟ್ಟ.

ಚಳ್ಳಕೆರೆ ಹೇಳೀಕೇಳಿ ಬಯಲುಸೀಮೆಯ ನಾಡಿಗೆ ಸೇರಿದ್ದು. ಇಲ್ಲಿ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ನೆಲೆಗಳು ನೆಲೆಕಂಡವು. ಅಲ್ಲಿನ ರೈತರ ಭೂಮಿ, ಸರ್ಕಾರದ ಸಾವಿರಾರು ಎಕರೆ ಗೋಮಾಳವನ್ನು ಕೇಂದ್ರ ಸರ್ಕಾರದ ಸುಪರ್ದಿಗೆ ನೀಡುವುದೇ ಇವನಿಗೆ ಸಹರಾ ಮರುಭೂಮಿ ನಟ್ಟನಡುವೆ ಅರಬ್ಬೀ ಸಮುದ್ರವೇ ಸಿಕ್ಕಂತಾಗಿತ್ತು. ಅಲ್ಲದೇ ಚಳ್ಳಕೆರೆ ತಾಲ್ಲೂಕು ಪಂಚಾಯ್ತಿಯಲ್ಲೂ ಸಮೃದ್ಧ ಆಮದನಿಯಿದೆ. ಬರಗಾಲದ ಹೆಸರಲ್ಲಿ ಹರಿದುಬರುವ ಕಾಮಗಾರಿಯ ಕೋಟ್ಯಾಂತರ ರೂಪಾಯಿಗೆ ಖಡಕ್ 30 ಪರ್ಸೆಂಟೇಜ್ ಫಿಕ್ಸ್ ಮಾಡಿ ಕೂತಿರುವ ಈ ಪ್ರಕಾಶ ಯಾರ ಮುಲಾಜಿಗೂ ಜಗ್ಗದೆ ವಸೂಲಿ ಮಾಡುತ್ತಾನೆ. ಅಂತಾ ಹಡಬೆ ದುಡ್ಡಿನಿಂದಲೇ ಪಕ್ಕದ ಹಿರಿಯೂರು ಪಟ್ಟಣದ ಅವದಾನಿ ನಗರದಲ್ಲಿ ಭರ್ಜರಿ ಮನೆ ಕಟ್ಟಿಸಲು ಸಾಧ್ಯವಾದದ್ದು. ಅಲ್ಲಿಂದಲೇ ನೌಕರಿಗೆ ಓಡಾಡುತ್ತಿದ್ದಾನೆ.

ಚಳ್ಳಕೆರೆ ಬರದ ನಾಡಾದರೂ ಹಿಂಗಾರು ಮಳೆ ಸಮೃದ್ಧವಾಗಿ ನಡೆಸಿದರೆ ಎಣ್ಣೆಕಾಳುಗಳ ಸುಗ್ಗಿಯೇ ಆರಂಭವಾಗುತ್ತದೆ. ಇಲ್ಲಿರುವ ಎಣ್ಣೆ ಮಿಲ್ಲುಗಳು ಮುಂಬೈನಂತಹ ಆರ್ಥಿಕ ನಗರಿಯ ಸಂಪರ್ಕದಲ್ಲಿವೆ. ಹಾಗಾಗಿಯೇ ಚಳ್ಳಕೆರೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯ ಗೋಮಾಳ, ಬಗರ್ ಹುಕುಂ ಭೂಮಿಗೆ ವಿಪರೀತ ಬೆಲೆಯಿದೆ. ತಾಲ್ಲೂಕು ಪಂಚಾಯ್ತಿಯಿಂದ ಪ್ರತಿ ಗ್ರಾಮದ ಸೂರಿಲ್ಲದ ಬಡವರಿಗೆ ಸರ್ಕಾರ ನೀಡುವ ವಿವಿಧ ವಸತಿಯೋಜನೆಯ ಮನೆಗಳೇ ಇವನಿಗೆ ಚಿನ್ನದ ಗಣಿಯಿದ್ದಂಗೆ. ಏನಿಲ್ಲವೆಂದರೂ ಒಂದು ಗ್ರಾಮಕ್ಕೆ ಕನಿಷ್ಠ ಹತ್ತು ಮನೆಗಳಾದರೂ ಬಡವರಿಗೆ ಮಂಜೂರಾಗುತ್ತವೆ.


ಹಾಗೇ ಇನ್ನೂರು ಚಿಲ್ಲರೆ ಗ್ರಾಮಗಳಿಂದ ಸಾವಿರಾರು ಮನೆಗಳು ಮಂಜೂರಾಗುತ್ತವೆ. ಈ ಇ.ಓ. ಪ್ರಕಾಶ್, ಬಸವರಾಜನಂತಹ ಪಿ.ಡಿ.ಓ.ಗಳನ್ನು ಮುಂದಿಟ್ಟುಕೊಂಡು ಪ್ರತಿ ಮನೆಗೆ ಐದರಿಂದ ಹತ್ತು ಸಾವಿರ ಲಂಚ ವಸೂಲು ಮಾಡುತ್ತಾನೆ. ಇದು ಸರ್ವೇಸಾಮಾನ್ಯವಾಗಿ ಹೋಗಿದೆ. ಇವನ ಈ ಅಖಂಡ ಭ್ರಷ್ಟಾಚಾರದ ವಸೂಲಿಗೆ ಸಾರ್ವಜನಿಕರು ಮತ್ತು ಪಿ.ಡಿ.ಓ.ಗಳೂ ಸುಸ್ತು ಹೊಡೆದಿದ್ದಾರೆ. ಅದರಲ್ಲೆಲ್ಲ ದೊಡ್ಡಉಳ್ಳಾರ್ತಿಯ ಪಿ.ಡಿ.ಓ. ಬಸವರಾಜ ಮಾತ್ರ ಖತರ್‌ನಾಕ್ ಪ್ರಕಾಶನ ಜೊತೆ ಕೈಮಿಲಾಯಿಸಿ ದುಂಡಗಾಗುವ ಹಾದಿಯಲ್ಲಿದ್ದ.

ಇಲ್ಲಿ ಒಂದು ವಿಚಿತ್ರ ಘಟನೆಯನ್ನು ಪ್ರಸ್ತಾಪಿಸಲೇಬೇಕಿದೆ. ಚಳ್ಳಕೆರೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಆದಾಯ ತರುವಂತ 20 ವಾಣಿಜ್ಯ ಮಳಿಗೆಗಳಿವೆ. ಕಳೆದ ಎರಡು ದಶಕದಿಂದ ಅವು ಏಕರೂಪದ ಬಾಡಿಗೆ ತರುತ್ತಿವೆ. ಅವೆಲ್ಲವೂ ಚಳ್ಳಕೆರೆಯ ಹೃದಯಭಾಗದಲ್ಲಿವೆ. ಇವುಗಳ ಬಾಡಿಗೆ ನೇರವಾಗಿ ತಾ.ಪಂ. ಖಜಾನೆ ಸೇರುತ್ತದೆ. ಹಾಗಾಗಿ ಕೈಯಾಡಿಸಲು ಇ.ಓ. ಪ್ರಕಾಶನಿಗೆ ಅವಕಾಶವೇ ಇಲ್ಲ. ಹಾಗಾಗಿಯೇ ಈ ಮಳಿಗೆಗಳಲ್ಲಿ ವ್ಯವಹಾರ ನಡೆಸುವ ಮಾಲಿಕರಿಗೆ ವರ್ಷಕ್ಕೊಂದಾವರ್ತಿ ಬಿಸಿ ತಟ್ಟಿಸುತ್ತಾನೆ. ಅದು ಯಾವ ಪ್ರತಿನಿಧಿಗಳಿಗೂ ಗೊತ್ತಾಗುವುದಿಲ್ಲ. ಅಧಿಕಾರಿಗಳ ಮಟ್ಟದಲ್ಲೇ ತಾನೇ 20 ಮಳಿಗೆಯ ಮಾಲಿಕರಿಗೆ ಪ್ರತಿವರ್ಷ ಬಾಡಿಗೆ ನವೀಕರಣದ ಹೆಸರಲ್ಲಿ 'ಇದುವರೆಗೂ ನೀವು ನೀಡುತ್ತಾ ಬಂದ ಬಾಡಿಗೆಯಿಂದ ತಾ.ಪಂ.ಗೆ ಲಾಭವಾಗುತ್ತಿಲ್ಲ, ಹಾಗಾಗಿ ಈ ವರ್ಷದಿಂದ ಬಾಡಿಗೆ ನವೀಕರಣ ಮಾಡಲಾಗುವುದು' ಅಂತಾ ನೋಟಿಸು ನೀಡಿಬಿಡುತ್ತಾನೆ. 20 ವರ್ಷಗಳಿಂದ ಕಡಿಮೆ ಬಾಡಿಗೆ ರುಚಿ ಕಂಡವರಿಗೆ ಬಾಡಿಗೆ ದುಬಾರಿಯಾಗುವುದು ಹೊರೆ ಎನಿಸುವುದು ಸಹಜ. ಆಗ ಬಾಡಿಗೆದಾರರೆಲ್ಲ ಇ.ಓ. ಪ್ರಕಾಶನ ದರ್ಶನ ಮಾಡುತ್ತಾರೆ. ಆಗ ಸದ್ಯಕ್ಕೆ ನಮ್ಮ ತಂಟೆಗೆ ಬರಬೇಡಿ ಅಂತಾ ಹೇಳಿ ಪ್ರಕಾಶನ ಕಿಸೆಗೆ ಲಕ್ಷಾಂತರ ರೂಪಾಯಿ ಲಂಚ ತುರುಕಿ ಕೃತಾರ್ಥರಾಗಿಬಿಡುತ್ತಾರೆ. ಅತ್ತ ಬಾಡಿಗೆ ಹೆಚ್ಚು ಮಾಡುವ ನೋಟಿಸು ಕಸದ ಬುಟ್ಟಿ ಸೇರಿಬಿಡುತ್ತದೆ!

ಮಾತೋಶ್ರೀ ಮಂಜನ ಗೋಲ್‌ಮಾಲ್

ಇದೇ ಇಪ್ಪತ್ತು ಮಳಿಗೆಗಳಲ್ಲಿ ಮಂಜಾ ಎನ್ನುವ ಖತರ್‌ನಾಕ್ ಆಸಾಮಿಯೊಬ್ಬ ಮಾತೋಶ್ರೀ ಹೆಸರಿನ ಕಂಪ್ಯೂಟರ್ ಸೆಂಟರ್ ತೆರೆದು ಕೂತಿದ್ದಾನೆ. ಪಕ್ಕಾ ಬಿಜೆಪಿ ಬಾಲಬಡುಕನಾದ ಈತ ಮಾಡಿರುವ ಮಹಾಮೋಸಗಳು ಇಡೀ ಚಳ್ಳಕೆರೆಗೇ ಗೊತ್ತು. ಪ್ರಧಾನಿ ಮೋದಿಯ ವಂಶಜನಂತೆ ಆಡುವ ಮಂಜ ನಿರುದ್ಯೋಗಿಗಳಿಗೆ ಸುಖತ್ತಾಗಿ ಗಾಳ ಹಾಕಿ ದಂಧೆ ನಡೆಸುತ್ತಿದ್ದಾನೆ. ಕೇಂದ್ರ ಸರ್ಕಾರದ ಡಿ.ಆರ್.ಡಿ.ಓ. ಯೋಜನೆಯಲ್ಲಿ ನೌಕರಿಗಾಗಿ ಅವಕಾಶವಿರುವ ಯೋಜನೆಯನ್ನೇ ಎನ್‌ಕ್ಯಾಶ್ ಮಾಡಿಕೊಳ್ಳಲು ಮುಂದಾದ. "ಕೇಂದ್ರ ಸರ್ಕಾರದ ಈ ಯೋಜನೆಗೆ ನಿರುದ್ಯೋಗಿ ಯುವಕಯುವತಿಯರಿಗೆ ದೇಶದ ಯಾವುದೇ ಕಂಪನಿಯಲ್ಲಿ ನೌಕರಿ ಬೇಕೆಂದರೆ ಕಂಪ್ಯೂಟರ್ ಅನುಭವ ಬೇಕು. ಅಂತಾ ಅನುಭವ ಹೊಂದಿರುವ ಸರ್ಟಿಫಿಕೇಟು ನೀಡುವ ಅಧಿಕಾರ ಸರ್ಕಾರದಿಂದ ರಾಜ್ಯದಲ್ಲೇ ನಮ್ಮ ಮಾತೋಶ್ರೀ ಕಂಪ್ಯೂಟರ್ ಸೆಂಟರಿಗೆ ಲಭಿಸಿದೆ. ಅದೂ ಮೋದಿ ಡಿಜಿಟಲ್ ಇಂಡಿಯಾ ಸಾಕ್ಷರತಾ ಪ್ರಮಾಣಪತ್ರ" ಅಂತಾ ಜಾಲತಾಣಗಳಲ್ಲಿ ಸುದ್ದಿ ಹರಿಬಿಟ್ಟ. "ನಮ್ಮ ಸೆಂಟರಿನಲ್ಲಿ ತರಬೇತಿ ಪಡೆದ ಅನುಭವದ ಸರ್ಟಿಫಿಕೇಟು ಇದ್ದರೆ ದೇಶದ ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ಕೆಲಸ ಗ್ಯಾರಂಟಿ" ಅಂತಾ ಪ್ರಚಾರ ಮಾಡಿದ್ದೇ ತಡ ನಿರುದ್ಯೋಗಿಗಳು ರಾಜ್ಯಾದ್ಯಂತದಿಂದ ಇವನ ಮಾತೋಶ್ರೀ ಕಂಪ್ಯೂಟರ್ ಸೆಂಟರ್‌ಗೆ ದಾಂಗುಡಿಯಿಟ್ಟಿದ್ದರು.

ಹಾಗೆ ಬಂದ ನಿರುದ್ಯೋಗಿಗಳಿಂದ ಪ್ರತಿ ಸರ್ಟಿಫಿಕೇಟಿಗೆ ಒಂದು ಸಾವಿರದಿಂದ ಐದು ಸಾವಿರದವರೆಗೆ ಪೀಕಿ ಲಕ್ಷಾಂತರ ರೂಪಾಯಿ ವಸೂಲು ಮಾಡಿದ್ದ. ಕಂಪ್ಯೂಟರ್ ತರಬೇತಿ ನೀಡಲಾಗುವುದೆಂದವನು ಅದರ ಸುದ್ದಿಗೇ ಹೋಗಲಿಲ್ಲ. ತಿಂಗಳುಗಳೇ ಕಳೆದರೂ ಇವನಿಂದ ಯಾವ ಸುದ್ದಿಯಿಲ್ಲದಿದ್ದರಿಂದ. ಅನುಮಾನಗೊಂಡ ಒಂದಷ್ಟು ಮಂದಿ ಚಳ್ಳಕೆರೆಗೆ ಬಂದು ಮೋದಿ ಡಿಜಿಟಲ್ ಇಂಡಿಯಾ ಸಾಕ್ಷರತಾ ಪ್ರಮಾಣಪತ್ರದ ನಕಲಿ ಕರ್ತೃ ಮಂಜನ ಕೊರಳಪಟ್ಟಿ ಹಿಡಿದು ದಾಂಧಲೆ ಮಾಡಿದ್ದರು. ಅವತ್ತು ಅದೇ ಮಾರ್ಗವಾಗಿಯೇ ಶಾಸಕ ರಘುಮೂರ್ತಿ ಪ್ರಯಾಣ ಮಾಡುತ್ತಿದ್ದರು. ತಾಲ್ಲೂಕು ಪಂಚಾಯ್ತಿ ಮಳಿಗೆಯೆದುರು ಜನ ಸೇರಿದ್ದನ್ನು ಗಮನಿಸಿದ ಅವರು ಜನರನ್ನು ವಿಚಾರಿಸಿದಾಗ ಮಂಜನ ಅಸಲಿ ಕಥೆ ಬಯಲಾಯಿತು. ರಘುಮೂರ್ತಿ ತಡಮಾಡದೆ ಪೊಲೀಸರನ್ನು ಕರೆಸಿ ಮಂಜನ ವಿರುದ್ಧ ಎಫ್‌ಐಆರ್ ಜಡಿಯಲು ಹೇಳಿದ್ದರು. ಜೊತೆಗೆ ತಾಲ್ಲೂಕು ಪಂಚಾಯ್ತಿ ಮಳಿಗೆಯಿಂದ ಮಂಜನ ಮಾತೋಶ್ರೀ ಕಂಪ್ಯೂಟರ್ ಸೆಂಟರ್ ಎತ್ತಂಗಡಿ ಮಾಡಿಸಲು ಇಒ ಪ್ರಕಾಶನಿಗೂ ಸೂಚನೆ ನೀಡಿದ್ದರು.



ಬಸವರಾಜು

ಅದರಂತೆ ಮಂಜನ ವಿರುದ್ಧ ಕ್ರಮಕ್ಕಾಗಿ ಇ.ಓ. ಪ್ರಕಾಶ ನೋಟಿಸೊಂದನ್ನು ಜಾರಿ ಮಾಡಿದ. ಅವತ್ತೇ ರಾತ್ರಿ ಮಂಜ ಮತ್ತು ಇ.ಓ. ಪ್ರಕಾಶನ ನಡುವೆ ಮ್ಯೂಚುವಲ್ ಸೆಟ್ಲ್‌ಮೆಂಟಾಗಿ ಮಂಜ ಇ.ಓ. ಪ್ರಕಾಶನಿಗೆ 2 ಲಕ್ಷ ಸೆಗಣಿ ತಿನ್ನಿಸಿದ್ದ. ನಂತರ ಠಾಣೆಯಲ್ಲಿ ಬಂದ ಯುವಕರಿಗೆ ಅಷ್ಟೋ ಇಷ್ಟೋ ಹಣ ನೀಡಿ ಕೈತೊಳೆದುಕೊಂಡ. ಅಲ್ಲೂ ಅಧಿಕಾರಿಗಳು ಸೆಗಣಿ ತಿಂದು ಕೈ ಒರೆಸಿಕೊಂಡರು. ನಂತರ ಇ.ಓ. ಪ್ರಕಾಶ ತಾನೇ ನೀಡಿದ್ದ ನೋಟಿಸಿನ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಲು ಮಂಜನಿಗೆ ಸಲಹೆ ನೀಡಿದ್ದ. ಇತ್ತ ಅಮೇಧ್ಯ ನೆಕ್ಕಿದ ಪೊಲೀಸರು ಶಾಸಕ ರಘುಮೂರ್ತಿಯ ಮಾತಿಗೂ ಬೆಲೆಕೊಡದೆ ಎಫ್‌ಐಆರ್ ಜಡಿಯದೆ ಕೇಸು ಖುಲಾಸೆ ಮಾಡಿದರು. ಅತ್ತ ಇ.ಓ. ಪ್ರಕಾಶ ಮಳಿಗೆ ಖಾಲಿ ಮಾಡಿಸಲಿಲ್ಲ, ನೋಟಿಸಿಗೆ ಸಮಜಾಯಿಷಿ ನೀಡಲು ಇ.ಓ. ಮಂಜನಿಗೆ ಒಂದು ವಾರ ಸಮಯ ನೀಡಿದ್ದನಲ್ಲ, ಅದನ್ನೇ ಮಂಜ ಸದುಪಯೋಗ ಪಡಿಸಿಕೊಂಡು ನ್ಯಾಯಾಲಯದಲ್ಲಿ ಇ.ಓ. ನೋಟಿಸಿನ ವಿರುದ್ಧ ಕೇಸಾಕಿ "ಏಕಾಏಕಿ ಮಳಿಗೆ ಖಾಲಿ ಮಾಡಲು ಸಾಧ್ಯವಿಲ್ಲ, ಸಮಯಾವಕಾಶ ಬೇಕು" ಅಂತಾ ವಾದಿಸಿದ. ನ್ಯಾಯಾಲಯ ಮಂಜನಿಗೆ ಸೈ ಎಂದಿತು. ಮಂಜ, ಪ್ರಕಾಶ, ಚಳ್ಳಕೆರೆ ಪೊಲೀಸರು ಒಕ್ಕೊರಲಿನಿಂದ ಭ್ರಷ್ಟಾಚಾರಕ್ಕೆ ಜೈ ಅಂದರು!

ಅಂಥಾ ಧನದಾಹಿ ಪ್ರಕಾಶ ಇವತ್ತು ರಾಜನೆಂಬ ಪೊಲಿಟಿಕಲ್ ಕಂಟ್ರಾಕ್ಟುದಾರನ ಖೆಡ್ಡಾಕ್ಕೆ ಬಿದ್ದು ಭ್ರಷ್ಟಾಚಾರ ನಿಗ್ರಹ ದಳದ ಡಿ.ವೈ.ಎಸ್.ಪಿ. ಮಂಜುನಾಥ ಮತ್ತವರ ಸಿಬ್ಬಂದಿಗಳ ಕೈಗೆ ತಗುಲಿಕೊಂಡಿದ್ದಾನೆ. ಇಂಥಾ ಪ್ರಕರಣಗಳಲ್ಲಿ ಸರ್ಕಾರಿ ಆರೋಪಿಗಳು ಸಲೀಸು ಹೊರಬಂದು, ಸರ್ಕಾರಿ ಕುರ್ಚಿಯಲ್ಲಿ ಅಂಡೂರಿ, ಹೊರಬರಲು ಖರ್ಚು ಮಾಡಿದ ರೊಕ್ಕವನ್ನು ಬಡ್ಡಿಸಮೇತ ವಸೂಲಿ ಶುರು ಮಾಡುತ್ತಾರೆ. ಪ್ರಕಾಶನ ವಿಚಾರದಲ್ಲೂ ಇಂತದ್ದೇ ಘಟಿಸಿದರೆ ಅಚ್ಚರಿಪಡುವಂತಿಲ್ಲ...

ಗೋ ಹೆಸರಲ್ಲಿ ಸರ್ಕಾರಕ್ಕೆ ವಂಚನೆ

"ಅಮೃತಧಾರಾ ಗೋಶಾಲೆಯಲ್ಲಿ 402 ದನಗಳಿವೆಯೆಂದು ಸಂಸ್ಥೆ ಹೇಳಿದೆ. ಆದರೆ 120 ರಿಂದ 130 ದನಗಳಿರುವುದು ಕಂಡುಬಂದಿದೆ. ಇಲ್ಲಿ ಉದ್ದೇಶಿತ ತಳಿ ವೃದ್ಧಿ ಕಾರ್ಯವನ್ನು ಕೈಗೊಂಡಿರುವುದಿಲ್ಲ. ಧಾರ್ಮಿಕ ನೀತಿಗೆ ವಿರುದ್ಧ ಎಂದು ಕೃತಕ ಗರ್ಭಧಾರಣೆಯನ್ನು ಅನುಷ್ಠಾನಗೊಳಿಸುತ್ತಿಲ್ಲ. 2006-07ನೇ ಸಾಲಿನಲ್ಲಿ ರೂ. 10 ಲಕ್ಷದ ಅನುದಾನವನ್ನು ಪಡೆದಿದ್ದು ದನದ ಕೊಟ್ಟಿಗೆಗಳು, ಕೊಳವೆಬಾವಿಗಳು ಮುಂತಾದವನ್ನು ನಿರ್ಮಿಸಲಾಗಿದೆ. ಇದೊಂದು ತಳಿವರ್ಧನಾ ಕೇಂದ್ರವಾಗುವ ಬದಲು, ತಳಿಗಳ ಪ್ರಾತ್ಯಕ್ಷಿಕಾ ಕೇಂದ್ರವಾಗಿ ಅಸ್ತಿತ್ವದಲ್ಲಿದೆ. ಕೆಲ ದಾಖಲೆಗಳನ್ನು ಇಡಲಾಗಿದೆಯಾದರೂ, ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟಿಲ್ಲ."

ಕರ್ನಾಟಕದ ಪ್ರಮುಖ ಮಠ ಹಾಗೂ ದೇವಸ್ಥಾನವೊಂದಕ್ಕೆ ಸಂಬಂಧಿಸಿದ ಸಂಸ್ಥೆಗಳು ಗೋವಿನ ಹೆಸರಲ್ಲಿ ಸರ್ಕಾರಕ್ಕೇ ವಂಚಿಸಿದ ಪ್ರಕರಣವಿದು. ರಾಘವೇಶ್ವರ ಭಾರತೀ ಸ್ವಾಮೀಜಿಗಳ ನೇತೃತ್ವದ ರಾಮಚಂದ್ರಾಪುರ ಮಠ ಹಾಗೂ 'ಧರ್ಮಾಧಿಕಾರಿ' ಡಾ. ಡಿ ವೀರೇಂದ್ರ ಹೆಗ್ಗಡೆಯ ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ನಡೆಸಲ್ಪಡುತ್ತಿರುವ ಗೋಶಾಲೆಗಳು, ಸರ್ಕಾರದ ಯೋಜನೆಯೊಂದರಿಂದ 'ಗೋ' ಅಭಿವೃದ್ಧಿಗಾಗಿ ಹಣ ಪಡೆದು, ಅಭಿವೃದ್ಧಿಯನ್ನೂ ಮಾಡದೇ; ಇತ್ತ ಗೋವುಗಳನ್ನೂ ಬೆಳೆಸದೆ ಹಣ ದುರುಪಯೋಗಪಡಿಸಿಕೊಂಡಿವೆ.

ಇದನ್ನು 'ಕೃಷಿ ತಂತ್ರಜ್ಞರ ಸಮಿತಿ'ಯ ಮೌಲ್ಯಮಾಪನ ವರದಿ ತೆರೆದಿಟ್ಟಿದೆ.

ನಡೆದಿರುವುದು?

ಕರ್ನಾಟಕದಲ್ಲಿರುವ ಹಳ್ಳಿಕಾರ್, ಅಮೃತ ಮಹಲ್, ದೇವಣಿ, ಕೃಷ್ಣ ವ್ಯಾಲಿ, ಖಿಲಾರೆ ಮತ್ತು ಮಲೆನಾಡು ಗಿಡ್ಡತಳಿಗಳು ಕಾಲಕಳೆದಂತೆ ಹಾಗೂ ವಿದೇಶಿ ತಳಿಗಳ ಜನಪ್ರಿಯತೆಯಿಂದಾಗಿ ವಿನಾಶದ ಅಂಚಿನಲ್ಲಿವೆ. ಉತ್ತಮ ಸ್ಥಳೀಯ ಗೋತಳಿಗಳು ಮತ್ತು ಅವುಗಳ ಅನುವಂಶಿಕಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು 2006-07ನೇ ಸಾಲಿನಲ್ಲಿ 'ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆ' ಆರಂಭಿಸಿತು.

ಪ್ರಸಿದ್ಧ ತಳಿಗಳನ್ನು ಸಂವರ್ಧನೆಗೊಳಿಸಲು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಅರ್ಹ ಸರ್ಕಾರೇತರ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ನೀಡಲು ಯೋಜನೆ ರೂಪುಗೊಂಡಿತ್ತು. ಈ ಯೋಜನೆಯಲ್ಲಿ ಕೃತಕ ಗರ್ಭಧಾರಣೆಯ ಮೂಲಕ ತಳಿ ಸಂವರ್ಧನೆ ಮತ್ತು ಸರ್ಕಾರ ನಿಗದಿಪಡಿಸಿದ ದರದಲ್ಲಿ ಕರುಗಳನ್ನು ಮಾರಾಟ ಮಾಡಬೇಕು ಎಂದು ಹೇಳಲಾಗಿತ್ತು.

ಮೌಲ್ಯಮಾಪನ ಕ್ರಿಯೆ

ಒಂದು ವರ್ಷಗಳ ಕಾಲ ಓದಿದ ಪಾಠವನ್ನು ಪರೀಕ್ಷೆಗಳ ಮೂಲಕ ಮೌಲ್ಯಮಾಪನಕ್ಕೆ ಒಳಪಡಿಸುವುದು ನಡೆದುಕೊಂಡು ಬಂದಿರುವ ಪದ್ಧತಿ. ಈ ವಿಚಾರದಲ್ಲಿಯೂ ಸರ್ಕಾರ ತನ್ನದೇ ಯೋಜನೆ ಕಾಲಾನಂತರದಲ್ಲಿ ಏನಾಯಿತು ಎಂದು ಮೌಲ್ಯಮಾಪನ ನಡೆಸಲು ಮುಂದಾಯಿತು. ಪಶುಸಂಗೋಪನೆ ಹಾಗು ಪಶುವೈದ್ಯಕೀಯ ಸೇವಾ ಇಲಾಖೆಯು ಈ ಪ್ರಕ್ರಿಯೆಯನ್ನು ತಜ್ಞರನ್ನು ಒಳಗೊಂಡ ಬೆಂಗಳೂರು ಮೂಲದ 'ಕೃಷಿ ತಂತ್ರಜ್ಞರ ಸಮಿತಿ'ಗೆ ವಹಿಸಿತ್ತು.

ಅದರ ಭಾಗವಾಗಿ ಅಧ್ಯಯನ ನಡೆಸಿದ ಡಾ. ಕೆ. ಎಸ್. ಸುಬ್ರಹ್ಮಣ್ಯ, ಡಾ. ಟಿ. ಸಿ. ಚನ್ನಕೃಷ್ಣಯ್ಯ, ಡಾ. ವಿ. ಎಲ್. ಮಧುಪ್ರಸಾದ್ ಅವರಿದ್ದ ತಂಡ, 30 ಪುಟಗಳ ದೀರ್ಘ ವರದಿಯನ್ನು ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬೆಂಗಳೂರು ಇವರ ಮೂಲಕ ಪಶು ಸಂಗೋಪನೆ ಮತ್ತು ಪಶುವೈದ್ಯ ಇಲಾಖೆಗೆ 2016 ಮೇ 31 ರಂದು ಸಲ್ಲಿಸಿತು.

ವರದಿಯ ಮಾನದಂಡಗಳು

2006-07 ನೇ ಸಾಲಿನಿಂದ 2013-14ನೇ ಸಾಲಿನವರೆಗೆ, ದೇಶೀ ತಳಿಗಳ ಸಂರಕ್ಷಣೆಯ ಸಲುವಾಗಿ ಒಟ್ಟು 47 ಆಯ್ದ ಸ್ವಯಂ ಸೇವಾಸಂಸ್ಥೆಗಳು/ವಿಶ್ವಸ್ಥ ಮಂಡಳಿಗಳಿಗೆ ಆರ್ಥಿಕ ಅನುದಾನವನ್ನು ನೀಡಲಾಗಿತ್ತು.

ಈ ಸ್ವಯಂಸೇವಾ ಸಂಸ್ಥೆಗಳು/ವಿಶ್ವಸ್ಥ ಮಂಡಳಿಗಳು ಹೆಚ್ಚಾಗಿ ಧಾರ್ಮಿಕ ಸಂಸ್ಥೆಗಳಾಗಿದ್ದು, ರಾಸುಗಳ ತಳಿ ಮತ್ತು ಉತ್ಪಾದಕತೆಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ, ಬದಲಿಗೆ ಅವುಗಳನ್ನು ತಾವು ನಡೆಸುವ ಗೋಶಾಲೆಗಳು, ಗೋಸದನಗಳು ಮತ್ತು ಪಿಂಜ್ರಾಪೋಲುಗಳಲ್ಲಿ ಸಲಹುವ ಕಾರ್ಯದಲ್ಲಿ ತೊಡಗಿಕೊಂಡಿದ್ದವು.

ಇವುಗಳ ಮೌಲ್ಯಮಾಪನಕ್ಕೆ ಉದ್ದೇಶಿತ ಮಾದರಿ (ಪರ್ಪಸಿವ್ ಸ್ಯಾಂಪ್ಲಿಂಗ್) ರೀತಿಯಲ್ಲಿ, ರಾಜ್ಯದ ನಾಲ್ಕು ವಿಭಾಗಗಳಲ್ಲಿ ಒಂದೊಂದು ಸ್ವಯಂಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಮೈಸೂರು ವಿಭಾಗದಿಂದ ಮಾತ್ರ ಎರಡು ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡರು.

ಆರು ಸ್ಥಳೀಯ ತಳಿಗಳನ್ನು ಇಟ್ಟಿರುವ ಮತ್ತು ಸರ್ಕಾರದ ಅನುದಾನವನ್ನು ಈ ಯೋಜನೆಯಡಿಯಲ್ಲಿ ಪಡೆದು ಸ್ಥಳೀಯ ತಳಿಗಳ ತಳಿವರ್ಧನೆ, ಸಂರಕ್ಷಣೆ ಮತ್ತು ಪ್ರಸರಣೆ ಕಾರ್ಯದಲ್ಲಿ ತೊಡಗಿಸಿಕೊಂಡಿವೆ ಎಂದು ಹೇಳಿದ್ದ ಸಂಸ್ಥೆಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು.

ಆಯ್ಕೆ ಮಾಡಿಕೊಂಡ ಸಂಸ್ಥೆಗಳು ಹೀಗಿದ್ದವು

ಬೆಂಗಳೂರು ವಿಭಾಗ: ಅಮೃತಧಾರಾ ಗೋಶಾಲೆ, ಶ್ರೀ ರಾಮಚಂದ್ರಾಪುರ ಮಠ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.



ಮೈಸೂರು ವಿಭಾಗ: (1) ಶ್ರೀ ಕ್ಷೇತ್ರ ಧರ್ಮಸ್ಥಳ ಗೋಶಾಲೆ, ಕೊಕ್ಕಡ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ. (2) ನಂದಗೋಕುಲ ಚಾರಿಟೇಬಲ್ ಟ್ರಸ್ಟ್, ಅಮೃತಧಾರಾ ಗೋಶಾಲೆ, ಗೋಳಿಗುಂಡಿ ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.

ಬೆಳಗಾವಿ ವಿಭಾಗ: ಅಮೃತಧಾರಾ ಗೋಶಾಲೆ, ಹೊಸಾಡ ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ಕಲಬುರಗಿ ವಿಭಾಗ: ಶ್ರೀ ಎಸ್.ಜಿ.ಎಸ್.ಬಿ.ವಿ. ಟ್ರಸ್ಟ್, ಚಿಕ್ಕ ಸೂಗೂರು, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ.

ಇವುಗಳಲ್ಲಿ ಒಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಆಡಳಿತಕ್ಕೆ ಒಳಪಟ್ಟಿದ್ದರೆ, ಇನ್ನು ಮೂರು 'ವಿಶ್ವ ಗೋ ಸಮ್ಮೇಳನ'ದ ರೂವಾರಿ, ಪ್ರೇಮಲತಾ ದಿವಾಕರ್ ಅತ್ಯಾಚಾರ ಪ್ರಕರಣದಲ್ಲಿ ಸುದ್ದಿಯಾದ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿಗೆ ಸೇರಿದ್ದಾಗಿವೆ.

ಸದರಿ ಮೌಲ್ಯಮಾಪನಕ್ಕಾಗಿ ತಂಡಕ್ಕೆ ಸೂಕ್ತ ತರಬೇತಿ ನೀಡಿ, ಒಟ್ಟು ಐದು ಕಡೆಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಅವರು ಪಡೆದುಕೊಂಡ 5 ಮಾಹಿತಿಮೂಲಗಳು ಹೀಗಿವೆ:

ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಆಯುಕ್ತಾಲಯದಿಂದ.

ಸಂಬಂಧಪಟ್ಟ ಜಿಲ್ಲೆಯ, ಉಪನಿರ್ದೇಶಕರುಗಳಿಂದ.

ಸ್ವಯಂಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಪ್ರದೇಶದ ವ್ಯಾಪ್ತಿಯುಳ್ಳ ತಾಲ್ಲೂಕು ಹಾಗೂ ಪ್ರದೇಶದ ಸಹಾಯಕ ನಿರ್ದೇಶಕರು/ ಪಶುವೈದ್ಯಾಧಿಕಾರಿಗಳಿಂದ.

ಆಯ್ಕೆ ಮಾಡಲ್ಪಟ್ಟ ಸ್ವಯಂಸೇವಾ ಸಂಸ್ಥೆಗಳಿಂದ.

ಯೋಜನೆಯಡಿಯಲ್ಲಿ ಸವಲತ್ತು ಪಡೆದ ಫಲಾನುಭವಿ ರೈತರುಗಳಿದ್ದಲ್ಲಿ ಅವರಿಂದ.

ವರದಿಯಲ್ಲೇನಿದೆ?

ಅಮೃತಧಾರಾ ಗೋಶಾಲೆ, ಶ್ರೀ ರಾಮಚಂದ್ರಾಪುರ ಮಠ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಇದರ ಬಗ್ಗೆ ಮೌಲ್ಯಮಾಪನ ತಂಡವು ಹೀಗೆ ಬರೆದಿದೆ:

"ಈ ಗೋಶಾಲೆಯಲ್ಲಿ 402 ದನಗಳಿವೆಯೆಂದು ಸಂಸ್ಥೆ ಹೇಳಿದೆ. ಆದರೆ 120 ರಿಂದ 130 ದನಗಳಿರುವುದು ಕಂಡುಬಂದಿದೆ. ಇಲ್ಲಿ ಉದ್ದೇಶಿತ ತಳಿ ವೃದ್ಧಿ ಕಾರ್ಯವನ್ನು ಕೈ ಗೊಂಡಿರುವುದಿಲ್ಲ, ಧಾರ್ಮಿಕ ನೀತಿಗೆ ವಿರುದ್ಧ ಎಂದು ಕೃತಕ ಗರ್ಭಧಾರಣೆಯನ್ನು ಅನುಷ್ಠಾನಗೊಳಿಸುತ್ತಿಲ್ಲ. 2006-07 ನೇ ಸಾಲಿನಲ್ಲಿ ರೂ. 10 ಲಕ್ಷದ ಅನುದಾನವನ್ನು ಪಡೆದಿದ್ದು ದನದ ಕೊಟ್ಟಿಗೆಗಳು, ಕೊಳವೆಬಾವಿಗಳು ಮುಂತಾದವನ್ನು ನಿರ್ಮಿಸಲಾಗಿದೆ. ಇದೊಂದು ತಳಿವರ್ಧನಾ ಕೇಂದ್ರವಾಗುವ ಬದಲು, ತಳಿಗಳ ಪ್ರಾತ್ಯಕ್ಷಿಕಾ ಕೇಂದ್ರವಾಗಿ ಅಸ್ತಿತ್ವದಲ್ಲಿದೆ. ಕೆಲ ದಾಖಲೆಗಳನ್ನು ಇಡಲಾಗಿದೆಯಾದರೂ, ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟಿಲ್ಲ."

ಇದೇ ರಾಘವೇಶ್ವರ ಸ್ವಾಮಿ ಅಧೀನದಲ್ಲಿರು... ನಂದಗೋಕುಲ ಚಾರಿಟೇಬಲ್ ಟ್ರಸ್ಟ್, ಅಮೃತಧಾ... ಗೋಶಾಲೆ, ಗೋಳಿಗುಂಡಿ ಕುಂದಾಪುರ ತಾಲ್ಲೂ... ಉಡುಪಿ ಜಿಲ್ಲೆ ಹಾಗೂ ಅಮೃತಧಾರಾ ಗೋಶಾ... ಹೊಸಾಡ ಕುಮಟ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ... ಪರಿಸ್ಥಿತಿಗಳೂ ಸರಿಸುಮಾರು ಇದೇ ರೀತಿಯಾಗಿವೆ. ... ಮತ್ತಷ್ಟು ಕಳಪೆಯಾಗಿದೆ ಎಂದು ಈ ವರದಿ ಹೇಳುತ್ತ...

ಇನ್ನೊಂದು ಪ್ರಮುಖ ಸಂಸ್ಥೆ ಶ್ರೀ ಕ್ಷೇತ್ರ ಧರ್ಮಸ್ಥ... ಸೇರಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗೋಶಾಲೆ, ಕೊಕ್ಕ... ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. ಇದರ ಬ... ಅಧ್ಯಯನ ತಂಡವು ಹೀಗೆ ಬರೆದಿದೆ:

"ಈ ಸಂಸ್ಥೆಗೆ 8.00 ಎಕರೆ ಮಾತ್ರ ಜಮೀನಿ... ಇದು ನಿಗದಿಪಡಿಸಲ್ಪಟ್ಟ ಪ್ರದೇಶಕ್ಕಿಂತಲೂ 2.00 ಎ... ಕಡಿಮೆ ಇರುತ್ತದೆ. ಗಂಡು ಮತ್ತು ಹೆಣ್ಣು ದನಗಳ... ಒಟ್ಟಾಗಿಯೇ ಮೇಯಲು ಬಿಡಲಾಗುತ್ತಿದೆ. ಕೃ... ಗರ್ಭಧಾರಣೆಯನ್ನೂ ಅನುಸರಿಸುತ್ತಿಲ್ಲ. 2008-09... ಸಾಲಿನಲ್ಲಿ ರೂ. 3.33 ಲಕ್ಷಗಳ ಅನುದಾ... ಬಿಡುಗಡೆಯಾಗಿದ್ದು ಅದನ್ನು 3 ಕೊಟ್ಟಿಗೆಗಳನ್ನು ಕಟ್ಟ... ಉಪಯೋಗಿಸಿಕೊಳ್ಳಲಾಗಿದೆ. ಯಾವುದೇ ಸಮು... ದಾಖಲೆಗಳನ್ನಿಟ್ಟಿಲ್ಲದಿರುವುದರಿಂದ ಹೆಚ್ಚುವಿಕೆ ತಳಿ ಅಭಿವ... ಕ್ರಿಯೆಯಿಂದ ಆಗಿದೆಯೇ ಎಂದು ತಿಳಿಯುವು... ಕಷ್ಟಕರವಾಗಿದೆ.'"

ಉಪಸಂಹಾರ

ಇದೆಲ್ಲವನ್ನೂ ನೋಡಿ ಅಧ್ಯಯನ ತಂಡವೂ ... ವರದಿಯಲ್ಲಿ ಗಂಭೀರ ಶಿಫಾರಸ್ಸುಗಳನ್ನು ಮಾಡಿದೆ. ಅವು... ಪ್ರಮುಖ ಅಂಶಗಳು ಹೀಗಿವೆ:

ಎಲ್ಲಾ ಸಂಸ್ಥೆಗಳೂ, ಸಮಾಜಕ್ಕೆ ಬೇಡದ, ಅನುತ್ಪಾ... ಹಾಗೂ ಅನಾರೋಗ್ಯ ಪೀಡಿತ ರಾಸುಗಳನ್ನು ಇಟ್ಟುಕೊಂ... ಮಾನವೀಯತೆಯ ಮೇರೆಗೆ ಸಾಕುತ್ತಿರುವ ಮೂ... ಗೋಶಾಲೆ, ಗೋಸದನ ಹಾಗೂ ಪಿಂಜ್ರಾಪೋಲ್‌ಗಳ... ಕಾರ್ಯ ನಿರ್ವಹಿಸುತ್ತಿವೆ.

ಎಲ್ಲಾ ಸಂಸ್ಥೆಗಳ ತಳಿ ಅಭಿವೃದ್ಧಿ ಜ್ಞಾನ ತೀರಾ ಕಡಿ... ಅಲ್ಲದೆ ವೈಜ್ಞಾನಿಕವಂತೂ ಖಂಡಿತ ಅಲ್ಲ.

ಯಾವುದೇ ಸಂಸ್ಥೆ ಸ್ಥಾಪಿತ ತಳಿಯ ದನಗಳನ್ನು ... ಅಭಿವೃದ್ಧಿಗಾಗಿ ಇಟ್ಟಿರುವುದಿಲ್ಲ.

ಯಾವುದೇ ಸಂಸ್ಥೆ ತಳಿ ಅಭಿವೃದ್ಧಿಗಾಗಿ ಕೃ... ಗರ್ಭಧಾರಣೆ ಅನುಸರಿಸಿರುವುದಿಲ್ಲ ಮತ್ತು ... ಅಭಿವೃದ್ಧಿಯಲ್ಲಿ ಪ್ರಮುಖಾಂಶವಾದ ಕೃತಕ ಗರ್ಭಧಾ... ವಿಧಾನಕ್ಕೆ ಅವರು ವಿರೋಧಿಗಳೆಂದು ಹೇಳಿದ್ದಾರೆ, ತನ್ಮೂ... ಯೋಜನೆಯ ಉದ್ದೇಶವನ್ನೇ ವಿಫಲಗೊಳಿಸಿರುತ್ತಾರೆ.

ಯಾವುದೇ ಸಂಸ್ಥೆ ತಾವು ಪಡೆದ ಅನುದಾ... ಪರಿಪೂರ್ಣ ಸದ್ವಿನಿಯೋಗ ದಾಖಲೆ ಒದಗಿಸಿರುವುದಿ... ಸದರಿ ಸಂಸ್ಥೆಗಳು ಈಗಿರುವ ಕಟ್ಟಡಗಳು/ ಮೇವಿ... ತಾಕುಗಳು ಇತ್ಯಾದಿಗಳಿಗೆ ಈ ಅನುದಾನದೊಂದಿಗೆ ಇತ... ಸಂಸ್ಥೆ ಅಥವಾ ದಾನಿಗಳಿಂದಲೂ ಹಣ ಪಡೆದಿರು... ಯೋಜನೆಗೂ ಮೊದಲೇ ಇದ್ದಿರಬಹುದಾದ ಸಾಧ್ಯತೆ ಎಂ... ಅನುಮಾನ ವ್ಯಕ್ತಪಡಿಸಿದೆ.

ಈ ರೀತಿ ಯೋಜನೆಯಲ್ಲಿ ಪಾರದರ್ಶಕತೆ ಕೊ... ಮತ್ತು ವಂಚನೆ ಎಸಗಿರುವುದನ್ನು ಪತ್ತೆ ಹಚ್ಚಿರುವ ಅಧ್ಯ... ತಂಡವು ಯೋಜನೆಯನ್ನು ಸ್ಥಗಿತಗೊಳಿಸಬೇಕೆಂ... ಸೂಚಿಸಿದೆ. 'ಸುವರ್ಣ ಕರ್ನಾಟಕ ಗೋತಳಿ ಸಂರಕ್ಷ... ಯೋಜನೆ'ಯ ಸರ್ಕಾರೀ ಆದೇಶ ಉಲ್ಲಂಘಿ... ಅನುಷ್ಠಾನಗೊಳಿಸಲಾಗಿದೆ. ಹೀಗಾಗಿ ಸಂಸ್ಥೆಗಳ ಆಸ್ತಿಗಳ... (ಯೋಜನೆಯಡಿಯಲ್ಲಿ ಪಡೆದಿದ್ದಲ್ಲಿ) ಸರ್ಕಾ... ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಐದೂ ಸಂಸ್ಥೆಗಳು, ನಿರ್ದಿಷ್ಟಪಡಿಸಲಾದ ಅನೇಕ ಷರ... ಹಾಗೂ ನಿಬಂಧನೆಗಳನ್ನು ಉಲ್ಲಂಘಿಸಿರುವು... ಕಂಡುಬಂದಿದೆ. ಆದುದರಿಂದ ಈ ಸಂಸ್ಥೆಗಳಿಗೆ ಕೊಡಲಾ... ಅನುದಾನಗಳನ್ನು ಸರ್ಕಾರೀ ಆದೇಶದ ಪ್ರಕಾರ ವಸೂಲ... ಮಾಡಲು ಶಿಫಾರಸು ಮಾಡಿದೆ. ಜೊತೆಗೆ ಇತರ ಸಂಸ್ಥೆ... ಬಗ್ಗೆಯೂ ಮೌಲ್ಯಮಾಪನ ಮಾಡಲು ಹೇಳಿದೆ.

ಸಮಿತಿ ಈ ಶಿಫಾರಸ್ಸನ್ನು ಮಾಡಿ ನಾಲ್ಕು ತಿಂಗ... ಕಳೆದಿದೆ. ಆದರೆ ಈ ಬಗ್ಗೆ ಇಲಾಖೆ ಕ್ರಮ ಕೈಗೊಂಡಿ... ವರದಿಯಾಗಿಲ್ಲ. ಈ ಬಗ್ಗೆ ಪಶು ಸಂಗೋಪನೆ ಮ... ಪಶುವೈದ್ಯ ಇಲಾಖೆಯನ್ನು 'ಸಮಾಚಾರ' ಸಂಪರ್ಕಿಸ... ಯತ್ನಿಸಿತಾದರೂ ಕರೆ ಸ್ವೀಕರಿಸಲಿಲ್ಲ. ಇನ್ನು ರಾಮಚಂದ್ರಾ... ಮಠವನ್ನು ಸಂಪರ್ಕಿಸಲು ಕರೆ ಮಾಡಿದರೂ ... ಸ್ವೀಕರಿಸಲಿಲ್ಲ.

■ ಸಮಾಚಾರ್.ಕಾಮ...

ಸಂಘಿ ಸಹವಾಸ; ಅನುಪಮಾಗೆ ವನವಾಸ!!



ಟಿ. ರವಿ



ಅನುಪಮಾ



ೋಭಾ ಕರಂದ್ಲಾಜೆ

ಕೇವಲ ಎರಡ್ಮೂರೇ ತಿಂಗಳ ಹಿಂದಿನ ಮಾತು. ಗ್ಗಿ ಡಿವೈಎಸ್‌ಪಿ ಆಗಿದ್ದ ಉಡುಪಿಯ ಕೊಂಕಣಿಗರ ಗಿ ಅನುಪಮಾ ಶೆಣೈಗೆ ಕಿತ್ತೂರು ರಾಣಿ ಚೆನ್ನಮ್ಮಳ ಪು ಬಂದುಬಿಟ್ಟಿತ್ತು! ಅಂದಾಕೆಯನ್ನು ಧೀರೋದಾತ್ತ ಲೀಸ್ ಅಧಿಕಾರಿಣಿ ಎಂದು ಕೊಂಡಾಡಿದವರೇ ಹೆಚ್ಚು. ಪರಿವಾರದ ಸಂಚುಗಾರರು ಕುಮ್ಮಕ್ಕು ಕೊಟ್ಟಿದ್ದೇ ಟ್ಟಿದ್ದು. ಟಿವಿ ವಾಹಿನಿಯ ಖಾಲಿ ಬುರುಡೆಯ ಟಗಾರಿಗಂತೂ ಅನುಪಮಾ ಟಿಆರ್‌ಪಿ ಗ್ರಾಫು ಏರಿಸುವ ಗಣಿಯಂತಾಗಿದ್ದರು. ಅಧಿಕಾರದ ಅಮಲೇರಿಸಿಕೊಂಡು ಹಾಸದಲ್ಲಿ ಮೆರೆಯುತ್ತಿದ್ದ ಮತಿಗೇಡಿ ಮಂತ್ರಿ ಮೇಶ್ವರ ನಾಯ್ಕ್‌ಗೆ ಸೆಡ್ಡು ಹೊಡೆದು ಖದರಿನ ಖಾಕಿ ರಿಗೇ ರಾಜೀನಾಮೆ ಬಿಸಾಕಿದ್ದ ಆಕೆ ಕೃತಕ ಸುಪ್ರಸಿದ್ಧಿಯ ತ್ತುಂಗದಲ್ಲಿದ್ದರು.

ಇವತ್ತು ಅನುಪಮಾ ಅಕ್ಷರಶಃ ತಿರಬೋಕಿ; ಯಾರಿಗೂ ದ ಪೀಡೆ. ಬದುಕಿನ ದಾರಿಯಲ್ಲಿ ಭ್ರಮೆಗೆ ಬಿದ್ದು ಸಿನ ಓಟಕ್ಕೆ ಹವಣಿಸಿದ ಅನುಪಮಾ ಎಡವಿ ಬಿದ್ದಿದ್ದಾರೆ. ರಾಣಾಗಿರುವ ಆಕೆ ಒಬ್ಬಂಟಿಯಾಗಿದ್ದಾರೆ. ಂಬದವರನ್ನು ಬಿಟ್ಟರೆ ಮತ್ಯಾರೂ ಜತೆಗಿಲ್ಲ. ಹೆತ್ತವರೂ ಗ "ಮಗಳೇ... ಎಂಥ ಎಡವಟ್ಟು ಮಾಡಿಕೊಂಡೆ...?" ಯ ಅಲವತ್ತುಕೊಳ್ಳುತ್ತಿದ್ದಾರೆ. ಅನುಪಮಾಗೆ ಹೊಗಳಿ- ಗಳಿ ಸಿದ್ದು ಸರ್ಕಾರದ ವಿರುದ್ಧ ಛೂಬಿಟ್ಟಿದ್ದ ಬಿಜೆಪಿಗರು ತ್ತು ಸಂಘ ಪರಿವಾರದ ಸೂತ್ರಧಾರರೂ ಆಕೆಯನ್ನು ನೀರಲ್ಲಿ ಕೈಬಿಟ್ಟು ಚಂದ ನೋಡುತ್ತಿದ್ದಾರೆ. ಸಾಮಾನ್ಯರಿಗಂತೂ ಅನುಪಮಾ ಮರೆತೇಹೋಗಿದ್ದಾರೆ. ತರಲೆಗಾರರಿಗೆ ಈಗಾಕೆ ಲಾಭದಾಯಕ ಸುದ್ದಿಯಾಗದ ು!!


ಮಂತ್ರಿಯಾಗಿದ್ದ ಪರಮೇಶ್ವರ ನಾಯ್ಕ್ ಪುಂಡ-ಭಂಡ ಕಾರಣಿ ಎಂಬುದಕ್ಕೆ ಎರಡು ಮಾತೇ ಇಲ್ಲ. ಆತ ಎಸ್‌ಪಿ ಅನುಪಮಾರಿಂದ ಕಾನೂನಿಗೆ ವಿರುದ್ಧವಾದ ಕ ಮಾಡಿಸಲು ಒತ್ತಡ ಹಾಕುತ್ತಿದ್ದನೆಂಬುದೂ ನಿಜವೇ. ಹರಾಮಿ ಪುಢಾರಿಯನ್ನು ನಿಭಾಯಿಸುವ ಚಾಕಚಕ್ಯತೆ, ೋಸ್ಥೈರ್ಯ ಪೆದ್ದಿ ಅನುಪಮಾಳಲ್ಲಿ ಇರಲಿಲ್ಲ. ಜತೆಗೆ ಪ್ರಶ್ನಾತೀತ ಪೊಲೀಸ್ ಅಧಿಕಾರಿಣಿ ಎಂಬ ಮಿಕೆಯೂ ಆಕೆಯ ತಲೆ ಹೊಕ್ಕಿತ್ತು. ಪ್ರಜಾಪ್ರಭುತ್ವದಲ್ಲಿ ಂತ್ರಿಯಂಥವರಿಗೆ ಅಧಿಕಾರಿಯಾದವರು ಚಾರಕ್ಕಾದರೂ ಗೌರವಿಸುವ ಅನಿವಾರ್ಯತೆಯಿದೆ ಸಣ್ಣ ಕಾಮನ್‌ಸೆನ್ಸೂ ಅನುಪಮಾರಲ್ಲಿ ಇರಲಿಲ್ಲ. ಅಹಂಕಾರ-ಅಧಿಕ ಪ್ರಸಂಗವೇ ಮಂತ್ರಿ ಮತ್ತು ಎಸ್‌ಪಿ ನಡುವೆ ಘನ ಘೋರ ಸಂಘರ್ಷಕ್ಕೆ ಮೂಲ ಣವಾಗಿತ್ತು, ಇಬ್ಬರಿಗೂ ತಂತಮ್ಮ ಅಧಿಕಾರದ ಮಿತಿಗಳ ಅರಿವೇ ಇಲ್ಲವಾಗಿತ್ತು.

ಮಂತ್ರಿ ಪರಮೇಶ್ವರ ನಾಯ್ಕನ ಹುಚ್ಚಾಟ ಹೆಚ್ಚಾದಂತೆ ೈಎಸ್‌ಪಿ ಅನುಪಮಾರ ಅವಾಂತರವೂ ಛವಾಗಿಬಿಟ್ಟಿತ್ತು, ಮೇಲಾಟ ಜೋರಾಯ್ತು, ಮಂತ್ರಿ ಮೇಶಿ ಡಿವೈಎಸ್‌ಪಿಯನ್ನು ತನ್ನೂರಿಂದ ಎತ್ತಂಗಡಿ ಡಿಸಿಬಿಟ್ಟ. ಇಷ್ಟಕ್ಕೆ ಈ ಒಣಪ್ರತಿಷ್ಠೆ ಮೂರ್ಖ ಮಂತ್ರಿ ಣಾಗಲಿಲ್ಲ. "ನಾನೇ ಆ ಡಿವೈಎಸ್‌ಪಿ ಅನುಪಮಾರನ್ನು ವರ್ಗಾವಣೆ ಮಾಡಿಸಿದ್ದು" ಎಂದು ಪರಂ ಬಡಾಯಿ ಕೊಚ್ಚಿಕೊಂಡ. ಇದ್ದಕ್ಕಿದ್ದಂತೆಯೇ ಹುಂಬಿ ಅನುಪಮಾಗೆ "ಕಿರಣ್ ಬೇಡಿ ಇಮೇಜ್" ಬಂದುಬಿಟ್ಟಿತು. ಟಿವಿಗಳಲ್ಲಿ ಬ್ರೇಕ್ ಆಗದ ಅನುಪಮಾ ವರ್ಗಾವಣೆಯ ಬ್ರೇಕಿಂಗ್ ನ್ಯೂಸ್ ಬಂತು! ಪರಮೇಶಿಯ ಸೊಕ್ಕು ಸ್ಟೇಟ್‌ಮೆಂಟ್ ಪುನರಪಿ ಪ್ರಸಾರವಾಯ್ತು, ರಾತ್ರೋರಾತ್ರಿ ಡಿವೈಎಸ್‌ಪಿ ಅನುಪಮಾ ಶೆಣೈಗೆ ಭರ್ಜರಿ ಪ್ರಚಾರ-ಪ್ರಸಿದ್ಧಿ ಸಿಕ್ಕಿಬಿಟ್ಟಿತು.

ತನಗೆ ಅವಮಾನ ಮಾಡಿದ ಅನುಪಮಾಗೆ ಪಾಠ ಕಲಿಸಲು ಮಂತ್ರಿ ಪರಮೇಶಿ ಸಮಯ ಸಾಧಿಸುತ್ತಲೇ ಇದ್ದ! ತನ್ನ ಚೇಲಾಗಳನ್ನು ಆಕೆಯ ವಿರುದ್ಧ ಛೂಬಿಟ್ಟಿದ್ದ. ಹೆಂಡದಂಗಡಿಯ ಕೇಸೊಂದನ್ನು ಕಾರಣ ಮಾಡಿಕೊಂಡು ಪರಮೇಶಿ ಶಿಷ್ಯ ಸಂಕುಲ ಡಿವೈಎಸ್‌ಪಿ ಸಾಹೇಬತಿ ವಿರುದ್ಧ ಬೀದಿ ಕಾಳಗ ಶುರು ಮಾಡಿದರು. ಪ್ರತಿಭಟನೆ-ಪ್ರತಿರೋಧಕ್ಕೆ ಅನುಪಮಾ ತತ್ತರಿಸಿಹೋದರು. ಕೆಳಹಂತದ ಅಧಿಕಾರಿಗಳು ತನ್ನ ಮಾತು ಕೇಳುತ್ತಿಲ್ಲ; ಮೇಲಿನವರು ರಕ್ಷಣೆ ಕೊಡುತ್ತಿಲ್ಲವೆಂದು ಹುಯಿಲೆಬ್ಬಿಸಿದ ಅನುಪಮಾ ಅವಸರವಸರವಾಗಿ ರಾಜೀನಾಮೆ ಗೀಚಿ ನಾಪತ್ತೆಯಾಗಿ ಹೋದರು. ರಾಜಕಾರಣದಲ್ಲಿ, ಪೊಲೀಸ್ ಇಲಾಖೆಯಲ್ಲಿ ಒಟ್ಟೊಟ್ಟಿಗೇ ಕಂಪನಗಳೆದ್ದವು. ಅನುಪಮಾ ಸುದ್ದಿಯ ಸರದಾರಿಣಿಯಂತಾಗಿ ಹೋದರು. ಸರ್ಕಾರವನ್ನೇ ಉರುಳಿಸುವ ನಿಷ್ಠಾವಂತ ಅಧಿಕಾರಿಣಿಯ ಪ್ರಭಾವಳಿ ತನಗೆ ಬಂದಿದ್ದೆಯೆಂಬ ಭ್ರಮೆಗೆ ಬಿದ್ದ ಆಕೆ ಫೇಸ್‌ಬುಕ್ ಆಟ ಆಡತೊಡಗಿದರು.



ಡಿಜಿಪಿ ಓಂಪ್ರಕಾಶ್



1061

- 4 JUN 2016

Police Office, BALLARI

ಮಂತ್ರಿ ಪರಮೇಶಿ, ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರವನ್ನು ಗೇಲಿ ಮಾಡುವ ಸ್ಟೇಟಸ್‌ಗಳು ಆಕೆಯ ಫೇಸ್‌ಬುಕ್ ಅಕೌಂಟಿನಲ್ಲಿ ಕಂಗೊಳಿಸಲಾರಂಭಿಸಿತು. ಪರಮೇಶಿಯ ಪರಸಂಗದ ಪುಕಾರು ಎಬ್ಬಿಸಿದರು. ಒಂದು ಹಂತದಲ್ಲಿ "ಪರಮೇಶಿ ನಾನು ಡಿವೈಎಸ್‌ಪಿ ನೌಕರಿಗೆ ರಾಜೀನಾಮೆ ಕೊಟ್ಟಾಯ್ತು... ನೀನು ಯಾವಾಗ ಕೊಡ್ತೀಯಾ..." ಎಂದು ಮಂತ್ರಿ ಪರಮೇಶಿಯನ್ನು ಮೂದಲಿಸುವ ಮಟ್ಟಕ್ಕೂ ಆಕೆ ಹೋದರು. ರಾಜಕೀಯ ಪ್ರವೇಶಿಸಿದ ಪುಢಾರಿಣಿಯ ವರಸೆಯಲ್ಲಿ ಆಳುವ ಸರ್ಕಾರವನ್ನು ಟೀಕಿಸಿದರು. ಕೇಳಿದರೆ ತಾನು ಫೇಸ್‌ಬುಕ್ ಅಕೌಂಟೇ ಹೊಂದಿಲ್ಲ ಎಂದು ಕೈ ತಿರುಗಿಸಿದ್ದೂ ಇದೆ.

ಅನುಪಮಾ ದಿನ-ದಿನವೂ ಮಾಧ್ಯಮಗಳಲ್ಲಿ ಮಿಂಚ ಹತ್ತಿದರು. ಜನ ನಾಯಕಿ ಎಂಬಂತೆ, ದುಷ್ಟ ಸಂಹಾರಿಣಿಯಂತೆ, ಆಳುವ ಸರ್ಕಾರದ ಸೊಂಟ ಮುರಿದ ಶಕ್ತಿ ಸ್ವರೂಪಿಣಿಯಂತೆ ಬಿಂಬಿಸಲ್ಪಟ್ಟರು. ಈ ಹುಸಿ ಕೀರ್ತಿ ಕಿರಿಕ್ ಅನುಪಮಾರಿಂದ ಅರಗಿಸಿಕೊಳ್ಳಲಾಗಲಿಲ್ಲ. ಉಡುಪಿ ಅಸೆಂಬ್ಲಿ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದರೆ ಎಮ್ಮೆಲ್ಲೆ ತಾನಾಗೋದು ಗ್ಯಾರಂಟಿ ಎಂಬ ತೆವಲಿಗೆ ಬಿದ್ದರು. ಅಂಥದೊಂದು ಅಡ್ನಾಡಿ ಕನಸು ಆಕೆಯ ತಲೆಯಲ್ಲಿ ಸಂಘ ಪರಿವಾರದ ಕೂಗುಮಾರಿ ಶೋಭಕ್ಕ, ತರಲೆ ತಾರಕ್ಕ ವಗೈರೆ ಚೆಡ್ಡಿ ಲಲನಾಮಣಿಗಳು ತುಂಬಿಯೂ ಆಗಿತ್ತು. ಹೀಗಾಗಿ ಪೊಲೀಸ್ ಇಲಾಖೆಯ ಡಿಜಿಪಿ, ಐಜಿಪಿಯಂಥ ಘಟಾನುಘಟಿ ಪೊಲೀಸಪ್ಪಗಳೇ ವಿನಂತಿಸಿಕೊಂಡರೂ ಅನುಪಮಾ ಕೇರ್ ಮಾಡಲಿಲ್ಲ. ಮುಖ್ಯಮಂತ್ರಿ-ಗೃಹಮಂತ್ರಿಗಳೇ ಬೆಚ್ಚಿಬಿದ್ದು ಸಂಧಾನಕ್ಕೆ ರಾಯಭಾರಿಗಳನ್ನು ಆಕೆಯ ಮನೆ ಬಾಗಿಲಿಗೆ ಕಳಿಸಿದರೂ ಕೈಗೆ ಸಿಗಲಿಲ್ಲ.

ರಾಜೀನಾಮೆ ನಿರ್ಧಾರ ಅಂತಿಮ; ವಾಪಸ್ ಪಡೆಯುವುದು ಸಾಧ್ಯವೇ ಇಲ್ಲ ಎಂಬ ಮೊಂಡು ಹಠಕ್ಕೆ ಅನುಪಮಾ ಬಿದ್ದರು. ಆದರೆ ಆಕೆಯ ಹೆತ್ತವರು-ಪಾಲಕರು ವಂಗಳ ಈ ಅನಾಹುತಕಾರಿ ನಿರ್ಧಾರದಿಂದ ಕಂಗಾಲಾಗಿಹೋದರು. ಮಗಳಿಗೆ ಬುದ್ಧಿ ಹೇಳಿದರು. "ಇಂಥ ನೌಕರಿ ನಿನಗೆ ಮತ್ತೆ ಸಿಗದು. ಇಷ್ಟು ದೊಡ್ಡ ಘನತೆ-ಗೌರವದ ಹುದ್ದೆ ಬಿಡಬೇಡ. ರಾಜೀನಾಮೆ ವಾಪಸ್ ಪಡೆದು ಕರ್ತವ್ಯಕ್ಕೆ ಹೋಗು. ರಾಜಕಾರಣಕ್ಕೆ ಬರುವಂತಿದ್ದರೆ ಮುಂದೆ ಅವಕಾಶವಿದೆ. ಈಗಲೇ ರಾಜಕಾರಣದ ಉಸಾಬರಿಗೆ ಹೋಗಬೇಡ. ಇದು ಗಂಡಾಂತರಕಾರಿ. ನಿನಗೆ ರಾಜಕೀಯದ ಆಸೆ ಹುಟ್ಟಿಸಿರುವ ಚೆಡ್ಡಿಗಳ ನಂಬಬೇಡ" ಎಂದು ಪರಿಪರಿಯಾಗಿ ಆಕೆಗೆ ಕುಟುಂಬಸ್ಥರು, ಆಪ್ತೇಷ್ಟರು ಸಲಹೆ ಕೊಟ್ಟಿದ್ದಾರೆ. ಆದರೆ ಈ ಬುದ್ಧಿವಾದವೆಲ್ಲಾ ಕೇಳುವ ವ್ಯವಧಾನ ಶಾಸಕಿಯಾಗುವ ಸಡಗರಕ್ಕೆ ಬಿದ್ದಿದ್ದ ಅನುಪಮಾಗೆ ಇರಲೇ ಇಲ್ಲ!!


ವೃತ್ತಿ ಬದುಕಿನ ಹಾಗು ಸಾಮಾಜಿಕ ಜೀವನದ ಸರಳ ವ್ಯವಹಾರ ಜ್ಞಾನವೇ ಇಲ್ಲದ ಅನುಪಮಾರನ್ನು ಸಂಘ ಪರಿವಾರ ಸರದಾರರು ಯಶಸ್ವಿಯಾಗಿ ದಾರಿ ತಪ್ಪಿಸಿದರೆಂಬುದು ಈಗ ಬಹಿರಂಗ ಗುಟ್ಟು. ಸಿಟಿ ಕಂ ಎಮ್ಮೆಲ್ಸಿ ತಾರಾ ಬಿಜೆಪಿಯ ಬಗ್ಗ-ಬಣ್ಣದ ಬದಿವಾರ ಅನುಪಮಾರ ಎದುರು ಬಿಚ್ಚಿಟ್ಟು ರಾಜಕೀಯದ ಆಸೆ ಬಿತ್ತಿದರೆಂಬ ಪ್ರತೀತಿಯೂ ಇದೆ. ಆದರೆ ಉಡುಪಿ ಸಂಸದೆಯೂ ರಾಜ್ಯ ಬಿಜೆಪಿಯ ಮುಖ್ಯದ ಮುಖಂಡಗ್ಳೇಸ್ ಯಡ್ಡಿಯ ಅಂತಃಪುರದ ಪರಮಾತ್ಮೆಯೂ ಆಗಿರುವ ಶೋಭಾ

▶▶ 13





ತಿಪಟೂರು ಶಾಸಕ ಷಡಕ್ಷರಿಯ ಷಡ್ಯಂತ್ರಗಳ



ಷಡಕ್ಷರಿ


ತಿಪಟೂರಿನಲ್ಲೀಗ ಶಾಸಕ ಷಡಕ್ಷರಿಯದ್ದೇ ರಿಪಬ್ಲಿಕ್ಕು. ಅವನ ತಮ್ಮ ಗ್ರೇಟ್ ಜಯಣ್ಣನದೇ ದರ್ಬಾರು. ಸರ್ಕಾರಿ ಗೋಮಾಳ, ಖಾಲಿ ಜಾಗ, ರೈತರ ಹೊಲ ಹೀಗೆ ಈ ಇಬ್ಬರ ಕಣ್ಣು ಎಲ್ಲೆಲ್ಲಿ ಬೀಳುತ್ತೋ ಅವೆಲ್ಲಾ ರಾತ್ರೋರಾತ್ರಿ ಷಡಕ್ಷರಿಯ ಸ್ವತ್ತುಗಳಾಗುತ್ತಿವೆ. ಪೊಲೀಸು, ತಹಸೀಲ್ದಾರು, ಸಬ್ ರಿಜಿಸ್ಟ್ರಾರು ಎಲ್ಲರೂ ಇವರ ಕೈಗೊಂಬೆಗಳು. ಅಪ್ಪಿತಪ್ಪಿ ಯಾರಾದ್ರು ಸೋದರ ದುಷ್ಟರ ಅಕ್ರಮ ಪ್ರಶ್ನಿಸ ಹೋದರೆ ಮುಗೀತು ಕತೆ. ಮನೆಗೆ ನುಗ್ಗಿ ದಾಂಧಲೆ ಎಬ್ಬಿಸೋದಲ್ಲದೆ ಸುಳ್ಳು ಕೇಸ್ ಜಡಿದು ಲಾಕಪ್ಪಿನ ರುಚಿ ತೋರಿಸುತ್ತಾರೆ. ಸದ್ಯ ಷಡಕ್ಷರಿ ರಿಪಬ್ಲಿಕ್ಕಿನ ಕೆಂಗಣ್ಣು ಜಿ.ಬಿ. ರವಿಕುಮಾರ್ ಎಂಬ ರೈತ ಹೋರಾಟಗಾರನ ಮೇಲೆ ಬಿದ್ದಿದೆ.

ತಿಪಟೂರಿನ ಯಾವುದೇ ಮೂಲೆಯ ಸರ್ಕಾರಿ ಜಮೀನಿನ ಒತ್ತುವರಿ ಬಗ್ಗೆ ಪ್ರಶ್ನಿಸಿದರೆ ಷಡಕ್ಷರಿ ಮತ್ತವನ ಪಟಾಲಮ್ಮಿನ ಹೆಸರೇ ಕೇಳಿಬರುತ್ತೆ. ತಾಲ್ಲೂಕಿನ ಶೆಟ್ಟಿಹಳ್ಳಿಯ ಸರ್ವೆ ನಂಬರ್ 79ರನ್ನೊಳಗೊಂಡಂತೆ ಬರೋಬ್ಬರಿ 32 ಎಕರೆ ಜಮೀನನ್ನು ಷಡಕ್ಷರಿ ಟೀಮು ಒತ್ತುವರಿ ಮಾಡಿಕೊಂಡು ಅಲ್ಲಿ ಅಜಯ್ ಕಾಯರ್ಸ್ ಅನ್ನೋ ಸಣ್ಣ ಕೈಗಾರಿಕೆ ಶುರು ಮಾಡಿದೆ. ಈ ಜಾಗ ಅದೇ ಗ್ರಾಮದ ರೈತ ಶಿವಕುಮಾರಯ್ಯ, ಶಂಕರಪ್ಪ ಮತ್ತು ಇನ್ನಿತರ ಅಮಾಯಕ ರೈತರದ್ದು. ಹೊಟ್ಟೆಪಾಡಿಗೆ ಅವರಿಗೆಲ್ಲ ಈ ಜಮೀನೇ ಆಸರೆ. ಕಾಯರ್ಸ್ ಫ್ಯಾಕ್ಟರಿ ಶುರು ಮಾಡಿರೋದಲ್ಲದೆ ಆ ಜಮೀನುಗಳಲ್ಲಿ ತಮಿಳುನಾಡು ಮೂಲದ ಶಕ್ತಿಬೇಲ್ ಎಂಬ ಕಂಪನಿಯ ಪಾಲುದಾರಿಕೆಯಲ್ಲಿ ಇನ್ನೊಂದು ಫ್ಯಾಕ್ಟರಿ ತೆರೆಯುವುದಕ್ಕೂ ತಯಾರಿ ನಡೆಸಿದ್ದಾರೆ. ಈ ರೈತರಲ್ಲಿ ಶಿವಕುಮಾರಯ್ಯ ಮತ್ತು ಶಂಕರಪ್ಪ ನ್ಯಾಯಾಲಯದ ಮೆಟ್ಟಿಲೇರಿದ್ದು ಇಂಜೆಕ್ಷನ್ ಆರ್ಡರ್ ತಂದಿದ್ದಾರೆ. ಸರ್ವೆ ನಂಬರ್ 79ರಲ್ಲಿನ ಶಿವಕುಮಾರಯ್ಯನ 3 ಎಕರೆ ಹಾಗೂ ಶಂಕರಪ್ಪನ 2 ಎಕರೆ ಜಮೀನಿನಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನ್ಯಾಯಾಲಯವೇ ನಿರ್ದೇಶನ ನೀಡಿದೆ. ಆದರೆ ಇನ್ನುಳಿದ ರೈತರು ಕೋರ್ಟು ಕಚೇರಿ ಅಲೆದಾಡುವಷ್ಟು ಶಕ್ತರೂ ಅಲ್ಲ, ಚಿಕ್ಕತೆಯೂ ಇಲ್ಲ, ಅವರಿಗೆಲ್ಲ ನೆರವಾಗಿ ನಿಂತವರು ಸಾಮಾಜಿಕ ಹೋರಾಟಗಾರ ಜಿ.ಬಿ. ರವಿಕುಮಾರ್.

ಷಡಕ್ಷರಿ ಹಾಗೂ ಅವನ ತಮ್ಮ ಜಯಣ್ಣನ ಒತ್ತುವರಿಯನ್ನು ಧಿಕ್ಕರಿಸಿ ನ್ಯಾಯಾಲಯಕ್ಕೂ ಮೊರೆಹೋದ ಸುಮಾರು ಇನ್ನುಳಿದ 25-30 ಎಕರೆ ಜಮೀನಿನ ರೈತರನ್ನೆಲ್ಲ ಸಂಘಟಿಸಿದ ರವಿಕುಮಾರ್ ಇತ್ತೀಚೆಗೆ ಎಂಎಲ್ಎ ವಿರುದ್ಧ ಒಂದು ಪ್ರತಿಭಟನೆಯನ್ನೂ ನಡೆಸಿದ್ದರು. ಆಗ ಕಾಟಾಚಾರಕ್ಕೆಂಬಂತೆ ತಹಸೀಲ್ದಾರ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ 'ದಾಖಲೆಗಳೆಲ್ಲಾ ರೈತರ ಪರವಿರುವುದರಿಂದ ರೈತರು ಉಳುಮೆ ಮಾಡಬಹುದು. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುತ್ತೇನೆ. ನಾನು ಏನು ಮಾಡಲು ಆಗುವುದಿಲ್ಲ' ಅನ್ನೋ ಕೆಲಸಕ್ಕೆ ಬಾರದ ತೌಡು ಕುಟ್ಟಿ ಜಾಗ ಖಾಲಿ ಮಾಡಿದ್ದರು. ಆದರೆ ಉಳುಮೆ ಮಾಡಲು ಶಾಸಕನ ಗೂಂಡಾ ತಮ್ಮ ಜಯಣ್ಣ ಬಿಡಬೇಕಲ್ಲ, ಮಾತೆತ್ತಿದರೆ 'ಈಗ ಅಧಿಕಾರದಲ್ಲಿರೋದು ನಾವೇ, ಏನ್ ಬೇಕಾದ್ರೂ ಮಾಡ್ತೀವಿ. ಕೇಳಕ್ ಬಂದ್ರೆ ಹುಷಾರ್' ಅಂತ ಚಂಬಲ್ ಶೈಲಿಯಲ್ಲಿ ಧಮ್ಕಿ ಬಿಗಿಯುವ ಜಯಣ್ಣ ಈ ರೈತರಿಗೆ ನೀಡುತ್ತಿರುವ ಕಿರುಕುಳ ಒಂದೆರಡಲ್ಲ.

ಈ ಜಮೀನು ಒತ್ತುವರಿ ವಿಚಾರವಾಗಿ ರೈತ ಶಿವಕುಮಾರಯ್ಯ ಹಾಗೂ ಷಡಕ್ಷರಿ ತಮ್ಮ ಜಯಣ್ಣನ ನಡುವೆ ಆಗಾಗ ಜಗಳವಾಗುತ್ತಲೇ ಇತ್ತು. ಮೊನ್ನೆ ಒಂದುದಿನ ಬೆಳಗಿನ ಜಾವ 3.30ರ ಸಮಯದಲ್ಲಿ ಆರೇಳು ಮಂದಿ ಜಯಣ್ಣನ ಚೇಲಾಗಳು ದ್ವಿಚಕ್ರ ವಾಹನದಲ್ಲಿ ಶಿವಕುಮಾರಯ್ಯನ ಮನೆಗೆ ನುಗ್ಗಿ, ಮನೆಯಿಂದ ಎಳೆದೊಯ್ದು ಮಾರಣಾಂತಿಕ ಹಲ್ಲೆ ನಡೆಸಿದ್ದರು. ರೈತರಲ್ಲಿ ಭಯದ ವಾತಾವರಣ ನಿರ್ಮಿಸುವುದು ಇದರ ಹಿಂದಿರುವ ಸ್ಪಷ್ಟ ಉದ್ದೇಶ. ಕೆ.ಬಿ.ಕ್ರಾಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೇಸು ದಾಖಲಾಗಿದೆ.

ಶೆಟ್ಟಿಹಳ್ಳಿಯ ಒತ್ತುವರಿ ಒಂದುಕಡೆ ಚಾಲನೆಯಲ್ಲಿದ್ದರೆ ಅತ್ತ ಈಡೇನಹಳ್ಳಿಯ 22 ಎಕರೆ ಜಾಗವನ್ನೂ ಲಪಟಾಯಿಸಲು ಷಡಕ್ಷರಿಯ ದುಷ್ಟಕೂಟ ತಂತ್ರ ಹೆಣೆದು ಕೂತಿತ್ತು. ಈ ಜಮೀನನ್ನು ಷಡಕ್ಷರಿಯ ಆಪ್ತರ ಖಾತೆಗೆ ಬದಲಾಯಿಸಲು ಸಕಲ ಸಿದ್ಧತೆಗಳೂ ನಡೆದಿದ್ದವು. ಇಂತಹ ಅಕ್ರಮದ ಸುಳಿವಿಡಿದ ಜಿಬಿ ರವಿಕುಮಾರ್ ಜಮೀನಿನ ದಾಖಲೆಗಳನ್ನೆಲ್ಲಾ ಕ್ರೋಢೀಕರಿಸಿ ಶಾಸಕನ ವಂಚನೆಯನ್ನು ಜನರ ಮುಂದಿಟ್ಟು ಜಾಗೃತಿ ಮೂಡಿಸಿದ್ದರು. ಅದರಿಂದ ಗ್ರಾಮಸ್ಥರೆಲ್ಲ ಶಾಸಕನ ವಿರುದ್ಧ ದಂಗೆಯೆದ್ದಿದ್ದರು. ಜನರಿಂದ ಹೀಗೆ ಸಾಮೂಹಿಕ ವಿರೋಧ ವ್ಯಕ್ತವಾದ್ದರಿಂದ ಸದ್ಯಕ್ಕೆ ಆ ಯೋಜನೆಯನ್ನು ಕೈಬಿಟ್ಟಂತೆ ತೆಪ್ಪಗಾಗಿದ್ದಾರೆ. ಆದರೆ ತಮ್ಮ ಪ್ರತಿ ಒತ್ತುವರಿ ದಂಧೆಗೂ ಅಡ್ಡಗಾಲು



ಹಾಕುತ್ತಿರುವ ಹೋರಾಟಗಾರ ಜಿ.ಬಿ.ರವಿಕುಮಾರ್ ಮೇಲೆ ಷಡಕ್ಷರಿಯ ಕಾಕದೃಷ್ಟಿ ನೆಟ್ಟುಕೊಂಡಿದೆ.


ರೇಪ್‌ಕೇಸ್ ರೌಡಿಶೀಟರ್!

ಶತಾಯಗತಾಯ ಮಗ್ಗುಲ ಮುಳ್ಳಾಗಿರುವ ರವಿಕುಮಾರ್‌ನನ್ನು ನಿವಾರಿಸಿಕೊಳ್ಳಲೇಬೇಕು ಅಂತ ತೀರ್ಮಾನಿಸಿದಂತಿರುವ ಷಡಕ್ಷರಿ ಆತನ ಮೇಲೆ ಒಂದಾದ ಮೇಲೆ ಒಂದು ಪೊಲೀಸ್ ಕೇಸು ಜಡಿಯುವ ಅಭಿಯಾನವನ್ನೇ ಹಮ್ಮಿಕೊಂಡಿದ್ದಾನೆ. ರವಿಕುಮಾರ್ ಮೂಲತಃ ಶಿರಾ ತಾಲ್ಲೂಕಿನವರು. ಹಳ್ಳಿಯೊಂದರಲ್ಲಿ ವ್ಯವಸಾಯ ಮಾಡಿಕೊಂಡು ಹೈನುಗಾರಿಕೆಯನ್ನು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದವರು. ಆಸೆಯಿಂದ ತನ್ನ ಜಮೀನಿನಲ್ಲಿ ಎರಡು ಬೋರ್‌ವೆಲ್ ಕೊರೆಯಿಸಿದ್ದರು. ಆರಂಭದಲ್ಲಿ ನೀರೆರೆದ ಅವೆರಡೂ ಬೋರ್‌ಗಳು ಕೆಲವೇ ದಿನಗಳಲ್ಲಿ ಅಂತರ್ಜಲ ಹಿಂಗಿಸಿಕೊಂಡು ಸತ್ತು ಹೋದವು. ಇದಕ್ಕೆ ಕಾರಣವೇನಿರ ಬಹುದು ಅಂತಾ ತಲೆಕೆಡಿಸಿಕೊಂಡ ರವಿಕುಮಾರ್‌ಗೆ ನಂತರದಲ್ಲಿ ಗೊತ್ತಾದದ್ದು ಜಮೀನಿನ ಪಕ್ಕದಲ್ಲೇ ಇರುವ ಕೆರೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವ ಸಂಗತಿ. ಅದನ್ನು ನಡೆಸುತ್ತಿದ್ದದ್ದು ಸ್ಥಳೀಯ ಪ್ರಬಲ ರಾಜಕಾರಣಿಗಳು. ಅವರೆಲ್ಲರ ವಿರುದ್ಧ ಸಿಡಿದುನಿಂತ ರವಿಕುಮಾರ್ ಆ ಬಲಾಢ್ಯ ರಾಜಕಾರಣಿಗಳಿಂದ ಸಾಕಷ್ಟು ಉಪಟಳ ಅನುಭವಿಸಬೇಕಾಯ್ತು. ಕೊನೆಗೆ ಅವರ ಕಾಟ ತಾಳದೆ ಹೆಂಡತಿಯ ತವರೂರು ತಿಪಟೂರಿಗೆ ಬಂದು ನೆಲೆಸಿದ್ದಾರೆ.

ಇಲ್ಲಿಗೆ ಬಂದ ಮೇಲೂ ಅವರೊಳಗಿನ ಹೋರಾಟದ ಕಿಚ್ಚು ತಣ್ಣಗಾಗಲಿಲ್ಲ. ಯಡಿಯೂರಪ್ಪ ನಂತಹ ಘಟಾನುಘಟಿಗಳನ್ನೇ ಜೈಲುಪಾಲಾಗಿಸಿದ ಜನ ಸಂಗ್ರಾಮ ಪರಿಷತ್‌ನ ಎಸ್.ಆರ್.ಹಿರೇಮಠ್‌ರ ಜೊತೆ ಗುರುತಿಸಿ ಕೊಂಡು ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಆ ಪ್ರಯತ್ನದಲ್ಲೇ ಶಾಸಕ ಷಡಕ್ಷರಿ, ಆತನ ತಮ್ಮ ಗ್ರೇಟ್ ಜಯಣ್ಣ ಮತ್ತವರ ಪಟಾಲಮ್ಮಿನ ಭೂಅಕ್ರಮಗಳು ರವಿಕುಮಾರ್‌ಗೆ ತಿಳಿದುಬಂದಿದ್ದು.

ಯಾವಾಗ ರವಿಕುಮಾರ್ ಶಾಸಕ ಷಡಕ್ಷರಿಯ ಪ್ರತಿಯೊಂದು ಅಕ್ರಮವನ್ನೂ ದಾಖಲೆ ಸಮೇತ ಮಾಧ್ಯಮಗಳ ಮುಂದೆ ತೆರೆದಿಡಲು ಶುರು ಮಾಡಿದನೋ ಆಗಿನಿಂದ ಷಡಕ್ಷರಿಗೆ ಆತನ ಮೇಲೆ ಕಣ್ಣು ಇದ್ದೇ ಇತ್ತು. ಅದರಲ್ಲೂ ಹಳೇಮೈಸೂರು ಭಾಗದ ಪ್ರಭಾವಿ ಲಿಂಗಾಯುತ ನಾಯಕ ಎಂಬ ಕೋಟಾದಡಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳುವ ಉಮೇದಿನಲ್ಲಿದ್ದ ಷಡಕ್ಷರಿಗೆ ರವಿಕುಮಾರ್ ದೊಡ್ಡ ತಲೆನೋವಾಗಿ ಪರಿಣಮಿಸಿದ್ದ. ಶೆಟ್ಟಿಹಳ್ಳಿ ಮತ್ತು ಈಡೇನಹಳ್ಳಿ ಭೂಅಕ್ರಮಗಳಲ್ಲಿ ರವಿಕುಮಾರ್ ದಿಟ್ಟವಾಗಿ ನಿಂತ ಮೇಲಂತೂ ಷಡಕ್ಷರಿ ಇನ್ನಿಲ್ಲದಂತೆ ಉರಿದುಹೋಗಿದ್ದ.

ರವಿಕುಮಾರ್‌ನನ್ನು ಹತ್ತಿಕ್ಕಲು ಷಡಕ್ಷರಿ ಮಾಡಿದ ಮೊದಲ ಪ್ರಯತ್ನ ಬೆದರಿಕೆ ಯತ್ನ. ರವಿಕುಮಾರ್ ತಿಪಟೂರು ಬಸ್ ನಿಲ್ದಾಣದ ಸಮೀಪವೇ ಪಂಚಮಿ ಕ್ವಾಲಿಟಿ ಗಾರ್ಮೆಂಟ್ಸ್ ಅನ್ನೋ ಬಟ್ಟೆಯಂಗಡಿ ನಡೆಸುತ್ತಿದ್ದಾರೆ. ರಾತ್ರೋರಾತ್ರಿ ಈ ಅಂಗಡಿಗೆ



ದುಷ್ಕರ್ಮಿಗಳು ಬೆಂಕಿ ಹಚ್ಚಿ ನಾಮಫಲಕದ ಹೆಸರನ್ನೇ ತಿದ್ದಿ ಹೋಗಿದ್ದರು. ಈ ಬಗ್ಗೆ ದೂರು ದಾಖಲಿಸಿದರೂ ಪ್ರಯೋಜನವಾಗಿಲ್ಲ. ಅದಕ್ಕೂ ರವಿಕುಮಾರ್ ಬಗ್ಗದಾದಾಗ ಆತ ನಡೆಸುತ್ತಿರುವ ಅಂಗಡಿ ಮಳಿಗೆಯ ಕಟ್ಟಡ ಒಡತಿಯಾದ ಪೂರ್ಣಿಮ ಎಂಬಾಕೆಯ ಮೂಲಕ ರವಿಕುಮಾರ್ ಮೇಲೆ ಲೈಂಗಿಕ ಕಿರುಕುಳ ಹಾಗೂ ಮಾನಭಂಗದ ಕೇಸ್ ಜಡಿಸಿದ್ದರು.

ರವಿಕುಮಾರ್ ಆಗಲೂ ಜಗ್ಗಲಿಲ್ಲ. ಆಗ ಇದೇ ವರ್ಷದ ಜನವರಿ 29ರಂದು ತಿಪಟೂರು ಠಾಣೆಯಲ್ಲಿ ಮಮತ ಎಂಬಾಕೆ ರವಿಕುಮಾರ್ ಮೇಲೆ ಮತ್ತೊಂದು ಕೇಸು ದಾಖಲಿಸಿದಳು. ಅದೂ ಸಹ ಮಾನಭಂಗ ಮತ್ತು ಲೈಂಗಿಕ ಕಿರುಕುಳದ ಕೇಸ್. ಆದರೆ ಅದು ಆಕೆಯನ್ನು ಯಾಮಾರಿಸಿ ಪೊಲೀಸರು ದಾಖಲಿಸಿಕೊಂಡಿದ್ದ ದೂರಾಗಿತ್ತು. ಅಸಲಿಗೆ ನಡೆದಿದ್ದೇನೆಂದರೆ "ಖಾಸಗಿ ಗಾರ್ಮೆಂಟ್ಸ್‌ವೊಂದರಲ್ಲಿ ಮ್ಯಾನೇಜರ್ ಸ್ಥಳೀಯ ಮಹಿಳಾ ಕೆಲಸಗಾರರಿಗೆ ಅವಾಚ್ಯವಾಗಿ ನಿಂದಿಸುತ್ತಾನೆ ಎನ್ನುವ ದೂರು ಜಿಲ್ಲಾಧಿಕಾರಿಗಳಿಗೆ ಹೋಗಿದ್ದು, ಈ ಸಂಬಂಧ ಎಲ್ಲವನ್ನು ತನಿಖೆ ಮಾಡಿ ಕ್ರಮ ಕೈಗೊಳ್ಳುವಂತೆ ನಮಗೆ ಆದೇಶ ಬಂದಿದೆ" ಅಂತ ಪೊಲೀಸರು ಗಾರ್ಮೆಂಟ್ ಬಳಿ ಹೋಗಿದ್ದರು. ಆಗ ಮಹಿಳಾ ಉದ್ಯೋಗಿಗಳು ಅಂತದ್ದೇನೂ ನಡೆದಿಲ್ಲ ಅಂತ ಹೇಳಿಕೆ ನೀಡುತ್ತಿರುವಾಗ ಹೋರಾಟ ಸ್ವಭಾವದ ರವಿಕುಮಾರ್ ಮಹಿಳಾ ಉದ್ಯೋಗಿಗಳ ಪರ ನಿಂತು ಪೊಲೀಸರಿಗೆ ಪ್ರತ್ಯುತ್ತರ ನೀಡಿದ್ದರು. ಆಗ "ನೀವು ಪೊಲೀಸ್ ಠಾಣೆಗೆ ಬಂದು ನಿಮ್ಮ ಹೇಳಿಕೆ ನೀಡಿ" ಅಂತ ಪೊಲೀಸರು ಹೇಳಿದ್ದರು. ಅದ... ಹೇಳಿಕೆ ನೀಡಲು ಠಾಣೆಗೆ ಹೋದಾಗ "ನಿಮ್ಮ... ಮಮತ ಎಂಬುವವರು ರೇಪ್ ಕೇಸ್ ದಾಖಲಿಸಿದ್ದಾರೆ" ಎಂದು ಅರೆಸ್ಟ್ ಮಾಡಿ ಜೈಲಿಗಟ್ಟಿದ್ದರು. ವಿಚಿತ್ರವೆಂದರೆ ಅಂತಹ ಕಂಪ್ಲೆ... ಕೊಟ್ಟ ಮಮತಾಗೆ ರವಿಕುಮಾರ್ ಯಾರೆಂಬು... ಗೊತ್ತಿಲ್ಲ. ಅದನ್ನಾಕೆ ನಂತರ ಪೊಲೀಸರ ಮುಂ... ಸ್ಪಷ್ಟವಾಗಿ ಹೇಳಿದ್ದಳು. ಅವತ್ತು ವಿಚಾರಣೆಗೆಂದು ಪೊಲೀಸರು ಗಾರ್ಮೆಂಟ್ ಬಳಿ ಹೋಗಿ ಹೇಳಿ... ಮುಗಿದ ಮೇಲೆ "ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಅಂತದ್ದೇನೂ ನಡೆದಿಲ್ಲ, ಯಾವ ಕಿರುಕುಳವೂ ಘಟಿಸಿಲ್ಲ ಅಂತ ಬರೆದುಕೊಂಡಿದ್ದೇವೆ. ಇದಕ್ಕೆ ... ಮಾಡಿ" ಎಂದು ಪೊಲೀಸರು ಮಮತಾರಿಂದ ... ಮಾಡಿಸಿಕೊಂಡಿದ್ದರು. ಗಾಬರಿಯಲ್ಲಿ ಆಕೆಯೂ ಅದನ್ನು ಸರಿಯಾಗಿ ಓದದೆ ಸಹಿ ಹಾಕಿದ್ದಳು. ... ಅದು ಆಕೆ ರವಿಕುಮಾರ್ ಮೇಲೆ ನೀಡಿದ ಅತ್ಯಾಚಾರದ ಕೇಸಾಗಿ ಬದಲಾಗಿತ್ತು.

ಷಡಕ್ಷರಿ ಪಟಾಲಮ್ಮಿಗೆ ರವಿಕುಮಾರ್ ಮೇ... ಅದೆಷ್ಟು ಸಿಟ್ಟಿದೆಯೆಂದರೆ ಅವತ್ತು ಸುಳ್ಳು ಕೇಸಿ... ಅರೆಸ್ಟ್ ಮಾಡಿದನಂತರ ಆತನನ್ನು ನ್ಯಾಯಾಲಯ... ಹಾಜರುಪಡಿಸುವಾಗ ಪೊಲೀಸರು ಸುಮಾರು ... ಕಿ.ಮೀ ದೂರ ಕೈಗೆ ಬೇಡಿ ಹಾಕಿ ರಸ್ತೆಯುದ್ದಕ್ಕ... ನಡೆಸಿಕೊಂಡೇ ಹೋಗಿದ್ದರು. ಮಮತಾಳ ಹೇಳಿ... ನಂತರ ಆ ಕೇಸು ಬಿದ್ದುಹೋಯ್ತು. ಆದರೆ ಷಡಕ್ಷರಿಯ ಸಿಟ್ಟು ಇನ್ನೂ ತಣ್ಣಗಾಗಿಲ್ಲ. ಹಾಗಾ... ಭಾರತೀಯ ಕೃಷಿಕ ಸಮಾಜದ ಯುವ ಘಟಕದ ರಾಜ್ಯಾಧ್ಯಕ್ಷ ಶಿವನಗೌಡ ಪಾಟೀಲನಂತವನನ್ನು ಮುಂದಿಟ್ಟುಕೊಂಡು ಕಸರತ್ತು ನಡೆಸುತ್ತಲೇ ಇದ... ಈತ ರವಿಕುಮಾರ್ ಮೇಲೆ ಕೇಸ್ ಹಾಕಿಸಿ ಎ... ಮಾತನಾಡಿದ ಆಡಿಯೋ ವಾಟ್ಸಪ್‌ಗಳಲ್ಲಿ ಹರಿದಾಡುತ್ತಿದೆ.


ಷಡಕ್ಷರಿಯ ಚರಿತ್ರೆ

ಷಡಕ್ಷರಿ ಮೊದಲಿನಿಂದಲೂ ಕಾಂಗ್ರೆಸ್ ಪಾರ್ಟಿಯಲ್ಲೇ ಗುರುತಿಸಿಕೊಂಡವ. ತುಮಕೂರು ಭಾಗದಲ್ಲೇ ಪ್ರಭಾವಿ ಕಾಂಗ್ರೆಸ್‌ನ ರಾಜಕೀಯ ಧುರೀಣರಾಗಿದ್ದ ಮಂತ್ರಿ ಮಂಜುನಾಥ ಶಿಷ್ಯನಾ... ಬೆಳೆದುಬಂದವ. ಮಂಜುನಾಥರು ಮಂತ್ರಿಯಾಗಿ... ಅವರ ಲೆಟರ್‌ಹೆಡ್‌ಗಳನ್ನು ಬೇಕಾದವರಿಗೆ ಬಿಕರಿ... ಮಾಡಿದ್ದಲ್ಲದೆ, ಹಣಕ್ಕೆ ಮಾರಿಕೊಂಡ ಆರೋಪ... ಇವನ ಮೇಲೆ ಕೇಳಿಬಂದಿತ್ತು. ಇದೇ ಮಂಜುನಾ... ಇನ್ನೊಬ್ಬ ಶಿಷ್ಯ ನಂಜಮಾರಿ ಕೂಡಾ ಷಡಕ್ಷರಿಯ... ರಾಜಕೀಯದಲ್ಲಿ ಬೆಳೆಯುತ್ತಿದ್ದದ್ದು ಆತನಿಗೆ ಸರಿ... ಕಾಣಿಸುತ್ತಿರಲಿಲ್ಲ. ಹಾಗಾಗಿ ಇವನನ್ನು ರಾಜಕೀಯ... ಮುಗಿಸಲು ಸದಾ ಹಾತೊರೆಯುತ್ತಿದ್ದ. ನಂಜಮಾ... ಹೇಳಿಕೊಳ್ಳುವಂತಹ ಕೆಲಸಗಾರನೂ ಅಲ್ಲ, ಜನಾನುರಾಗಿಯೂ ಅಲ್ಲ. ಅದು ಷಡಕ್ಷರಿ ಪೊಗರ್‌ದಸ್ತಾಗಿ ಹರಡಿಕೊಳ್ಳಲು ನೆರವಾಯ್ತು. ನಂಜಮಾರಿ ಪಕ್ಷದಿಂದ ಪಕ್ಷಕ್ಕೆ ಅಲೆಯುವ ಅಲೆಮಾರಿಯಂತಾಗಿದ್ದು ಇತ್ತೀಚಿನ ದಿನಗಳಲ್ಲಿ ನೆಲೆಕಂಡುಕೊಳ್ಳಲು ಹೆಣಗಾಡುತ್ತಿದ್ದಾನೆ.

ಷಡಕ್ಷರಿ ಶಾಸಕನಾದ ನಂತರ ಸ್ವಜಾತಿ ಪ್ರೇ... ಬಿದ್ದು ಲಿಂಗಾಯುತ ಸಮುದಾಯವನ್ನೆ ಪಟಾಲ... ಮಾಡಿಕೊಂಡು ಕೊಬ್ಬಿಸುತ್ತಾ ಹೋಗುತ್ತಿದ್ದಾನೆ. ರಕ್ತಸಂಬಂಧಿಗಳನ್ನು ಆಯಕಟ್ಟಿನ ಜಾಗಗಳಿಗೆ ತಂದುಕೂರಿಸಿ ಬೆಳೆಸುತ್ತಿದ್ದಾನೆ. ಇವನ ದರ್ಬಾರಿ... ಸಾಕಷ್ಟು ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರು... ನಿಷ್ಠಾವಂತ ಕೆಳವರ್ಗದ ಕಾರ್ಯಕರ್ತರಿಗೆ ಮನ್ನ... ಇಲ್ಲ. ಇಂತಿಪ್ಪ ಷಡಕ್ಷರಿ ಎರಡನೇ ಮದುವೆ ಸ... ಆಗಿದ್ದು ಈ ಬಗ್ಗೆ ಚುನಾವಣಾ ಆಯೋಗಕ್ಕೆ ಯಾವುದೇ ದಾಖಲೆ ನೀಡಿಲ್ಲವೆಂಬ ಆಪಾದನೆಗ... ಕೇಳಿಬರುತ್ತಿವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಕೋಟ್ಯಾಂತರ ಮೌಲ್ಯದ ಅಪಾರ್ಟ್‌ಮೆಂಟ್ ಖರೀದಿಸಿದ ವರ್ತಮಾನವಿದ್ದು ಕಣ್ಣುಬಿದ್ದಕಡೆಯ... ಸರ್ಕಾರಿ ಹಾಗೂ ಅಮಾಯಕ ರೈತರ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳುವುದನ್ನ... ಕಸುಬನ್ನಾಗಿಸಿಕೊಂಡಿದ್ದಾನೆ.

ಇವನ ಆಟಾಟೋಪ ಖಂಡಿಸಬೇಕಿದ್ದ ಬಿಜೆ... ಬಿ.ಸಿ.ನಾಗೇಶ್ ಆಗಲಿ, ಜೆಡಿಎಸ್‌ನ ಲೋಕೇಶ್ವರ... ಆಗಲಿ ಷಡಕ್ಷರಿಯ ಆಮಿಷಗಳಿಗೆ ಬಿಕರಿಯಾದ... ತೆಪ್ಪಗಿದ್ದಾರೆ. ಲೋಕೇಶ್ವರ ಮತ್ತು ಷಡಕ್ಷರಿ ಇಬ್ಬ... ಜೊತೆಗೂಡಿ ನಗರಸಭೆಯ ಮೇಲೆ ಹಿಡಿತ ಸಾ... ಹಲವು ಬೋಗಸ್ ಬಿಲ್ಲುಗಳ ಹಗರಣಗಳು ಮಾಡಿದ್ದಾರೆಂಬ ಗುಸುಗುಸು ಕೂಡಾ ಹರಿದಾಡು... ಒಟ್ಟಿನಲ್ಲಿ ಷಡಕ್ಷರಿ ಮತ್ತಾತನ ತಮ್ಮ ಜಯಣ್ಣ ಭೂದಾಹಿ ಜನಕಂಟಕರಾಗಿರುವುದಂತೂ ಸತ್ಯ.

■ ಅನಿಲ್‌ಕುಮಾರ್, ಚಿಕ್ಕದಾಳ...



ಹೋರಾಟಗಾರ ಜಿ.ಬಿ.ರವಿಕುಮಾರ್ ನೀಡಿರುವ ದೂರಿನ ಪ್ರತಿ

Acknowledgement

PU1101...0600347

347/2016

Tenant-Owner Problem

2 Father / Husband Name. : Bappanna

3 Address : Patel new building, Goragondanahalli, Tiptur Town, Tumakuru, Karnataka, 572201

4 Mobile : 7676201010

6 Counter Party Details : Name Purnima, S/o; Address Panchami Garments building owner, Tiptur Town, Tumakuru, Karnataka -

7 Yes

This Application is Accepted.

ಬಿಗಡಾಯಿಸುತ್ತಿರುವ ನಿರುದ್ಯೋಗ ಸಮಸ್ಯೆ

ತಮ್ಮನ್ನು ಅಧಿಕಾರಕ್ಕೇರಿಸಿದರೆ ಹಾಲುಜೇನಿನ ...ಳೆಯನ್ನೆ ಹರಿಸುವೆವು. ಸ್ವರ್ಗವನ್ನೆ ಧರೆಗಿಳಿಸುವೆವು. ...ಬ್ ಕಾ ಸಾಥ್ ಸಬ್ ಕಾ ವಿಕಾಸ್" ಎಂಬರ್ಥದ ...ಷಣ ಕುಟ್ಟುತ್ತಿದ್ದವರ ಮಾತುಗಳನ್ನು ಸ್ವಲ್ಪ ಜ್ಞಾಪಿಸಿಕೊಳ್ಳಿ. ...ಮ್ಮ ಸರ್ಕಾರ ಬಂದಾಕ್ಷಣ ಲಕ್ಷಾಂತರ ಕೋಟಿ ರೂಪಾಯಿ ...ದೇಶಿ ನೇರ ಹೂಡಿಕೆ (FDI) ಹರಿದುಬರಲಿದೆ, ಅದು ...ಂದಿನ ಎಲ್ಲಾ ದಾಖಲೆಗಳನ್ನು ಮುರಿಯಲಿದೆ, ...ರುದ್ಯೋಗದ ಸಮಸ್ಯೆ ನಿವಾರಣೆ ಆಗಲಿದೆ ಎಂಬಿತ್ಯಾದಿ ...ತ್ಯಾಕರ್ಷಕ ಭರವಸೆಗಳ ಮೂಲಕ ಯುವಜನತೆಯನ್ನು ...ಲ್ಪನಾಲೋಕದ ವಿಹಾರದಲ್ಲಿ ತೇಲಿಸಿ ವೋಟು ...ಟ್ಟಿಸಿಕೊಂಡವರನ್ನು ಸ್ಮರಿಸಿಕೊಳ್ಳಿ. ಹೀಗೆ ಬರೀ ಪೊಳ್ಳು ...ಶ್ವಾಸನೆಗಳ ಮೂಲಕ ಅಧಿಕಾರದ ಕುರ್ಚಿಯನ್ನು ...ನ್ನದಾಗಿಸಿಕೊಂಡಂಥಾ ಮೋದಿ ಸರ್ಕಾರ ಇದೀಗ ಸುಮಾರು ...ರಡೂವರೆ ವರ್ಷಗಳನ್ನು ಪೂರೈಸಿದ ಬಳಿಕವೂ ...ೇಳಿಕೊಳ್ಳುವಂಥಾ ಯಾವುದೇ ಒಳ್ಳೆಯ ಸಾಧನೆಗಳನ್ನು ...ಾಡದಿದ್ದರೂ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುತ್ತಿದೆ ...ಥವಾ ಕೆಲವೊಂದು ವಿಷಯಗಳಲ್ಲಿ ಹೊಣೆಗಾರಿಕೆಯಿಂದ ...ಣುಚಿಕೊಳ್ಳಲೂ ಪ್ರಾರಂಭಿಸಿದೆ! ವಾಸ್ತವವಾಗಿ ಮೋದಿ ...ರ್ಕಾರ ಸತ್ಸಾಧನೆಗಳಿಗಿಂತಲೂ ಹೆಚ್ಚು ದುಸ್ಸಾಧನೆಗಳಿಗಾಗಿ ...ಸರು ಮಾಡಿದೆ ಎಂದರೆ ತಪ್ಪಿಲ್ಲ. ಒಂದೆಡೆ ಮೋದಿಯ ...ಾತೃ ಸಂಘಟನೆಗೆ ಸೇರಿದವರಾದ ಉಗ್ರ ರಾಷ್ಟ್ರೀಯವಾದಿ ...ಳು ಬೀದಿಬೀದಿಗಳಲ್ಲಿ ತಾಂಡವವಾಡುತ್ತಾ ಭಾರತದ ...ಹುತ್ವ ಸಂಸ್ಕೃತಿಯನ್ನು ಚಿಂದಿಚೂರು ಮಾಡುತ್ತಿರುವಾಗ ...ನ್ನೊಂದೆಡೆ ಆಡಳಿತದ ನಾನಾ ಕ್ಷೇತ್ರಗಳಲ್ಲಿ ಸರ್ಕಾರದ ...ವೈಫಲ್ಯಗಳು ಒಂದೊಂದಾಗಿ ಎದ್ದುಕಾಣತೊಡಗಿವೆ.

ಏಷಿಯಾ ಖಂಡದ ದೊಡ್ಡ ಆರ್ಥಿಕ ವ್ಯವಸ್ಥೆಗಳ ಪೈಕಿ ಮೂರನೆಯ ಸ್ಥಾನದಲ್ಲಿದೆ ಎಂದು ತಿಳಿಯಲಾಗಿರುವ ಭಾರತದ ಆರ್ಥಿಕ ಆರೋಗ್ಯ ಕಳೆದೆರಡು ವರ್ಷಗಳಿಂದ ತುಂಬಾ ಹದಗೆಟ್ಟಿದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ರಫ್ತಿನ ಪ್ರಮಾಣ ಇಳಿಮುಖವಾಗುತ್ತಾ ಬಂದು ಇದೀಗ ಋಣಾತ್ಮಕ ಆಗಿದೆ. ಕಳೆದೆರಡು ವರ್ಷಗಳಲ್ಲಿ ಭಾರತದ ರಫ್ತು ಉದ್ಯಮದಲ್ಲಾಗಿರುವ 'ಬೆಳವಣಿಗೆ'ಯ ಕತೆಯನ್ನು ಈ ಕೆಳಗಿನ ಚಾರ್ಟ್ ಬಹಳ ಸ್ಪಷ್ಟವಾಗಿ ನಿರೂಪಿಸುತ್ತದೆ:

2014	4%
2015	-1 %
2016	- 18 %


ಹೀಗೆ ರಫ್ತು ವಲಯದಲ್ಲಿ ಪ್ರಗತಿಯ ಬದಲು ವಿಗತಿ ಆಗಿರುವುದರಿಂದ ಆರ್ಥಿಕ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಜಾಗತಿಕ ಮಟ್ಟದಲ್ಲಿ ಸರಕುಗಳಿಗೆ ಬೇಡಿಕೆ ಕಡಿಮೆಯಾಗಿರುವುದರಿಂದ ಹೀಗಾಗಿದೆ ಎನ್ನುತ್ತಿದ್ದಾರೆ ಮೋದಿ ಸರ್ಕಾರದ ಸಮರ್ಥಕರು. ಹಾಗಾದರೆ ಸರ್ಕಾರ ಯಾಕೆ ಇದನ್ನು ಎದುರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ? ಜಗತ್ತಿನ ಮೂಲೆಮೂಲೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಅವುಗಳಿಂದಾಗಬಹುದಾದ ಪರಿಣಾಮಗಳನ್ನು ನಿಭಾಯಿಸಲು ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಆಳುವ ಸರ್ಕಾರದ ಹೊಣೆಗಾರಿಕೆಯಲ್ಲವೆ? ಇದೀಗ ತಿಳಿದುಬಂದಿರುವಂತೆ ಹೆಚ್ಚು ಕಾರ್ಮಿಕರ ಅವಶ್ಯಕತೆ ಇರುವ ಚರ್ಮ, ಬಟ್ಟೆ, ರಬ್ಬರು, ಎಂಜಿನಿಯರಿಂಗ್ ಸಾಮಗ್ರಿಗಳು ಮುಂತಾದ 14 ಕ್ಷೇತ್ರಗಳಲ್ಲಿ ರಫ್ತಿನ ಪ್ರಮಾಣ ಕಡಿಮೆಯಾಗಿದೆ. 2016ರ ಸಾಲಿನಲ್ಲಿ ಈ 14ರ ಪೈಕಿ 8 ಕ್ಷೇತ್ರಗಳಲ್ಲಿ ರಫ್ತು ಇಳಿಮುಖವಾಗಿರುವುದು ಉದ್ಯೋಗ ಮಾರುಕಟ್ಟೆಯ ಮೇಲೂ ದುಷ್ಪರಿಣಾಮ ಬೀರಿದೆ. ಕಳೆದ ಏಳು ವರ್ಷಗಳ ಅವಧಿಯಲ್ಲಿ ಉದ್ಯೋಗಗಳ ಒಟ್ಟಾರೆ ಬೆಳವಣಿಗೆಯನ್ನು ಪರಿಗಣಿಸಿದರೆ ಕಳೆದ ವರ್ಷ ಅದು ಅತ್ಯಂತ ಮಂದಗತಿಯಲ್ಲಿದ್ದುದನ್ನು ಕಾಣಬಹುದು. ಇಳಿಮುಖವಾಗುತ್ತಾ ಸಾಗಿರುವ ಸರಕುಗಳ ರಫ್ತು ಪ್ರಮಾಣದಲ್ಲಿ ಕಳೆದ ಕೆಲವು ತಿಂಗಳುಗಳಿಂದಂತೂ ದೊಡ್ಡ ಮಟ್ಟದ ಕುಸಿತ ಆಗಿರುವುದರ ನೇರ ಪರಿಣಾಮವಾಗಿ ಸಹಸ್ರಾರು ಜನ ನೌಕರಿ ಕಳೆದುಕೊಳ್ಳುತ್ತಿದ್ದಾರೆ. ರಫ್ತಿನ ಪ್ರಮಾಣ ಕುಗ್ಗಿದುದರ ಫಲವಾಗಿ 2015ರ ಎರಡನೆ ಪಾದದಲ್ಲಿ (ಏಪ್ರಿಲ್‌ನಿಂದ ಜೂನ್) ಸುಮಾರು 70,000 ಜನ ನೌಕರಿ ಕಳೆದುಕೊಂಡಿದ್ದಾರೆಂದು ಅಸೋಸಿಯೇಟೆಡ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ASSOCHAM) ತಿಳಿಸಿದೆ. ASSOCHAM ಮತ್ತು Thought Arbitrage ಎನ್ನುವ ಸಂಶೋಧನಾ ಸಂಸ್ಥೆ ನಡೆಸಿದಂಥಾ ಜಂಟಿ ಅಧ್ಯಯನವೊಂದರ ಪ್ರಕಾರ ಇವರಲ್ಲಿ ಹೆಚ್ಚಿನವರು ಕಾಂಟ್ರಾಕ್ಟ್ ಆಧಾರದಲ್ಲಿ ಕೆಲಸ ಮಾಡುತ್ತಿದ್ದವರು. "ಇತ್ತ ಕಾಂಟ್ರಾಕ್ಟ್ ನೌಕರಿಗಳು ಇಲ್ಲವಾದಾಗ ಅತ್ತ ಆ ನಷ್ಟವನ್ನು ಭರ್ತಿ ಮಾಡಲು ಬೇಕಾದಷ್ಟು ಕಾಯಂ ನೌಕರಿಗಳು ಸೃಷ್ಟಿಯಾಗಿಲ್ಲ, ಮುಖ್ಯವಾಗಿ ಜವಳಿ ಉದ್ದಿಮೆಯ ಪರಿಸ್ಥಿತಿ ಹಿಂದೆಂದಿಗಿಂತ ಹೆಚ್ಚು ಕೆಟ್ಟದಾಗಿದೆ" ಎಂದು ASSOCHAM ಅಭಿಪ್ರಾಯಪಟ್ಟಿದೆ.

ಹಾಗೆ ನೋಡಿದರೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಉದ್ಯೋಗ ಲಭ್ಯತೆಯ ಪರಿಸ್ಥಿತಿ ಕೆಟ್ಟದಾಗುತ್ತಲೆ ಸಾಗಿದೆ. 2009, 2011, 2013 ಮತ್ತು 2015ರ ತೃತೀಯ ಪಾದಗಳ (ಜುಲೈನಿಂದ ಸೆಪ್ಟಂಬರ್) ಅಂಕಿಅಂಶಗಳನ್ನು ಹೋಲಿಸಿದರೆ 2015ರ ಪಾದದಲ್ಲಿ ಉದ್ಯೋಗಗಳ ಸಂಖ್ಯೆಯಲ್ಲಿ ಅತ್ಯಂತ ಕಡಿಮೆ ಹೆಚ್ಚಳ ಆಗಿರುವುದನ್ನು ಕಾಣಬಹುದು. ಈಗಲಂತೂ ಅದು ಇನ್ನಷ್ಟು ಕೆಳಮಟ್ಟಕ್ಕಿಳಿಯುವ ಸೂಚನೆಗಳು ಕಂಡುಬರುತ್ತಿವೆ. ಅಸಲಿಗೆ ವಿಷಯ ಏನೆಂದರೆ ಮೋದಿ ಸರ್ಕಾರದ ನಾನಾ ಜಾಹೀರಾತುಗಳು, ಘೋಷಣೆಗಳು, ರೇಡಿಯೊ ಟಾಕ್‌ಗಳ ಹೊರತಾಗಿಯೂ ಭಾರತದ ಉತ್ಪಾದನಾ ಕ್ಷೇತ್ರ ದುರ್ಬಲವಾಗಿದೆ. ಮೋದಿಯ ಚುನಾವಣಾಪೂರ್ವ ಭರವಸೆಗಳ ಬಲೂನುಗಳೆಲ್ಲಾ ಹೀಗೆ ಒಂದೊಂದಾಗಿ ಒಡೆಯಲಾರಂಭಿಸಿವೆ. ಇದನ್ನೆಲ್ಲ ಗಮನಿಸುತ್ತಿರುವ ಮತದಾರರಲ್ಲಿ ಭ್ರಮನಿರಸನ ಶುರುವಾಗಿದ್ದರೆ ಅದರಲ್ಲಿ ಅಚ್ಚರಿಯೇನು ಬಂತು!


(ಆಧಾರ: *Quartz.com* ನಲ್ಲಿ ಮಧುರಾ ಕಾರ್ನಿಕ್ ಲೇಖನ)

■ ಸುರೇಶ್ ಭಟ್ ಬಾಕ್ರಬೈಲ್


ಬೂಸಿ ಬಸ್ಯ... ಮೋದಿ!




.1 ⏮ ಅನುಪಮಾಗೆ ವನವಾಸ!!



...ರ್ ಫರ್ನಾಂಡಿ...




ಪರಮೇಶ್ವರ್, ಗೃಹಮಂತ್ರಿ



ಪಿ.ಟಿ.ಪರಮೇಶ್ವರ್ ನಾಯ್ಕ್

...ಸಂದ್ಲಾಜೆಯ ಕರಾಮತ್ತಿಗೆ ಅನುಪಮಾ ಶೆಣೈ ...ರುಳಾದರೆಂಬುದಂತೂ ಖರೆ! ಕಾಂಗ್ರೆಸ್ ಸರ್ಕಾರವನ್ನು ...ಕಟ್ಟಿಗೆ ಸಿಲುಕಿಸಿ ಅಲ್ಲಾಡಿಸಿದರೆ ಅಸೆಂಬ್ಲಿ ಎಲೆಕ್ಷನ್ ...ೊತ್ತಲ್ಲಿ ಉಡುಪಿ ಕ್ಷೇತ್ರದ ಟಿಕೆಟ್ ಕೊಡಿಸುವ ಆಶ್ವಾಸನೆ ...ಶೋಭಾ ಆಕೆಗೆ ಕೊಟ್ಟಿದ್ದರಂತೆ. ಅನುಪಮಾ ...ಎಮ್ಮೆಲ್ಲೆಯಾದರೆ ತನ್ನ 'ದೊರೆ' ಯಡ್ಡಿ ಮಹಾರಾಜ್ ...ಮುಂದೆ ಮುಖ್ಯಮಂತ್ರಿಯಾಗಲು ಸಹಾಯವಾಗುತ್ತದೆಂಬ ...ದೂ(ದು)ರಾಲೋಚನೆ ಶೋಭಕ್ಕನದು.

ಹೀಗಾಗಿ ಶೋಭಾ "ನಿನ್ನ ರಾಜೀನಾಮೆಯಿಂದ ...ರ್ನಾಟಕದ ರಾಜಕಾರಣದಲ್ಲಿ ಕ್ರಾಂತಿಯಾಗುತ್ತದೆ.... ಸರ್ಕಾರ



ಅನುಪಮಾ


...ುರುಳುತ್ತದೆ.... ನೀನು ಎಮ್ಮೆಲ್ಲೆಯಷ್ಟೇ ಅಲ್ಲ ...ಮಂತ್ರಿಯಾಗುವ ಅವಕಾಶವೂ ಬರಬಹುದು...." ಎಂದೆಲ್ಲ ...ಅನುಪಮಾರನ್ನು ಪುಸಲಾಯಿಸಿದ್ದರು. ಸಾಧ್ಯಾಸಾಧ್ಯತೆಯ ...ದೂರದೃಷ್ಟಿ ದೋಷದ ಅನುಪಮಾ ಮಾಟಗಾತಿ ಶೋಭಕ್ಕನ ...ಮಾತು ನಂಬಿ ರಾಜೀನಾಮೆ ಹಿಂಪಡೆಯಲು ...ನಿರಾಕರಿಸಿದರು. ಪಾಲಕರು ಅದೆಷ್ಟೇ ಬುದ್ಧಿ ಹೇಳಿದರೂ ...ಆಕೆಗೆ ಅದು ಪಥ್ಯವಾಗಲಿಲ್ಲ. ಶೋಭಕ್ಕನ ಮಾತೇ ...ವೇದವಾಕ್ಯದಂತಾಯ್ತು. ಡಿವೈಎಸ್‌ಪಿಗಿರಿಗಿಂತ ಶಾಸಕಿ ಸ್ಥಾನ-...ಮಾನವೇ ಇಷ್ಟಗೆದಿಸತೊಡಗಿತು. ರಾಜ್ಯ ಬಿಜೆಪಿಯ ...ಷಡ್ಯಂತ್ರ ಸೂತ್ರಧಾರಿಣಿಯೇ ತನ್ನ ಪರವಿರುವಾಗ ...ಉಡುಪಿ ಶಾಸಕಿ ಆಗೋದೇನು ಮಹಾ ಎಂಬ ...ದುಸ್ಸಾಹಸವೂ ಅನುಪಮಾರಲ್ಲಿ ಬೆಳೆದು ಬಿಟ್ಟಿತು.

ಸಿದ್ದು ಸರ್ಕಾರಕ್ಕೆ ಬಡ ಕುಟುಂಬದ ಅನುಪಮಾರ ರಾಜೀನಾಮೆ ಸ್ವೀಕರಿಸುವ ಹಠವೇನೂ ಇರಲಿಲ್ಲ. ಆಕೆಯ ತಂದೆ-ತಾಯಿಯ ಕನಸು ರಾಜೀನಾಮೆ ಒಪ್ಪುವುದರಿಂದ ಭಗ್ನವಾಗುತ್ತದೆಂಬ ಅರಿವಿತ್ತು. ಹೀಗಾಗಿ ಗೃಹ ಇಲಾಖೆ ಅನುಪಮಾರನ್ನು ಮತ್ತೆ ಡಿವೈಎಸ್‌ಪಿ ನೌಕರಿಗೆ ತರಲು ಶತಾಯಗತಾಯ ಪ್ರಯತ್ನಿಸಿದೆ. ಆದರೆ ಅನುಪಮಾ ಮಾತ್ರ ಇದಕ್ಕೆ ಸ್ಪಂದಿಸಲೇ ಇಲ್ಲ. ಅನಿವಾರ್ಯವಾಗಿ ಸರ್ಕಾರ ರಾಜೀನಾಮೆ ಅಂಗೀಕರಿಸಬೇಕಾಗಿ ಬಂತು. ಯಾವಾಗ ರಾಜೀನಾಮೆ ಸ್ವೀಕಾರವಾಯ್ತೋ, ಆ ಕ್ಷಣದಿಂದಲೇ ಅನುಪಮಾ ಅಪ್ರಸ್ತುತರಾಗುತ್ತ ಹೋದರು. 'ಟಿವಿಗಳು' ಆಕೆಯತ್ತ ಸುಳಿಯಲಿಲ್ಲ, ಪತ್ರಿಕೆಯಲ್ಲಿ ಅನುಪಮಾ ಕಾಣಿಸಲಿಲ್ಲ, ಸಾವಕಾಶವಾಗಿ ಜನರೂ ಆಕೆಯನ್ನು ಮರೆತರು. ಕಲ್ಲಪ್ಪ ಹಂಡಿಭಾಗ್, ಗಣಪತಿಯಂಥ ಸಂಘಿ ಸಹವಾಸದ ಪೊಲೀಸ್ ಅಧಿಕಾರಿಗಳ ಆತ್ಮಹತ್ಯೆಯೇ ಅನುಪಮಾರ 'ಹುತಾತ್ಮಗಿರಿ'ಗಿಂತ ಸದ್ದು-ಸುದ್ದಿ ಮಾಡತೊಡಗಿತು. ಅನುಪಮಾ ತನ್ನ ತಲೆ ಮೇಲೆ ತಾನೇ ಕಲ್ಲು ಚಪ್ಪಡಿ ಎಳೆದುಕೊಂಡರು.

ಶಾಸಕಿ ಮಾಡುವ ಮಾತು ಕೊಟ್ಟಿದ್ದ ಚೆಡ್ಡಿ ಪರಿವಾರದವರೂ ಕೈಕೊಟ್ಟರು. ಅನುಪಮಾರನ್ನು ಬಿಜೆಪಿಗೆ ತರುವ ಶೋಭಕ್ಕ ಸಂಚಿಗೆ ಬಿಜೆಪಿಯಲ್ಲಿ ಪ್ರತಿರೋಧವೂ ಶುರುವಾಯ್ತು. ಸಾಕ್ಷಾತ್ ಯಡ್ಡಿಗೆ ಸೆಡ್ಡು ಹೊಡೆದು ನಿಂತಿರುವ ಸಿ.ಟಿ. ರವಿ ಯಾವ ಕಾರಣಕ್ಕೂ ಅನುಪಮಾ ಶೆಣೈ ಬಿಜೆಪಿ ಪಾಲಾಗಲು ಬಿಡಲಾರೆನೆಂದು ಶಪಥ ಮಾಡಿದ್ದರು. ತನ್ನ ಪರಮ ವೈರಿಣಿ ಶೋಭಾ ಕರಂದ್ಲಾಜೆ ಆತ್ಮೀಯ ಸಂಗಡಿಗ ರಘುಪತಿ ಭಟ್ಟನಿಗೆ ಕೋಕ್ ಕೊಡಿಸಿ ಅನುಪಮಾಗೆ ಛಾನ್ಸ್ ಕೊಡಿಸಲು ಹೊರಟಿರುವುದು ರವಿಯ ಪಿತ್ಥ ನೆತ್ತಿಗೇರಿಸಿತ್ತು. ಈ ಬಿಜೆಪಿ ಒಳಸುಳಿ ಅರ್ಥವಾಗದ ಅನುಪಮಾ ಡಿವೈಎಸ್‌ಪಿ ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆ ಪ್ರಕರಣದಲ್ಲಿ ಸಿ.ಟಿ. ರವಿ ಕೈವಾಡವೂ ಇದೆಯೆಂದು ಕಂಡಕಂಡಲ್ಲಿ ಹಲುಬಿದ್ದರು. ಇದು ಸಿ.ಟಿ. ರವಿಯ ಕಿವಿಗೂ ಅಪ್ಪಳಿಸಿತ್ತು. ಹೀಗಿರಲು ಅನುಪಮಾಯಣ ರಾಜ್ಯ ಬಿಜೆಪಿಯ ಮುಂಚೂಣಿ ಮುಖಂಡ ಮಣಿಯಾಗಿ ಅವತರಿಸಿರುವ ರವಿ ಆಕೆಯ ಬಿಜೆಪಿ ಪ್ರವೇಶ ಒಪ್ಪಲು ಸಾಧ್ಯವೇ. ಅಲ್ಲಿಗೆ ಅನುಪಮಾಗೆ ಬಿಜೆಪಿಯ ಬಾಗಿಲೂ ಬಂದ್ ಆಗಿಬಿಟ್ಟಿತು!!

ರವಿಯ ಆವಾಜಿಗೆ ಹೆದರಿದ ಶೋಭಕ್ಕ ಅನುಪಮಾರ ಉಸಾಬರಿ ಬಿಟ್ಟೇಬಿಟ್ಟರು.

ಆಗ ಅನುಪಮಾಗೆ ಬದುಕಿನ ಕಠೋರ ವಾಸ್ತವದ ಅರಿವಾಯ್ತು. ತಾನು ಸಂಘಿ ಸೈತಾನರ ನಂಬಿ ಮೋಸ ಹೋದೆ, ಶೋಭಕ್ಕ ದ್ರೋಹ ಮಾಡಿದಳು ಎಂಬಿತ್ಯಾದಿ ರಾಜಕಾರಣದ ಕಿರಿಕ್‌ಗಳು ಬಹುಶಃ ಆಕೆಯ ಕಣ್ಣು ತೆರೆಸಿರಬೇಕು. ಡಿವೈಎಸ್‌ಪಿ ಹುದ್ದೆಗೆ ರಾಜೀನಾಮೆ ನೀಡಿದ್ದು ತಪ್ಪೆಂಬ ಅರಿವು ಆಕೆಗಾಯ್ತು. ಕೆಟ್ಟ ಮೇಲೆ ಬುದ್ಧಿ ಬಂತು. ರಾಜೀನಾಮೆ ವಾಪಸ್‌ಗೆ ಅರ್ಜಿ ಸರ್ಕಾರಕ್ಕೆ ಕೊಟ್ಟಿರುವ ಅನುಪಮಾ ಈಗ ಮತ್ತೆ ಡಿವೈಎಸ್‌ಪಿ ಚಾಕರಿಗೆ ಹೋಗಲು ಮಾನಸಿಕವಾಗಿ ರೆಡಿಯಾಗಿದ್ದಾರೇನೋ ನಿಜ. ಆದರೆ ಡಿಸಿಪಿ ಓಂಪ್ರಕಾಶ್, ಐಜಿಪಿ ಮುರುಗನ್‌ನಂಥ ದೊಡ್ಡವರು ಈಕೆಯನ್ನು ನಂಬುವ ಸ್ಥಿತಿಯಲ್ಲಿಲ್ಲ. ಆಕೆ ಮಂತ್ರಿ ಪರಮೇಶಿ ಜತೆ ಕಿರಿಕ್ ಮಾಡಿಕೊಂಡಾಗ ಈ ಇಬ್ಬರು ಅಧಿಕಾರಿಗಳು ಫೋನಿನಲ್ಲಿ ಕೌನ್ಸೆಲಿಂಗ್ ಮಾಡಿದ್ದರು. ಮಮತೆಯಿಂದ ದಾರಿ ತೋರಿಸಿದ್ದರು. ಎಲ್ಲಿಯೂ ದರ್ಪ-ಆಜ್ಞೆಯ ಧಾಟಿ ಬಳಸಲೇ ಇಲ್ಲ. ಆದರೆ ಇದನ್ನೇ ರಿಕಾರ್ಡ್ ಮಾಡಿಕೊಂಡಿದ್ದ ಅನುಪಮಾ ದಿಲ್ಲಿ ಮಾಧ್ಯಮಗಳ ಕೈಗೇ ಅದನ್ನು ಕೊಟ್ಟಿದ್ದರು. ಆದರೆ ಆಕೆಗೇ ಮುಳುವಾಯ್ತು. ಐಜಿಪಿ, ಡಿಜಿಪಿಗಳು ಆಕೆಯೊಂದಿಗೆ ನಯ-ವಿನಯ-ಗೌರವದಿಂದಲೇ ಮಾತಾಡಿದ್ದರಿಂದ ಇದು ಸುದ್ದಿಯಾಗಲೇ ಇಲ್ಲ.



ಕಲ್ಲಡ್ಕ ಭಟ್ಟ



ಅನುಪಮಾರ ಬಾಂಬ್ ಟುಸ್ ಆಯ್ತು. ಜತೆಗೆ ಆಕೆಯ ಬಗ್ಗೆ ಅಧಿಕಾರಿಗಳಿಗೆ ನಂಬಿಕೆಯೂ ಬರದಂತಾಯ್ತು. ತನ್ನ ರಾಜೀನಾಮೆ ವಾಪಸಾತಿ ಇತ್ಯರ್ಥವಾಗದಿದ್ದರಿಂದ ಸ್ಥಿಮಿತ ಕಳೆದುಕೊಂಡಿರುವ ಅನುಪಮಾ ಈಗ ಮಾಜಿ ಪ್ರಧಾನಿ ದೇವೇಗೌಡರಿಂದ ಮಾಜಿ ಮಂತ್ರಿ ವಿ. ಶ್ರೀನಿವಾಸ್ ಪ್ರಸಾದ್ ತನಕ, ಅಲ್ಲಿಂದ ರಾಜ್ಯಪಾಲ ವಾಲಾರಿಂದ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿವರೆಗೆ ಕಂಡಕಂಡವರ ಭೇಟಿಯಾಗಿ ಉದ್ಯೋಗ ಕೊಡಿಸಿ ಎಂದು ಅಂಗಲಾಚುತ್ತಿದ್ದಾರೆ. ಕೇಂದ್ರ ಗೃಹ ಮಂತ್ರಿ ರಾಜನಾಥ ಸಿಂಗರ ಪಾದಕ್ಕೂ ಅಡ್ಡ ಬಿದ್ದು ಬಂದಿದ್ದಾರೆ. ಆದರೆ ಯಾವುದೂ ಫಲ ನೀಡುತ್ತಿಲ್ಲ.

ಈಗ ಅನುಪಮಾ ದಿಕ್ಕೇ ತೋಚದಂಥ ಅಯೋಮಯ ಸ್ಥಿತಿಗೆ ಬಿದ್ದಿದ್ದಾರೆ. ಒಂದು ಕಡೆ ಕಾಂಗ್ರೆಸ್‌ನ ದೊಡ್ಡ-ದೊಡ್ಡ ಲೀಡರ್‌ಗಳ ಮನೆ ಬಾಗಿಲಿಗೆ ಎಡತಾಕುತ್ತಿರುವ ಆಕೆ ಮತ್ತೊಂದೆಡೆ ಬಿಜೆಪಿ-ಸಂಘಿ ಭೂಪರ ಸಂಪರ್ಕವೂ ಮುಂದುವರಿಸಿದ್ದಾರೆ. ಉಡುಪಿ ಮೂಲದ ಕಾಂಗ್ರೆಸ್ ಮಾಂಡಲೀಕ ಆಸ್ಕರ್ ಫರ್ನಾಂಡಿಸ್ ಮೂಲಕ ಸಿಎಂ ಸಿದ್ದು- ಗೃಹಮಂತ್ರಿ ಪರಮ್ ಮೇಲೆ ಒತ್ತಡ ಹಾಕಿಸಿ ಡಿವೈಎಸ್‌ಪಿ ನೌಕರಿ ಮರಳಿ ಪಡೆಯಲು ಶಿಫಾರಸು ಹಾಕುತ್ತಿದ್ದಾರೆ. ಆಸ್ಕರ್‌ಗೆ ಹತ್ತಿರನಾಗಿರುವ ಸ್ವ-ಜಾತಿ ಕೊಂಕಣಿಗನೊಬ್ಬನ ಮೂಲಕ ವಶೀಲಿ ಮಾಡಿಸುತ್ತಿರುವ ಅನುಪಮಾ ಅತ್ತ ಆರ್‌ಸ್ಸೆಸ್‌ನಲ್ಲೀಗ ಕಿಮ್ಮತ್ತು ಕಳೆದುಕೊಂಡಿರುವ ಕಲ್ಲಡ್ಕ ಪ್ರಭಾಕರ್ ಭಟ್ಟರ ಮೂಲಕವೂ ಪ್ರಯತ್ನ ನಡೆಸಿದ್ದಾರೆ. ರೇಪಿಸ್ಟ್ ರಾಘು ಸ್ವಾಮಿ ಸಮರ್ಥಕನೂ ಕೊಲೆಗಾರ ನರೇಶ್ ಶೆಣೈ ದೋಸ್ತನೂ ಆಗಿರುವ ಬಾಡಿಗೆ ಮಾತುಗಾರ ಸೂಲಿಬೆಲೆ ಚಕ್ರವರ್ತಿ ಸಹವಾಸವೂ ಮಾಡಿದ್ದಾರೆ. ಆಕಸ್ಮಾತ್ ನೌಕರಿ ಭಾಗ್ಯ ಇಲ್ಲದಿದ್ದರೆ ಬಿಜೆಪಿ ರಾಜಕಾರಣಿಯಾಗುವ ಅವಕಾಶವಾದರೂ ಈ ಕಲ್ಲಡ್ಕ-ಸೂಲಿಬೆಲೆ ಕೊಡಿಸಬಹುದೆಂಬ ಲೆಕ್ಕಾಚಾರ ಅನುಪಮಾರದಂತೆ!

"ನನ್ನ ರಾಜೀನಾಮೆ ಐದೇ ದಿನದಲ್ಲಿ ಸ್ವೀಕರಿಸಿದ ಸರ್ಕಾರ ರಾಜೀನಾಮೆ ವಾಪಸ್‌ಗೆ ಹಾಕಿಕೊಂಡಿರುವ ಅರ್ಜಿಯನ್ನು ತಿಂಗಳಾದರೂ ಏಕೆ ಪರಿಗಣಿಸುತ್ತಿಲ್ಲ?...." ಎಂದು ಎಲ್ಲರೆದುರು ಗೋಗರೆಯುವ ದುಃಸ್ಥಿತಿ ಅನುಪಮಾಗೆ ಬಂದಿದೆ. ಮಂಗಳೂರಲ್ಲಿ ಸಂಘಪರಿವಾರ ಆಯೋಜಿಸಿದ್ದ ಹೈದರಾಬಾದ್ ವಿಮೋಚನಾ ಸಭೆಯಲ್ಲಿ 'ಚಕ್ರವರ್ತಿ' ಸೂಲಿಬೆಲೆ ಜತೆ ಭಾಗವಹಿಸಿದ್ದ ಆಕೆ ಅಲ್ಲೂ ತನ್ನ 'ಪುನರ್ ಪರಿಶೀಲನಾ' ಅರ್ಜಿ ವಿಳಂಬದ ಬಗ್ಗೆ ಹಲುಬಿದ್ದಾರೆ. ರಾಜೀನಾಮೆ ಕೊಟ್ಟಿದ್ದೇಕೆ? ಈಗ ವಾಪಸ್ ಪಡೆಯು ವುದೇಕೆ? ಇದು ಆಕೆಗೇ ಅರ್ಥವಾಗದ ಪ್ರಶ್ನೆಯಂತಾಗಿದೆ. ಸಂಘ ಪರಿವಾರದ ಸಹವಾಸಕ್ಕೆ ಬಿದ್ದು ಬದುಕು ಬರ್ಬಾದ್ ಮಾಡಿಕೊಂಡಿರುವ ಅನುಪಮಾರ ಗೋಳು ಹೇಳತೀರದು. ಮಗಳ ಭವಿಷ್ಯದ ಬಗ್ಗೆ ಬೆಟ್ಟದಷ್ಟು ಭರವಸೆ-ಕನಸು ಇಟ್ಟುಕೊಂಡಿದ್ದ ಆಕೆಯ ಬಡ ತಾಯ್ತಂದೆಯರ ಸಂಕಟ ಇನ್ನೂ ಘೋರ.

ಕೆಪಿಎಸ್‌ಸಿಯ ಡಿವೈಎಸ್‌ಪಿಯಂಥ ಜವಾಬ್ದಾರಿಯ ಹುದ್ದೆಗೆ ಆಯ್ಕೆಯಾಗುವವರು ಸಮಚಿತ್ತದವರಾಗಿರಬೇಕು; ಕಳ್ಳರು-ಸುಳ್ಳರು-ಪುಂಡರು-ಪುಢಾರಿಗಳನ್ನೆಲ್ಲ ಸಮಯಪ್ರಜ್ಞೆ-ಚಾಕಚಕ್ಯತೆಯಿಂದ ನಿಭಾಯಿಸುವಂಥವರು ಆಗಿರಬೇಕು. ಇದ್ಯಾವುದೂ ಸಾಧ್ಯವೇ ಇಲ್ಲವೆಂದಾದರೆ ಕೊಟ್ಟ ರಾಜೀನಾಮೆಗಾದರೂ ಬದ್ಧರಾಗಿಬೇಕು. ಈ ಅರ್ಹತೆಗಳೇ ಎಡಬಿಡಂಗಿ ಗುಣಧರ್ಮದ ಅನುಪಮಾ ಶೆಣೈರಲ್ಲಿಲ್ಲ! ಇಂಥ ದುರ್ಬಲ ವ್ಯಕ್ತಿತ್ವದ-ಅಸಾಮರ್ಥ್ಯದ ಅನುಪಮಾರನ್ನು ಗುರುತರ ಹೊಣೆಗಾರಿಕೆಯ ಡಿವೈಎಸ್‌ಪಿ ಹುದ್ದೆಗೆ ಆಯ್ಕೆ ಮಾಡಿದ ಕೆಪಿಎಸ್‌ಸಿ ಪ್ರಭೃತಿ ಯಾರಿರಬಹುದು? ಅವರ ಯೋಗ್ಯತೆ ಎಂಥದ್ದಿರಬಹುದು?

ಹಾಗಂತ ಅನುಪಮಾರ ಅವಾಂತರ ಕಂಡವರು ಮಾತಾಡಿಕೊಳ್ಳುತ್ತಿದ್ದಾರೆ. ಆಕೆ ಮತ್ತೆ ಡಿವೈಎಸ್‌ಪಿ ಹುದ್ದೆಗೇರಿದರೆ ಯಾರ್‍ಯಾರಿಗೆ ಗ್ರಹಚಾರ ಕಾದಿರುವುದೋ? ಗೃಹ ಇಲಾಖೆಗೆ ಇದರ ಅರಿವಿರಬಹುದೆ?

■ ವರದಿಗಾರ

ಮೈಸೂರು: ಚೆಡ್ಡಿ ಪ್ರತಾಪನಿಗೆ ಜನರ ತಪರಾ




ಕಾವೇರಿ ವಿವಾದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ರಾಜ್ಯವೇ ಒಕ್ಕೊರಲಿನಿಂದ ದನಿ ಎತ್ತುತ್ತಿದ್ದರೆ ಬಿಜೆಪಿಗಳು, ಆರ್‌ಎಸ್‌ಎಸ್‌ನ ಚೆಡ್ಡಿಗಳು, ಭಜರಂಗಿಗಳು, ಹಿಂದೂ ಸಂಘಟನೆಗಳು ಮಾತ್ರ ನಾಪತ್ತೆಯಾಗಿ ಹೋಗಿದ್ದವು. ಅದರಲ್ಲೂ ಮೋದಿ ಮಹಾತ್ಮನನ್ನು ಬಚಾವು ಮಾಡುವ ಸಲುವಾಗಿ ಸರ್ವಪಕ್ಷ ಸಭೆಗೆ ಚಕ್ಕರ್ ಹೊಡೆದ ಬಿಜೆಪಿಗಳ ರಾಜಕೀಯ ಬಣ್ಣ ಎಂತದ್ದೆಂಬುದು ಕನ್ನಡಿಗರಿಗೆ ಮನದಟ್ಟಾಗಿ ಹೋಗಿದೆ. ಚೆಡ್ಡಿಗಳಿಗೆ ಸಣ್ಣ ಕೀರಲು ಗಾಯವಾದರೂ ಆಕಾಶದಗಲ ಬಾಯಿ ತೆರೆದು ಘರ್ಜಿಸುತ್ತಿದ್ದ ಪ್ರತಾಪ ಸಿಂಹವ್ವೂ ಅದ್ಯಾರು ಹಾಕಿದ ಮೂಳೆ ಕಡಿಯುತ್ತಾ ಮಲಗಿತ್ತೋ ತಿಳಿಯದು. ಹೊಟ್ಟೆ ಬಿರಿಯುವಂತೆ ಗಡದ್ದಾಗಿ ತಿಂದಾದ ಮೇಲೆ ಸುಮ್ಮನೆ ವಾಯುವಿಹಾರಕ್ಕೆಂದು ಮಂಡ್ಯ ಮೈಸೂರನ್ನು ಸುತ್ತಾಡಿ ಮತ್ತೆ ಗುಹೆ ಸೇರಿ ಮಲಗಿಬಿಟ್ಟಿತು. ಅದು ತಾನೆ ಏನು ಮಾಡಲು ಸಾಧ್ಯ ಆ ಪರಮಾತ್ಮ (ಮೋದಿ) ಆಡಿಸಿದಂತೆ ಹಾಡುತ್ತಿದೆ. ಮೊನ್ನೆ ಮಂಡ್ಯದಲ್ಲಿ ಪೇಪರ್ ಸಿಂಹನಿಗೆ ಕನ್ನಡಿಗರು ಸರಿಯಾಗೇ ಜಾಡಿಸಿದ್ದಾರೆ.

ಸೆಪ್ಟಂಬರ್ 23 ರಂದು ಮಂಡ್ಯದಲ್ಲಿ ನಡೆಯುತ್ತಿದ್ದ ಕಾವೇರಿ ಹೋರಾಟದ ವೇದಿಕೆ ಹತ್ತಿದ ಪ್ರತಾಪ ಚೆಡ್ಡಿಗಳಿಗಿರುವ ವೆರಿಓಲ್ಡ್ ಬೊಗಳೆ ಭಾಷಣದ ಕಾಯಿಲೆಯನ್ನು ನೆತ್ತಿಗಡರಿಸಿಕೊಂಡವನಂತೆ ಭಾಷಣಕ್ಕಿಳಿದಿದ್ದ. ಸುಪ್ರೀಂ ಕೋರ್ಟ್ ಆದೇಶ ವಾಸ್ತವಾಂಶದಿಂದ ಕೂಡಿಲ್ಲ; ರಾಜ್ಯ ಸರ್ಕಾರ ಆರಂಭದಿಂದಲೇ ನೀರು ಬಿಡುವುದಿಲ್ಲ ಎಂದು ಹೇಳಬೇಕಿತ್ತು; ಸರ್ಕಾರ ರೈತರ ಪರ ನಿಲ್ಲದೆ ಅಧಿಕಾರಕ್ಕೆ ಅಂಟಿಕೊಂಡು ಕೂತಿದೆ ಅಂತೆಲ್ಲ ತನ್ನ ರಾಜಕಾರಣ ಶುರು ಮಾಡಿದ್ದ. ಅಲ್ಲಿದ್ದವರ್‍ಯಾರು ಪ್ರತಾಪು ಭಾವಿಸಿದಷ್ಟು ಮೂರ್ಖರಾಗಿರಲಿಲ್ಲ. ಇಡೀ ಪ್ರಕರಣದಲ್ಲಿ ಬಿಜೆಪಿಗಳು ನಡೆಸಿಕೊಂಡ ಬಂದ ರಾಜ್ಯದ್ರೋಹಿ ರಾಜಕಾರಣವನ್ನು ಕಣ್ಣಾರೆ ಕಂಡಿದ್ದ ಮಂದಿ ಅವರು. ಯಾವಾಗ ಪ್ರತಾಪು ಮತ್ತದೇ ಟೇಪು ತಿರುಗಿಸತೊಡಗಿದನೋ ಅವನ ಭಾಷಣ ಅರ್ಧಕ್ಕೇ ತಡೆದ ಕಾವೇರಿ ಹೋರಾಟಗಾರರು, ಕೇಂದ್ರದಲ್ಲಿ ಅಧಿಕಾರದಲ್ಲಿರೋದು ನಿಮ್ಮದೇ ಪಕ್ಷ, ಕಾವೇರಿ ವಿವಾದ ಹೊತ್ತಿ ಉರಿಯುತ್ತಿದ್ದರೂ ಯಾಕೆ ಮಧ್ಯ ಪ್ರವೇಶಿಸುತ್ತಿಲ್ಲ? ನಿಮ್ಮ ಪಕ್ಷದ ನಾಯಕರು ಸರ್ವಪಕ್ಷ ಸಭೆಗೆ ಯಾಕೆ ಹಾಜರಾಗಿಲ್ಲ? ಕಾವೇರಿ ಹೋರಾಟ ಆರಂಭವಾಗಿ 19 ದಿನಗಳೇ ಕಳೆದುಹೋಗಿವೆ ಇಲ್ಲಿಯವರೆಗೆ ಎಲ್ಲಿ ಹೋಗಿದ್ದಿರಿ ಅಂತ ತರಾಟೆಗೆ ತೆಗೆದುಕೊಂಡಿದ್ದರು.

ಎಷ್ಟೇ ಆದರೂ ಪ್ರತಾಪು ಸಂಘಿ ಟ್ರೈನಿ ಅಲ್ಲವೇ. ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂತ ಅಲೆದಾಡುವುದು ಸಂಘಿಗಳಿಗೇನೂ ಹೊಸದಲ್ಲ. ಅವತ್ತು ಜನ ಹಿಗ್ಗಾಮುಗ್ಗಾ ಜಾಡಿಸುತ್ತಿದ್ದರೆ ಪ್ರತಾಪು ಪುಟ್ಟ ಮೊರೆಹೋದದ್ದು ಅದೇ ಶೈಲಿಗೆ. "ನಮ್ಮ ಪಕ್ಷದವರೇನು ಸುಮ್ಮನೆ ಕುಳಿತಿಲ್ಲ, ಪಕ್ಷದ ಎಲ್ಲ ನಾಯಕರು ಕೇಂದ್ರದ ಸಚಿವರೊಂದಿಗೆ ಮಾತನಾಡಿ ಎಲ್ಲವನ್ನೂ ತಿಳಿಸಿದ್ದಾರೆ" ಅಂತ ಏನೇನೋ ಒದರಾಡಿ ತೇಪೆ ಹಾಕಿಕೊಳ್ಳಲು ನೋಡಿದ. ಆದರೂ ಜನ ಅವನ ಮಾತಿಗೆ ಮಣೆ ಹಾಕಲಿಲ್ಲ. "ನಾನೂ ಕೂಡ ರೈತನ ಮಗನೇ, ನಮ್ಮ ಅಪ್ಪನೂ ಬ್ಯಾಂಕ್‌ನಲ್ಲಿ ಸಾಲ ಮಾಡಿ ಬ್ಯಾಂಕ್‌ನವರು ಸಾಲ ವಸೂಲಿಗೆ ಮನೆ ಬಳಿ ಬಂದಾಗ ಅವಿತುಕೊಂಡು ಕುಳಿತಿದ್ದ. ಹಾಗಾಗಿ ರೈತರ ಕಷ್ಟ ಏನು ಎಂದು ನನಗೆ ಗೊತ್ತಿದೆ" ಅಂತ ಎಮೋಷನಲ್ ಬ್ಲಾಕ್‌ಮೇಲ್ ತಂತ್ರವನ್ನೂ ಪ್ರಯೋಗಿಸಿ ಅಲ್ಲಿಂದ ಸೈಲೆಂಟಾಗಿ ಜಾರಿಕೊಂಡ.

ಕಾವೇರಿ ಉಳಿಸಿಕೊಳ್ಳಲು ಹೋರಾಟ ಆರಂಭವಾಗಿ 18 ದಿನವೇ ಕಳೆದು ಹೋಗಿದೆ. ಪ್ರತಾಪು ಪುಟ್ಟ ಎಂಪಿ ಆಗಿರೋದು ಇದೇ ಕಾವೇರಿ ಕೊಳ್ಳದ ಜನರ ಓಟು ಪಡೆದು. ಅಷ್ಟಾದರು ಆತ ಘರ್ಜಿಸಲೂ ಇಲ್ಲ, ಕುಂಯ್‌ಗುಡಲೂ ಇಲ್ಲ, ಸತ್ತರೆ ಸಾಯಲಿ ಹತ್ತೊಂಬತ್ತನೇ ದಿನಕ್ಕಾದರು ಹೋರಾಟದ ವೇದಿಕೆ ಬಂದನಲ್ಲ ಅಂತ ಅವನ ಭಾಷಣಕ್ಕೆ ಕಿವಿಯಾನಿಸಿದರೆ ಮತ್ತದೇ ರಾಜಕಾರಣ ಶುರು ಮಾಡಿದರೆ ಜನ ಕ್ಯಾಕರಿಸಿ ಉಗಿಯದೆ ಇನ್ನೇನು ಮಾಡುತ್ತಾರೆ.



ಮೈಸೂರಿನಲ್ಲಿ ಕೆಲ ತಿಂಗಳ ಹಿಂದೆ ಹಿಂದೂ ಸಂಘಟನೆಯ ರಾಜು ಎಂಬ ರೌಡಿಯನ್ನು ವೈಯಕ್ತಿಕ ದ್ವೇಷಕ್ಕೆ ಕೊಲೆ ಮಾಡಲಾಗಿತ್ತು, ಆಗ ಇದೇ ಪ್ರತಾಪು ಗಂಟಲರಿಯುವಂತೆ ಅಬ್ಬರಿಸಿ ಚೆಡ್ಡಿ ಪುಢಾರಿಗಳನ್ನೆಲ್ಲ ಬೀದಿಗಿಳಿಸಿ ರಣಾಂಗಣ ಮಾಡಿಟ್ಟಿದ್ದ. ಆ ಕೊಲೆಗೆ ಧರ್ಮದ ಬಣ್ಣ ಕಟ್ಟಿ, ಸರ್ಕಾರ ಬೇಕು ಎಂತಲೇ ಕೊಲೆಗಾರರನ್ನು ಬಂಧಿಸದೇ ಸುಮ್ಮನಿದೆ ಅಂತೆಲ್ಲಾ ಆರೋ
ಸುರಿಮಳೆಗೈದಿದ್ದ. ಕೊಲೆಯಾದಾತನ ಕುಟುಂಬ
ಸಮುದಾಯದವರಿಂದ, ಸಂಘಟನೆಗಳಿಂದ 20 ಲ
ಹಣ ಸಂಗ್ರಹವಾಗುವಂತೆ ನೋಡಿಕೊಂಡು ಅದ
ಬರ್ನಿಂಗ್ ಇಶ್ಯು ಮಾಡಿಟ್ಟಿದ್ದ. ದುರಂತವೆಂದ
ಪುಢಾರಿಯೊಬ್ಬನ ಹತ್ಯೆಗೆ ಅಷ್ಟೆಲ್ಲ ಕಾಸು ಸಂ
ಪ್ರತಾಪು ಸಾಲುಸಾಲು ರೈತರು ಆತ್ಮಹತ್ಯೆ ಮಾಡಿಕೊ
ಕಿಂಚಿತ್ತು ಮನುಷ್ಯತ್ವವನ್ನೂ ಪ್ರದರ್ಶಿಸಲಿಲ್ಲ. ಕೊ
ಮೈಸೂರಿನ ಶಾಂತಿಯನ್ನೇ ಕದಡಿ, ಸಾಂಸ್ಕೃತಿಕ
ಕೋಮು ಕಳಂಕದ ಮಸಿ ಬಳಿಯುವಷ್ಟು ವಿ
ಹೋಗಿ ತಲುಪಿತ್ತು.

ಅಂಥಾ ಪ್ರತಾಪು ಕಾವೇರಿ ವಿಚಾರದಲ್ಲಿ
ತೋರಿಸಲು ಹತ್ತೊಂಬತ್ತು ದಿನಗಳೇ ಬೇ
ಆಮೇಲಾದರು ಅವ ಪ್ರಾಮಾಣಿಕವಾಗಿ ಹೋ
ಪಾಲ್ಗೊಂಡನಾ? ಉಹ್ಞೂಂ, ಮೋದಿ ಪರ ವ
ವಹಿಸಿ ಬಂದಿದ್ದ ಅಷ್ಟೆ. ಮಂಡ್ಯದ ಮು
ಘಟಿಸುವುದಕ್ಕೂ ಮುನ್ನ ಪ್ರತಾಪನಿಗೆ ಇನ
ಮಂಗಳಾರತಿಯಾಗಿತ್ತು. ಅವತ್ತು ಕಾವೇರಿ ವಿ
ಚರ್ಚೆ ನಡೆಸಲು ಸುದ್ದಿಮಾಧ್ಯಮವೊಂದರಲ್ಲಿ ಕಾ
ನಡೆದಿತ್ತು, ಮೈಸೂರು ಮಾಜಿ ಸಂಸದ ಎಚ್.ವಿಶ್ವ
ಜೊತೆಗೆ ಪ್ರತಾಪು ಪುಟ್ಟನೂ ಕುಕ್ಕರುಬಡಿದಿ
ವಿಷಯದ ಗಾಂಭೀರ್ಯಕ್ಕೆ ತಕ್ಕಂತೆ ಮಾತನ
ವಿಶ್ವನಾಥರು ಸಂವಿಧಾನದ ಕಾಯ್ದೆಯೊಂದರ ಉದ
ಸಹಿತ 'ಪ್ರಧಾನಮಂತ್ರಿಗಳು ಕಾವೇರಿ ವಿ
ಸಂಬಂಧಿಸಿದಂತೆ ಮಧ್ಯೆ ಪ್ರವೇಶ ಮಾಡಬಹುದು
ಮಾತು ತೆಗೆದರು. ಅಸಲಿಗೆ ಅದು ಕೇವಲ ವಿ
ಅಭಿಪ್ರಾಯವಾಗಿರಲಿಲ್ಲ, ಇಡೀ ಕನ್ನಡಿಗರ ಒಕ
ಒತ್ತಾಯವಾಗಿತ್ತು. ಆ ಮಾತಿಗೆ ಕೆಂಡಮಂಡಲನಾದ
"ಪ್ರಧಾನಿ ನರೇಂದ್ರ ಮೋದಿ ಅವರು ಈ ವಿ
ಮಧ್ಯೆ ಪ್ರವೇಶ ಮಾಡಲು ಸಾಧ್ಯವೇ ಇಲ್ಲ, ಮಾಜಿ
ವಿಶ್ವನಾಥ್ ಅವರು ಏನೂ ತಿಳಿಯದೆ ಯಾ
ಒಬಿರಾಯನ ಕಾಲದ ಕಾಯ್ದೆ ಬಗ್ಗೆ ಹೇಳುತ್ತಿದ್ದಾರೆ.
ಅದೇಗೆ ಪದವಿ ಮಾಡಿದರೋ. ಇವರಿಗೆ ಅದ್ಯಾ

ಕಾವೇರಿಕೊಳ್ಳದ ರಾಜೀನಾಮೆ ಹೈಡ್ರಾಮಾಗಳು

ಇತ್ತ ಪ್ರತಾಪು ಮತ್ತವನ ಕೇಸರಿ ಬ್ರಿಗೇಡು ಕರ್ನಾಟಕಕ್ಕೆ ನಂಬಿಕೆದ್ರೋಹ ಎಸಗುತ್ತಿದ್ದರೆ ಅತ್ತ ಮೈಸೂರು ಮಹಾನಗರ ಪಾಲಿಕೆ ಮೇಯರ್ ಎನಿಸಿಕೊಂಡ ಬಿ.ಎಲ್.ಭೈರಪ್ಪನೆಂಬ ಆಸಾಮಿ ಕಾವೇರಿ ಹೋರಾಟ ಹೊತ್ತಿ ಉರಿಯುತ್ತಿದ್ದಾಗ ವಿದೇಶ ಪ್ರವಾಸದಲ್ಲಿದ್ದ. ಜನ ಕ್ಯಾಕರಿಸುವುದು ಗ್ಯಾರಂಟಿಯಾದ ಕೂಡಲೇ ಮೇಯರ್ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆಂದು ಮಾಧ್ಯಮಗಳಿಗೆ ಮೊಬೈಲ್ ಸಂದೇಶ ಕಳುಹಿಸಿದ. ಮಾರನೆಯ ದಿನ ಪತ್ರಿಕೆಗಳ ಮುಖಪುಟದಲ್ಲಿ ಬಿ.ಎಲ್.ಭೈರಪ್ಪನ ಭಾವಚಿತ್ರ ರಾರಾಜಿಸಿತು. ಎರಡು ದಿನ ಮೈಸೂರಿನ ಜನರ ಬಾಯಲ್ಲಿ ಭೈರಪ್ಪನ ಹೆಸರು ಕುಣಿದಾಡಿತು.


ಆದರೆ ದಿನ ಕಳೆದರು ಆತ ರಾಜೀನಾಮೆ ಕೊಡುವ ಮಾತನ್ನೇ ಎತ್ತಲಿಲ್ಲ. ಅವನ ಮೊಬೈಲ್ ಸಂದೇಶ ನೋಡಿ ನಂಬಿ ಸಿಕ್ಕಾಪಟ್ಟೆ ಹೈಪ್ ಕೊಟ್ಟಿದ್ದ ಪತ್ರಿಕೆ, ನ್ಯೂಸ್ ಚಾನೆಲ್‌ನವರೇ "ಏನ್ ಸ್ವಾಮಿ ಯಾವಾಗ ಮೇಯರ್ ಸ್ಥಾನಕ್ಕೆ ರಾಜೀನಾಮೆ ಕೊಡೋದು?" ಅಂತ ಕೇಳಿದರೆ "ನಾ ಆ ರೀತಿ ಹೇಳಿರಲೇ ಇಲ್ಲ, ಯಾರೋ ನನ್ನ ಮಾತನ್ನು ತಿರುಚಿ ಬರೆದಿದ್ದಾರೆ. ನಾನು ಹೇಳಿದ್ದೇ ಬೇರೆ ತರ" ಅಂತ ಮಾಧ್ಯಮದವರನ್ನೇ ಬಕರಾ ಮಾಡಿದ. ಇದು ಮಂಡ್ಯದ ಸಂಸದ ಪುಟ್ಟರಾಜುವಿನ ರಾಜೀನಾಮೆ ಹೈಡ್ರಾಮಕ್ಕಿಂತ ಭಿನ್ನವಾದುದೇನಲ್ಲ.


ಸರ್ವೋಚ್ಚ ನ್ಯಾಯಾಲಯದ ಆದೇಶ ಹೊರ ಬಿದ್ದಕೂಡಲೇ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂಬುದಾಗಿ ಘೋಷಿಸಿ ರಾಜೀನಾಮೆ ಪತ್ರವನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದ ಪುಟ್ಟರಾಜು ಆಮೇಲೆ ಯಾರ್‍ಯಾರೊ ಒತ್ತಡ ತಂದರು ಅನ್ನೋ ನೆಪವಿಟ್ಟುಕೊಂಡು ವಾಪಾಸ್ ಪಡೆದಿದ್ದ. ಒಂದಷ್ಟು ದಿನ ಕಾವೇರಿ ಕೊಳ್ಳದ ಜನರ ಪಾಲಿಗೆ ಹೀರೋ ಅಂತೂ ಆಗಿದ್ದರು. ಸಂಸದ ಸ್ಥಾನದಲ್ಲಿರುವವರು ರಾಜೀನಾಮೆ ಕೊಡುವುದಕ್ಕೂ ಒಂದು ಪ್ರಕ್ರಿಯೆ ಅಂತ ಇದೆ. ಅದರ ಪ್ರಕಾರ ಸಂಸದನಾದವನು ಲೋಕಸಭೆಯ ಸ್ಪೀಕರ್‌ಗೆ ಸಲ್ಲಿಸಿದ ರಾಜೀನಾಮೆ ಮಾನ್ಯವಾಗುತ್ತದೆಯೇ ಹೊರತು ಬೇರೆ ಯಾರ್‍ಯಾರಿಗೋ ಕೊಟ್ಟ ರಾಜೀನಾಮೆ ಲೆಕ್ಕಕ್ಕೆ ಬರುವುದಿಲ್ಲ. ಅದೆಲ್ಲ ಗೊತ್ತಿದ್ದೆ ಪುಟ್ಟರಾಜು ಜಿಲ್ಲಾಧಿಕಾರಿಗೆ ರಾಜೀನಾಮೆ ನೀಡಿ ಜನರ ಕಣ್ಣೊರೆಸುವ ತಂತ್ರ ಮಾಡಿದ್ದು. ದೆಹಲಿಗೆ ರಾಜೀನಾಮೆ ಸಲ್ಲಿಸಲು ಹೋಗಿ ಲೋಕಸಭಾಧ್ಯಕ್ಷರು ಸಿಗದೆ ವಾಪಸ್ಸು ಬಂದೆ ಅಂತ ಪುಟ್ಟರಾಜು ಸಮಜಾಯಿಷಿಯನ್ನೇನೋ ಕೊಡುತ್ತಾರೆ. ತನ್ನ ಮಂಡ್ಯದ ಜನರಿಗೋಸ್ಕರ ದಿಲ್ಲಿವರೆಗೆ ಹೋಗಿ ಸ್ಪೀಕರ್ ಸಿಗುವವರೆಗೆ ಕಾಯುವ ವ್ಯವಧಾನ ಪುಟ್ಟರಾಜಣ್ಣನಿಗೆ ಇರಲಿಲ್ಲವೇ? ಜನರ ವಿಶ್ವಾಸ, ನಂಬಿಕೆಗಳ ಮೇಲೆ ಬರೆ ಎಳೆಯಲು ಇಂಥಾ ಹೊಲಸು 'ಪೊಲಿಟ್ರಿಕ್ಸ್'ಗಳು ರಾಜಕಾರಣಿಗಳಿಗೆ ಬೇಕಾ? ಪುಟ್ಟರಾಜು ಮಾತ್ರವಲ್ಲ ರೈತ ನಾಯಕ, ಶಾಸಕ ಕೆ.ಎಸ್.ಪುಟ್ಟಣ್ಣಯ್ಯ, ಡಿ.ಸಿ.ತಮ್ಮಣ್ಣ, ರಮೇಶ್ ಬಾಬು ಬಂಡಿಸಿದ್ದೇಗೌಡರಂತವರೂ ರಾಜೀನಾಮೆ ನೀಡುವುದಾಗಿ ಘೋಷಣೆ ಮಾಡಿದ್ದರು. ಆದರೆ ಒಂದೇಒಂದು ರಾಜೀನಾಮೆಯೂ ಇದುವರೆಗೆ ಸಲ್ಲಿಕೆಯಾಗಿಲ್ಲ. ಜನಸಾಮಾನ್ಯರ ಉಳಿವಿನ ಹೋರಾಟದಲ್ಲೂ ಓಟ್‌ಬ್ಯಾಂಕ್ ರಾಜಕಾರಣ ಹುಡುಕುವ ಇಂತವರ ನಡವಳಿಕೆಗಳಿಂದ ಜನ ರಾಜಕಾರಣಿಗಳ ಮೇಲಿನ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದಾರೆ.


ಕುಷ್ಟಗಿ ಪ್ರಗತಿಗೆ ಶಾಸಕನೇ ವಿಲನ್!

ಹೈದ್ರಾಬಾದ್ ಕರ್ನಾಟಕ ಭಾಗದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿರುವ ಕುಷ್ಟಗಿಯ ಬವಣೆಗಳು ಒಂದೆರಡಲ್ಲ, ಹತ್ತು ಹಲವು ಸಮಸ್ಯೆಗಳು ತಾಂಡವವಾಡುತ್ತಿವೆ. ಆದರೆ ಇಲ್ಲಿನ ಶಾಸಕ ದೊಡ್ಡನಗೌಡನ ವರ್ತನೆಗಳು ಮಾತ್ರ ಇದಕ್ಕೂ ತನಗೂ ಸಂಬಂಧವೇ ಇಲ್ಲ ಎನ್ನುವಂತಿದೆ. ಕುಷ್ಟಗಿ ತಾಲೂಕಿನ ರಾಜಕೀಯ ಇತಿಹಾಸ ಕೆದಕಿದರೆ ಕೊರಡಕೆರಿಯ ಇದೇ ದೊಡ್ಡನಗೌಡರ ಮನೆತನ ಭರ್ತಿ ನಾಲ್ಕುಬಾರಿ ಶಾಸಕಗಿರಿ ದಕ್ಕಿಸಿಕೊಂಡಿದ್ದು ಕಂಡುಬರುತ್ತೆ. ಹಾಗಾಗಿ ಕುಷ್ಟಗಿ ಹಿಂದುಳಿಯುವಲ್ಲಿ ಮಿಕ್ಕೆಲ್ಲರಿಗಿಂತ ಹೆಚ್ಚಿನ ಅಪವಾದ ಈಗಿನ ದೊಡ್ಡನಗೌಡನಿಗೇ ಸುತ್ತಿಕೊಳ್ಳಲಿದೆ.


ಹಾಲಿ ಶಾಸಕ ದೊಡ್ಡನಗೌಡರ ತಂದೆ ಹನುಮಗೌಡ ಪಾಟೀಲ್ ತಮ್ಮ ಮೂವತ್ತು ವರ್ಷಗಳ ರಾಜಕಾರಣದಲ್ಲಿ 1983 ಮತ್ತು 1989ರಲ್ಲಿ ಎರಡು ಬಾರಿ ಕುಷ್ಟಗಿ ಶಾಸಕರಾಗಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. ಹನುಮಗೌಡ್ರು ತಮ್ಮ ಸುದೀರ್ಘ ರಾಜಕೀಯದಲ್ಲಿ ಕೇವಲ ಜಾತಿರಾಜಕಾರಣವನ್ನೆ ಉಸಿರಾಡಿಕೊಂಡು ಬಂದರೆ ವಿನಾ ನೆನಪಿಡುವಂತ ಅಭಿವೃದ್ಧಿ ಕೆಲಸಗಳಿಗೆ ಮುಂದಾಗಲೇ ಇಲ್ಲ. ಇದರ ಫಲವೆಂಬಂತೆ ಹನುಮಗೌಡ್ರು 1994ರಲ್ಲಿ ಅಂದಿನ ಜನತಾದಳದ ಪ್ರಬಲ ನಾಯಕನಾಗಿದ್ದ ಕೆ.ಶರಣಪ್ಪ ವಕೀಲರ ಕೈಯಲ್ಲಿ ಅನಾಮತ್ತು 17 ಸಾವಿರ ಮತಗಳ ಹಿನಾಯ ಸೋಲುಕಂಡರು. 1996ರಲ್ಲಿ ಹನುಮಗೌಡರು ವಿಧಿವಶರಾದಾಗ ಈಗಿನ ಶಾಸಕ ದೊಡ್ಡನಗೌಡನಿಗೆ ಇನ್ನು 21ರ ಹರೆಯ. 1999ರ ಚುನಾವಣೆಯಲ್ಲಿ ದೊಡ್ಡನಗೌಡ ಕೈ ಟಿಕೆಟ್ ಕೇಳಿದರೂ ಕಾಂಗ್ರೆಸ್ ಮುಖಂಡ ಗುಲಾಂ ನಬಿ ಆಜಾದ್‌ರು ಮುಸ್ಲಿಂ ಸಮಾಜದ ಹಸನ್‌ಸಾಬ ದೋಟಿಹಾಲಗೆ ಟಿಕೆಟ್ ದಯಪಾಲಿಸಿದ್ದರು. ಆ ವರ್ಷ ಹಸನ್‌ಸಾಬ ದೋಟಿಹಾಲ ಹಾಲಿ ಶಾಸಕನಾಗಿದ್ದ ಕೆ. ಶರಣಪ್ಪನ ವಿರುದ್ಧ ವಿಜಯ ಸಾಧಿಸಿದ್ದರು.


ಶರಣಪ್ಪ




ಅಮರೇಗೌಡ

ಈ ನಡುವೆ 2000ರಲ್ಲಿ ದೊಡ್ಡನಗೌಡ ಕಾಂಗ್ರೆಸ್ ಪಾರ್ಟಿಯಿಂದ ಜಿ.ಪಂಗೆ ಸ್ಪರ್ಧಿಸಿ ಗೆಲ್ಲುವ ಮೂಲಕ ತಮ್ಮ ರಾಜಕಾರಣದ ಹಾದಿಗೆ ನಾಂದಿ ಹಾಡಿದ್ದರು. 2004ರ ವಿಧಾನಸಭೆ ಚುನಾವಣೆ ವೇಳೆಗೆ ದೊಡ್ಡನಗೌಡ ಕಾಂಗ್ರೆಸ್ ಟಿಕೆಟ್ ಕೇಳಿದಾಗ ಮತ್ತೆ ಕಾಂಗ್ರೆಸ್ ಹೈಕಮಾಂಡ್ ಆತನ ಅಹವಾಲಿಗೆ ಕ್ಯಾರೆ ಎನ್ನದೆ ಹಾಲಿ ಶಾಸಕ ಹಸನ್‌ಸಾಬಗೇ ಟಿಕೆಟು ಕೊಟ್ಟಿತ್ತು. ಆಗ ದೊಡ್ಡನಗೌಡ ತಮ್ಮ ಕುಟುಂಬದ ಮೂರು ದಶಕಗಳ ಕಾಂಗ್ರೆಸ್ ಸಂಬಂಧಕ್ಕೆ ಎಳ್ಳುನೀರು ಬಿಟ್ಟು, ಬಿಜೆಪಿಗೆ ನೆಗೆದಿದ್ದ. ಆ ಚುನಾವಣೆಯಲ್ಲಿ ಬಿಜೆಪಿಯ ದೊಡ್ಡನಗೌಡನಿಗೆ ಎದುರಾಗಿ ಕಾಂಗ್ರೆಸ್ ಹಸನ್‌ಸಾಬ್‌ರನ್ನು, ಜೆಡಿಎಸ್ ಮಾಜಿ ಶಾಸಕ ಕೆ.ಶರಣಪ್ಪನನ್ನು ಕಣಕ್ಕಿಳಿಸಿದ್ದವು. ಕುಷ್ಟಗಿ ತಾಲೂಕಿನಲ್ಲಿ ದೊಡ್ಡನಗೌಡ ಪ್ರತಿನಿಧಿಸುವ ಕುರುಬ ಸಮಾಜದ ಮತದಾರರ ಸಂಖ್ಯೆ ಭರ್ತಿ 40 ಸಾವಿರಕ್ಕೂ ಜಾಸ್ತಿ ಇರುವುದರಿಂದ ಮತ್ತು ತಂದೆ ಹನುಮಗೌಡ್ರ ಸಿಂಪಥಿಯೂ ಗಿಟ್ಟಿದ್ದರಿಂದ ದೊಡ್ಡನಗೌಡ


ದೊಡ್ಡಣ್ಣ ಗೌ

ಅನಾಯಾಸವಾಗಿ ಗೆದ್ದು ಬಂದಿದ್ದ. ಯಾವಾಗ ಕ
34 ವಯಸ್ಸಿಗೇ ಶಾಸಕನಾಗಿ ಆಯ್ಕೆಯಾದನೊ
ದೊಡ್ಡನಗೌಡನಿಗೆ ಭೂಮಿಯ ಮೇಲೆ ಕಾಲೇ
ನಿಲ್ಲದಂತಾಗಿತ್ತು.

ತಂದೆಯಂತೆ ಜಾತಿ ಕಾರಣಕ್ಕೆ ಸೀಮಿತಗೊ
ಈತನ ಸುತ್ತ ಕೇವಲ ಕುರುಬ ಸಮುದಾಯವ
ಮುತ್ತಿಕೊಂಡಿದ್ದರು. ಅನುಭವ ಮತ್ತು ದೂರದ
ಎರಡೂ ಇಲ್ಲದ ದೊಡ್ಡನಗೌಡ ಶಾಸಕಗಿರಿಯನ
ಹುಡುಗಾಟಿಕೆಯಂತೆ ಕಳೆದ. ಹಾಗಾಗಿಯೇ 20
ಚುನಾವಣೆಯ ವೇಳೆಗೆ ರಾಜ್ಯಾದ್ಯಂತ ಬಿಜೆಪಿ ಪ
ಯಡ್ಡಿ ಕೇಂದ್ರಿತ ಸಿಂಪಥಿಯ ಕಪಟ ಅಲೆಯೊ



ಪುಟ್ಟರಾಜು

...ವಿ ನೀಡಿತೋ" ಅಂತೆಲ್ಲ ರೊಚ್ಚೆ ಹಿಡಿದ ಬಾಲಕನಂತೆ ...ರಾಡಲು ಶುರು ಮಾಡಿದ. ಜ್ವಲಂತ ಸಮಸ್ಯೆಗೆ ದಿಕ್ಕು ...ಣಿಸಬೇಕಿದ್ದ ಚರ್ಚೆಯ ಹಾದಿಯನ್ನು ವೈಯಕ್ತಿಕ ...ದನೆಗೆ ಇಳಿಸಿ ಹಾಳು ಮಾಡಿದ್ದ. ಆಗಲೂ ಅವನು ...ೋದಿ ಪರ ವಕಾಲತ್ತು ವಹಿಸಿದನೇ ಹೊರತು ರಾಜ್ಯದ ...ವನದಿ, ಜನಕೋಟಿಯ ಬಗ್ಗೆ ಕಿಂಚಿತ್ತೂ ಕಾಳಜಿ ...ೀರಲಿಲ್ಲ. ಅಷ್ಟಾದರೂ ವಿಶ್ವನಾಥ್‌ರು ಮುತ್ಸದ್ದಿತನ ...ರ್ಶಿಸಿ "ನನ್ನ ಪದವಿ, ಪಠ್ಯಕ್ರಮದ ಬಗ್ಗೆ ಬಗ್ಗೆ ಇನ್ನೊಮ್ಮೆ ...ತನಾಡೋಣ. ಈಗ ಕಾವೇರಿ ವಿವಾದದ ಬಗ್ಗೆ ...ತನಾಡೋಣ" ಅಂತ ಶಾಂತವಾಗಿ ಹೇಳುವ ಮೂಲಕ ...ಾಪನ ಸಣ್ಣತನಕ್ಕೆ ಸರಿಯಾಗಿಯೇ ಮಂಗಳಾರತಿ ಎತ್ತಿದ್ದರು.

...ಫುತಾಪು ಮತ್ತವನ ಕೇಸರಿ ಬತಾಪು ಮಾತೆತ್ತಿದರೆ ... ವಿಚಾರದಲ್ಲಿ ಪ್ರಧಾನಿ ಮಧ್ಯ ಪ್ರವೇಶ ಮಾಡಲು ...ಧ್ಯವೇ ಇಲ್ಲ ಅಂತ ಗಂಟಲು ಹರಿದುಕೊಳ್ಳುತ್ತಿದ್ದಾರೆ. ...ರೆ ಮೊನ್ನೆ ಕರ್ನಾಟಕದ ಅರ್ಜಿ ವಿಚಾರಣೆ ನಡೆಸಿದ ...: ಸುಪ್ರೀಂ ಕೋರ್ಟೇ ಈ ವಿಚಾರದಲ್ಲಿ ಮಧ್ಯಸ್ಥಿಕೆ ...ಸುವಂತೆ ಕೇಂದ್ರಕ್ಕೆ ತಾಕೀತು ಮಾಡಿದೆ. ಅವರೆಲ್ಲ ...ಗ ಏನು ಹೇಳುತ್ತಾರೆ. ಅಷ್ಟೇ ಯಾಕೆ ಈ ಹಿಂದೆ ...ಾನಿಯಾಗಿದ್ದ ಇಂದಿರ ಗಾಂಧಿ, ಪಿ.ವಿ.ನರಸಿಂಹ ರಾವ್‌ರು ... ನೀರು ಹಂಚಿಕೆ ವಿವಾದದಲ್ಲಿ ಮಧ್ಯೆ ಪ್ರವೇಶ ಮಾಡಿದ ...ಹಾಸ ಚೆಡ್ಡಿಗಳಿಗೆ ತಿಳಿದಿಲ್ಲವೇ?

... ಕರ್ನಾಟಕದ ಜನ ವಿಶ್ವಾಸವಿಟ್ಟು ಬರೋಬ್ಬರಿ 17 ...ದಿ ಬಿಜೆಪಿ ಸಂಸದರನ್ನು ಆಯ್ಕೆ ಮಾಡಿದ್ದಾರೆ. ಅದರಲ್ಲಿ ...ವರು ಕೇಂದ್ರ ಮಂತ್ರಿಗಳು. ಇಷ್ಟಿದ್ದಾಗ್ಯೂ ಇವರು ...ಮ್ಮೆಯಾದರು "ಪ್ರಧಾನಿ ನರೇಂದ್ರ ಮೋದಿಯವರೇ ...ಗೆ ಕರ್ನಾಟಕದ ಜನ ಮತ ಹಾಕಿ ಗೆಲ್ಲಿಸಿದ್ದಾರೆ. ...ರಿಗೆ ನ್ಯಾಯ ದೊರಕಿಸಿಕೊಡಬೇಕಾಗಿರುವುದು ನಮ್ಮ ...ವ್ಯ. ದಯವಿಟ್ಟು ನೀವು ಕಾವೇರಿ ವಿವಾದದಲ್ಲಿ ರಾಜ್ಯನಿಷ್ಠೆ ...ಚಾರವನ್ನಿಟ್ಟುಕೊಂಡು ಜಯಲಲಿತಾರ ತಮಿಳುನಾಡ ...ೇ ನೋಡದೆ ನಮ್ಮ ಕರ್ನಾಟಕದತ್ತಲೂ ನ್ಯಾಯಯುತ ... ಹಾಯಿಸಿ, ಮಧ್ಯಪ್ರವೇಶ ಮಾಡಿ ಸಮಸ್ಯೆ ಬಗೆಹರಿಸಿ" ...ತ ಖಡಕ್ಕಾಗಿ ಕೇಳಿದ್ದಾರಾ? ಮೋದಿಯ ಎದುರು ...ಬಗ್ಗಿಸಿ, ಗಂಟಲು ಸತ್ತವರಂತೆ ಜೀ ಹುಜೂರ್ ...ದುಬರುವ ಈ ರಣಹೇಡಿಗಳು ಅದೇಗೆ ತಾನೆ ...ೋದಿಯನ್ನು ಹೀಗೆಲ್ಲ ತರಾಟೆ ತೆಗೆದುಕೊಳ್ಳಲು ಸಾಧ್ಯ.

■ ಶರ

ಮೋದಿಯಿಂದ ದೇಸಕ್ಕಪಾಯದೆ ಸಾ!

ಥೂತ್ತೇರಿ

\- ಯಾತ್ರೂ

ನಮ್ಮ ಮಾತಿನ ಮಲ್ಲ ಮೋದಿಯ ಬಗ್ಗೆ ಇದುವರೆಗೂ ವಾಟಿಸ್ಸೆಯನ್ನು ಮಾತನಾಡಿಸಿಲ್ಲ ಎಂಬುದು ಅರಿವಾಗಿ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: ಟ್ರರ್... ಟ್ರರ್...

"ಹಲೋ? ನಮಸ್ಕಾರ್ ಸಾರ್."

"ಏನ್ಮಾಡ್ತಾಯಿದ್ದಿ ವಾಟಿಸ್ಸೆ?"

"ಏನೂ ಮಾಡ್ತಾಯಿಲ್ಲ ಸಾ."

"ಯಾಕೆ?"

"ಕುಟ್ಬನಾ ಅಂದ್ರೆ ಬತ್ತಿಲ್ಲ. ಬೀಸನ ಅಂದ್ರೆ ರಾಗಿಲ್ಲ ಅನ್ನಂಗಾಗ್ಯದ ಸಾ ಈ ವರ್ಸ."

"ಅಂಗಾದ್ರೆ ಬೇಸಾಯನೆ ಮಾಡಿಲ್ವ?"

"ಮಾಡಿದ್ರು ರಾಗಿ ಪೈರು ಒಂದು ಗೇಣುದ್ದ ಬತ್ತು. ಆಗೋದ ಮಳೆ ಇನ್ನು ಬಂದಿಲ್ಲ. ಅಂಗಾಗಿ ಹೊಲಗಳ್ಯಲ್ಲ ಒಂದು ಬೆಂಕಿಕಡ್ಡಿ ಮ್ಯಾಲೆ ನಿಂತವೆ."

"ಅಂಗಾದ್ರೆ ಹೊಲಗಳೆಲ್ಲ ಬತ್ಕೊದ್ಹೊ ಅನ್ನು."

"ಅಂಗನ್ನದಕ್ಕಿಂತ ಉರುದೋದ್ಹೊ ಅನ್ನಬವ್ದುದು."

"ಮತ್ಯಂಗೆ ಜೀವನ?"

"ಜನಗಳ್ಯಾಕೊ ಹೆದರತಾಯಿಲ್ಲ ಸಾ."

"ಹೌದೆ?"

"ಊಸಾ. ಸಿದ್ದರಾಮಯ್ಯನ ಅಕ್ಕಿ ನಚ್ಚಿಗಂಡೋರು ಅಷ್ಟು ಹೆದರತಾಯಿಲ್ಲ. ಉಳದೊರ ಕತೆಯಂಗೊ ಗೊತ್ತಿಲ್ಲ."

"ಇರ್ಲಿ, ದೇವರವ್ವುನೆ."

"ಇದ್ರೆ ಅವುನಿಗೊಂದಿಷ್ಟು ಕಾವೇರಿ ಪ್ರಾಬ್ಲಂ ಹೇಳಿ ಸಾ."

"ಕಾವೇರಿ ಪ್ರಾಬ್ಲಮ್ಮು ದೇವರಿಗೇಳು ಅಂತಿಯಾ?"

"ಮತ್ತಿನ್ನೇನು ಸಾರ್. ಆ ಮೋದಿ ಅನ್ನೋ ಮನ್ಸ ಇವತ್ತಿಗೂ ಮಾತಾಡಿಲ್ಲವಲ್ಲಾ, ಇವುನ್ಯಂಗೆ ಪ್ರಧಾನಮಂತ್ರಿ ಅನ್ನನ ಸಾ?"

"ನೀನನ್ನದೇಯಿದ್ರು ಆಗಿದಾರಲ್ಲ."

"ಅವುನ್ಯಂಗಾಗ್ಯವುನೆ ಅಂದ್ರೆ ಸಾ, ಊರಲ್ಲಿ ವಳ್ಳೆ ಜನಗಳ್ಯಲ್ಲ ಕಾಲವಾದಾಗ ಸಣ್ಣಪುಟ್ಟ ರೌಡಿಗಳೇ ಊರಾಳ್ತರೆ. ಅಂಗಿವುನು."

"ಮೋದಿಯವರನ್ನ ರೌಡಿ ಅಂತಿಯಾ?"

"ರೌಡಿಯಲ್ಲ, ರೌಡಿಗಳ ಲೀಡ್ರು, ಸಾರ್. ಅವುನು ಗುಜರಾತಲ್ಲಿ ಮುಂದೆ ನಿಂತುಗೊಂಡು ಸಾಬರಿಗ್ಯಲ್ಲ ವಡಿಸಿದನಂತೆ. ಇವುನೆ ಸರಿ ನಮ್ಮ ಕಾಪಾಡಕ್ಕೆ ಅಂತ ಬಿಜೆಪಿಗಳು ಅದ್ವಾನಿ ಅರಗಾನಿ ಇವುನ್ನ ಲೀಡ್ರು ಮಾಡಿಕಂಡವೆ. ಆ ಅದ್ವಾನಿಗೆ ಸರಿಯಾದ್ದಾಯ್ತು."

"ಅದ್ವಾನಿಗೆ ಸರಿಯಾದ್ದಾಯ್ತೆ!"

"ಊಸಾ. ಅವುನು ಮಾಡಿದ ರಾಜಕಾರಣ ಫಲವ ಈಗ ಉಣ್ತಾ ಅವ್ನೆ. ಕ್ಯಟ್ಟೋರು ಸಾಯದೆ ಬದುಕಿದ್ರೆ ಯಲ್ಲಾನು ಇಲ್ಲೇ ಅನುಭವ್ರುಸಬೇಕಂತೆ. ಅಂಗಾಗ್ಯದೆ ಅದ್ವಾನಿ ಕತೆ."

"ಅವುನೇನು ಕೆಟ್ಟ ಕೆಲಸ ಮಾಡಿದ?"

"ಇದೇನ್ಸಾ? ಪತ್ರಕರ್ತನಂಗೆ ಕೇಳ್ತಿರಲ್ಲ? ಎಲ್ಲಿದ್ರಿ ನೀವು?"

"ಇಲ್ಲೆ ಇದ್ದೆ. ಅದ್ವಾನಿ ಜಿನ್ನನ್ನ ಸೆಕ್ಯುಲರ್ ಮ್ಯಾನ್ ಅಂದಿದ್ಕೆ ಮೆಚ್ಚಿಗಂಡಿದ್ದೆ."

"ಯಾರ್ನ?"

"ಅದ್ವಾನಿನ."

"ಅದೇನೊ ಸರಿ. ಜಿನ್ನ ವಿಶ್ವ ಹಿಂದೂಗಳಿಗೆ ಹೆದ್ರಿಕಂಡು ಪಾಕೀಸ್ತಾನ ಮಾಡಿದ. ಅಂದ್ರೆ ಆದ್ಕೆ ಬಿಜೆಪಿಗಳೇ ಹೊಣೆಗಾರ್ರು. ಅದ್ಕಿಂತ ಬಿಜೆಪಿಗಳು ಯಾರನ್ನ ದ್ವೇಷ ಮಾಡ್ತರೆ, ಅವುರ್ಯಲ್ಲ ವಳ್ಳೆ ಜನಾಗಿರತರೆ ಸಾ."



"ಉದಾಹರಣೆ?"

"ಒಂದು ಸಾವುರ ಉದಾಹರಣೆ ಕೊಡಬಲ್ಲೆ, ಆದ್ರೆ ಅದ್ವಾನಿ ವಿಷಯದಲ್ಲಿ ಅವುನಿಗಾಗಿರದು ಸರಿ."

"ಯಂಗೇ?"

"ನೋಡಿ ಸಾ, ಇವತ್ತಿನ ಮೋದಿ ತಂದೋನು ಇದೇ ಅದ್ವಾನಿ."

"ಹಾಗಂತೀಯಾ?"

"ಹಂಡ್ರೆಡ್ ಪರಸೆಂಟು ಸಾ. ಮಂಡಲ್ ವರದಿ ವಿರೋಧಿಸಿ ರಥಯಾತ್ರೆ ವಂಟ ಈ ಅದ್ವಾನಿ. ಆಗ್ಲೆ ಇವುನು ದೇಶನೆ ಅದ್ವಾನ ಮಾಡಿದ್ದು. ರಾಮನ್ನ ತಂದು ರಸ್ತೆ ಮ್ಯಾಲಾಕಿದ. ರಾಂಮಂದ್ರ ಕಟ್ಟಕ್ಕೆ ಇಟಗೆ ಮ್ಯರವಣಿಗೆ ಮಾಡಿದ. ರಾಮನ ಪಾದುಕೆ ಮ್ಯರವಣಿಗೆ, ಜ್ಯೋತಿ ಮೆರವಣಿಗೆ ಮಾಡೀ ಇಡೀ ದೇಶನೆ ಕಿಷ್ಕಿಂಧೆ ಮಾಡಿದ. ಅದರ ಫಲ ಅವುನಿಗೆ ಸಿಗಲಿಲ್ಲ, ಮೋದಿಗೆ ಸಿಕ್ತು."

"ನೀನೇಳದು ನಿಜವೆಯ."

"ಅದ್ವಾನಿ ರಾಜಕಾರಣದ ಫಲಿತಾಂಶ ಏನದೆ ಅದೇ ಮೋದಿಯಲವ ಸಾ?"

"ಮೋದಿ ಬಗ್ಗೆ ಕೇಳದ್ಕೆ ಮರತೆ."

"ಅವುನ್ಯಾವತ್ತೂ ನನಿಗೆ ಇಷ್ಟ ಆಗಲಿಲ್ಲ ಸಾರ್, ಯಾಕಂದ್ರೆ ನಮ್ಮೂರ ನ್ಯಾಯದಲ್ಲಿ ಕೆಲವುರು ಮಾತಾಡತಿರಲಿಲ್ಲ, ಆದ್ರೆ ಮಾಡೊ ಕ್ಯಲಸನ್ಯಲ್ಲ ಮಾಡೋರು. ಸೂಕ್ಷ್ಮವಾಗಿ ನೋಡಿದ್ರೆ ಅವುರಿಗೆ ಮಾತಾಡಬ್ಯಾಡ ಅಂತ ಹೇಳೋರಾರೊ ಇದ್ರು."

"ಮೋದಿಗೂ ಅಂಥೋರವುರೆ ಅಂತೀಯಾ?"

"ಇಲ್ದಿದ್ರೆ ಮಾತಾಡಬೇಕಾಗಿತ್ತಲ್ಲ ಸಾ. ಇವುನೂ ಮೈಕ್ ಸಿಕ್ಕಿದ್ರು ಸಾಕು ಯಡಿಯೂರಪ್ಪನಂಗೆ ಮುಕಳಿಕೆ ಹರಕತ್ತನೆ. ಕಾವೇರಿ ವಿಷಯದಲ್ಲಿ ಬಾಯಿಗೇನಿಟಗಂಡವುನೆ ಅಂತ."

"ಉಮಾ ಭಾರತಿ ಜೊತೆ ಮಾತಾಡಿ ಅಂದವುನಂತೆ."

"ಅವುಳು ಗೊತ್ತಿಲ್ಲವ ಸಾ ನನಿಗೆ. ಹುಬ್ಬಳ್ಳಿಗೆ ಬಂದು ಹುಚ್ಚಿ ತರ ಮಾತಾಡಿ ಕೇಸಾಕಿಸಿಗಂಡಿದ್ಲು. ಸಾಬರ ಕಂಡ್ರೆ ಮಾರಮ್ಮ ಮೈಮ್ಯಾಲೆ ಬಂದಂಗಾಡ್ತಾಳೆ. ಅಂಥೋಳತ್ರ ಮಾತಾಡಿ ಅನ್ನದಾದ್ರೆ ಇವುನ್ಯಾಕಿರದೂ?"

"ಕಾಶ್ಮೀರ, ಪಾಕೀಸ್ತಾನದ ವಿಷಯುದಲ್ಲಿ ಬಿಜಿ ಇರಬವ್ದುದು."

"ಇರಬವುದು ಬುಡಿ, ಜಗಳದಿಂದ ಅಧಿಕಾರಕ್ಕೆ ಬಂದೋರು ಜಗಳ ಆಡ್ತನೆ ಇರಬೇಕಾಯ್ತದೆ. ಅದು ಬುಟ್ಟು ಕಾವೇರಿ ವಿಷಯ ತಣ್ಣಗೆ ಮಾಡಿದ್ರೆ ದೇಶ ಆಳದ್ಯಂಗೆ."

"ಕೋರ್ಟು ವಿಷಯಕ್ಕೆ ತಲೆ ಹಾಕಬಾರದು ಅಂತ ಇರಬವುದು."

"ಸಾರ್, ಬಿಜೆಪಿಗಳು ಯಾವತ್ತೂ ಕೋರ್ಟಿಗೆ ಕೇರ್ ಮಾಡದಿಲ್ಲ. ಪರೆಗ್‌ಜಾಂಪಲ್ ಇಲ್ಲೆ ಲೋಕಲ್ಲಾಗಿ ನಮ್ಮ ರಾಘವೇಶ್ವರ ಸ್ವಾಮೀನೆ ನೋಡಿ. ಅಂತದ್ರಲ್ಲಿ ಮೋದಿ ಕೋರ್ಟಿಗೆ ಗೌರವ ಕೊಡ್ತನೆ ಅಂತಿರಲ್ಲ ಸಾ. ಕೋರ್ಟು ಇರದು ಜನಗಳಿಗೋಸ್ಕರ. ನಾವು ಕೋರ್ಟಿಗಾಗಿ ಬದುಕ್ತಾಯಿಲ್ಲ, ನಾವು ಮಾಡಿದ್ದೆ ಅಲವೆ ಕೋರ್ಟು. ಜಡಜು ಏನು ಮ್ಯಾಲಿಂದ ಬಂದೋನಲ್ಲ, ಇಲ್ಲೆ ನಮ್ಮ ಹಡೆನಳ್ಳಿ ಮುದ್ದೇಗೌಡನೂ ಜಡಜಾಗ್ಯವುನೆ, ನಿನ್ನ ವ್ಯಾವಾರ ಕೇಸಿದ್ರೆ ತಗಂಬಾ ನಿನ್ನ ಪರವಾಗಿ ಇತ್ಯರ್ಥ ಮಾಡಿಕೊಡ್ತೀನಿ ಅಂದುಬುಟ್ಟೋದ. ಆಗ ನನಿಗೆ ಇಡೀ ಇಂಡಿಯಾ ದೇಸದ ಕೋರ್ಟ್ಯಂಗದೆ ಅಂತ ಗೊತ್ತಾಯ್ತು ಸಾ. ಇಂಗೂ ಇರತವೆ, ಅಂಗೂ ಇರತವೆ, ಅಂಗಿರದ್ರಿಂದ್ಲೆ ಒಂದೀಟು ದೇಸ ಉಳದಿರದು. ಆದ್ರೆ ಈ ಮೋದಿ ಮಾತ್ರ ಏನಾರ ಮಾಡೇ ಹೋಯ್ತನೆ."

"ಅಂಗನ್ನುಸ್ತಾಯಿದೆಯಾ?"

"ನೋಡಿ ಸಾ, ಇವನು ಗುಜರಾತಿನ ಮುಖ್ಯಮಂತ್ರಿ. ನಮ್ಮ ಎಡ್ಡೂರಪ್ಪನಂಥೋನು. ರಿಯಲಿ ಸಾರ್ ನಮ್ಮ ಎಡ್ಡೂರಪ್ಪ ಇವುನಿಗಿಂತ ನೂರು ಪಾಲುತ್ತಮ. ಆದ್ರೆ ಈ ಮೋದಿ ಇವತ್ತಿಗೂ ಗುಜರಾತಿನ ಮುಖ್ಯಮಂತ್ರಿಯಾಗಿ ನಡಕತ್ತನೆ ವರತೂ, ಪ್ರಧಾನಿ ಯಂಗೆ ಕಾಣದಿಲ್ಲ. ಪ್ರಧಾನಿಯಂಗೆ ಕಾಣಬೇಕಾದ್ರೇ ತೂಕವಾಗಿ ಕಡಿಮೆ ಮಾತಾಡಬೇಕು. ದೇಸದ ಜನ್ಯಲ್ಲ ಒಂದೇ ಅನ್ನಬೇಕು. ಆರೆಸ್ಸೆಸ್ಸನೂ, ಜಮಾತೆಗಳನೂ ಒಂದೇ ತರ ಟ್ರೀಟ್ ಮಾಡಬೇಕು. ಈ ಹಿಂದೆ ದೇಶ ಆಳಿದೋರರ್ಯಲ್ಲ ಜಾತ್ಯತೀತವಾಗಿ ನಡಕೊಂಡ್ರು. ಇವುನ ಕೈಲಿ ಅದಾಗದಿಲ್ಲ. ದೇವರಾಣೆ ಸಾರ್. ಇವುನ ಮಾತು ಇವುನದಲ್ಲ, ಅದೇ ಈಗ ನಮ್ಮ ದೇಶದ ಮುಂದಿರೊ ಅಪಾಯ. ಪಿತ್ರ ಪಕ್ಷ ಸಾರ್. ಇವತ್ತು ಬಿಡುವಿಲ್ಲ, ಇನ್ಯಾವಗಾರ ಫೋನ್ ಮಾಡಿ, ಥ್ಯಾಂಕ್ಸ್!"

"ಥೂತ್ತೇರಿ!!!" ■

...ಡ್ಡು ಮಾಡುತ್ತಿದ್ದರೂ ಕುಷ್ಟಗಿಯ ಮತದಾರ ...ಡ್ಡನಗೌಡನನ್ನು ಕಮಲದಿಂದ ಕೆಳಕ್ಕೆ ...ಕ್ಕುರುಳಿಸಿದ್ದರು. ತನ್ನ ಜಾತಿ ದುರಾಡಳಿತದ ...ತೆಜೊತೆಗೆ ಸಾಂದರ್ಭಿಕ ರಾಜಕೀಯ ಪಲ್ಲಟವನ್ನು ...ಯಾಗಿ ಗ್ರಹಿಸದಿದ್ದುದೂ ದೊಡ್ಡನಗೌಡನ ಆ ...ಲಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ...ರಲ್ಲಾಗಲೇ ಲಿಂಗಸೂಗೂರಿನಲ್ಲಿ ಮೂರುಬಾರಿ ...ಕರಾಗಿದ್ದ ಕಾಂಗ್ರೆಸ್‌ನ ಅಮರೇಗೌಡರು ತಮ್ಮ ... ಕಳೆದುಕೊಂಡು ಕುಷ್ಟಗಿಗೆ ಬಂದು ನೆಲೆ ...ಸುತ್ತಿದ್ದರು. ಅಮರೇಗೌಡನಂತಹ ಅನುಭವಿ ...ಕಾರಣಿಯ ಮುಂದೆ ಸವಾಲೊಡ್ಡುವ ಪಟ್ಟು ...ದ ದೊಡ್ಡನಗೌಡ ಮಕಾಡೆ ಮಲಗಿದ್ದ. ಆ ...ಾವಣೆಯಲ್ಲಿ ಅಮರೇಗೌಡ ಗೆದ್ದು ಶರಣಪ್ಪ ...ನೇ ಸ್ಥಾನದಲ್ಲಿದ್ದರೆ ಹಾಲಿ ಶಾಸಕನಾಗಿದ್ದರೂ ...ಡ್ಡನಗೌಡ ಕುಸಿದದ್ದು ಮೂರನೇ ಸ್ಥಾನಕ್ಕೆ!

... 2008ರಲ್ಲಿ ಸೋತರೂ ಆ ಸಲ ರಾಜ್ಯದಲ್ಲಿ ...ಜೆ.ಪಿ. ಅಧಿಕಾರದ ಚುಕ್ಕಾಣಿ ಹಿಡಿದಿದ್ದರಿಂದ ...ಡ್ಡನಗೌಡ ತಾಲೂಕಿನಲ್ಲಿ ವರ್ಗಾವಣೆಯ ಅಂಗಡಿ ...ದು ಕೂತ. ತನಗೆ ಬೇಕಾದ ಹಾಗೂ ಸ್ವಜಾತಿ ...ಧದ ಅಧಿಕಾರಿಗಳನ್ನು ಕುಷ್ಟಗಿಗೆ ತಂದು ಕೂರಿಸಿ ...ದ ಮೂಲಕ ವಸೂಲಿಗಿಳಿದಿದ್ದ. ಅದು 2013ರ ...ಾವಣೆಯ ವೇಳೆಗೆ ಚೆನ್ನಾಗಿಯೇ ವರ್ಕ್‌ಔಟ್ ...ಯ್ತು. ಕುರುಬ ಸಮಾಜದ ಸಂಘಟನೆಯ ಹೆಸರಲ್ಲಿ ...ತಿ ಬಾಂಧವ ಸರ್ಕಾರಿ ನೌಕರರನ್ನು ...ಗಳೊಳಗೆ ಗುದ್ದೆ ಹಾಕಿಕೊಂಡಿದ್ದು ಅವನ ಹಾಲಿ ...ಗೆ ಬಂಡವಾಳವಾಯ್ತು. ಆತ ಚುನಾವಣೆಗೆ ...ವಾಗ ಕುರುಬ ಸಮಾಜದ ಸರ್ಕಾರಿ ನೌಕರರೇ

ತಾವೇ ಮುಂದಾಗಿ ಲಕ್ಷಾಂತರ ರೂಪಾಯಿ ಹಣ ಸಂಗ್ರಹಿಸಿ ದೊಡ್ಡನಗೌಡನ ಚುನಾವಣೆ ವೆಚ್ಚವಾಗಿ ನೀಡಿದ್ದರು. ಅಲ್ಲದೇ ತಾಲ್ಲೂಕ ಹಾಲುಮತ ಸಮಾಜದ ಅಧ್ಯಕ್ಷ ಮಲ್ಲಣ್ಣ ಪಲ್ಲೆದ್ ಸೇರಿದಂತೆ ಬಹುತೇಕ ಕುರುಬ ನಾಯಕರು ದೊಡ್ಡನಗೌಡನ ಎಲೆಕ್ಷನಿಗಾಗಿ ದೊಡ್ಡಮಟ್ಟದ ಫಂಡ ಕಲೆಕ್ಷನ್ ಮಾಡಿಕೊಟ್ಟಿದ್ದರು. 2013ರಲ್ಲಿ ದೊಡ್ಡನಗೌಡ ಗೆಲ್ಲಲು ಇವೆಲ್ಲ ಬಹುಮುಖ್ಯ ಪಾತ್ರ ವಹಿಸಿದವು. ಚುನಾವಣೆಯಲ್ಲಿ ಯಥಾಪ್ರಕಾರ ಜೆಡಿಎಸ್‌ನಿಂದ ಲಿಂಗಾಯತ ಸಮಾಜದ ಕೆ.ಶರಣಪ್ಪ ಸ್ಪರ್ಧೆಗಿಳಿದಿದ್ದರೆ, ಕಾಂಗ್ರೆಸ್‌ನಿಂದ ಅಮರೇಗೌಡ ಬಯ್ಯಾಪುರ ಸ್ಪರ್ಧಿಸಿದ್ದರು, ಇನ್ನು ಬಿ.ಎಸ್.ಆರ್ ಪಕ್ಷ ಬಳ್ಳಾರಿಯ ಗಣಿದಣಿ ರಾಜಶೇಖರಗೌಡ ಗೋನಾಳನನ್ನು ಕಣಕ್ಕಿಳಿಸಿತ್ತು, ಈ ಲಿಂಗಾಯತರ ನಾಯಕರ ನಡುವೆ ಮತ ವಿಭಜನೆಗೊಂಡು ದೊಡ್ಡನಗೌಡ ಪಾಟೀಲ್ ಶಾಸಕನಾಗಿ ಆಯ್ಕೆಯಾದ. ಸಚಿವನಾಗುವ ಆಸೆಯಲ್ಲಿದ್ದ ಬಯ್ಯಾಪುರ ಕೇವಲ 1500 ಮತಗಳ ಅಂತರದಲ್ಲಿ ಸೋತುಹೋದರು.

ಎರಡನೇ ಬಾರಿ ಶಾಸಕನಾದ ಮೇಲೂ ದೊಡ್ಡನಗೌಡ ತನ್ನ ವರ್ತನೆ ತಿದ್ದಿಕೊಳ್ಳಲೇ ಇಲ್ಲ. ಜನ ನೆನಪಿಡುವಂತಹ ಒಂದೇಒಂದು ಕಾರ್ಯಕ್ರಮವೂ ಈತನಿಂದ ಆಗಿಲ್ಲ. ಕುಷ್ಟಗಿ ತಾಲೂಕಿನ ಪ್ರತಿಯೊಂದು ಗ್ರಾಮವೂ ಫ್ಲೋರೈಡ್ ಮಿಶ್ರಿತ ನೀರು ಸೇವನೆ ಸಮಸ್ಯೆಯಿಂದ ಬಳಲುತ್ತಿವೆ. ಅತ್ಯಂತ ಬರಪೀಡಿತ ಈ ನೆಲಕ್ಕೆ ನೀರಾವರಿ ಸೌಲಭ್ಯ ಎಂಬುದಿಲ್ಲ. ಈ ತಾಲೂಕಿಗೆ ಕೃಷ್ಣಾ ಬಿ.ಸ್ಕೀಮ್ ರೈತರ ಪಾಲಿಗೆ ಸಂಜೀವಿನಿ ಆಗಬೇಕಾಗಿತ್ತು. ಆದರೆ ಆ ಯೋಜನೆ ಜನತೆಯ ಪಾಲಿಗೆ ಕೈಗೆಟುಕದ ದ್ರಾಕ್ಷಿ ಎಂಬಂತಾಗಿದೆ. ಬಡತನವೆಂಬ ಹೆಮ್ಮಾರಿ ಜನರ ಪಾಲಿಗೆ ಶಾಶ್ವತ ಪೀಡೆಯಾಗಿದ್ದು ಕುಷ್ಟಗಿ ತಾಲೂಕಿನಿಂದ ದಿನನಿತ್ಯ ಸಾವಿರಾರು ಜನ ಬದುಕನ್ನರಿಸಿ ಮಂಗಳೂರು, ಗೋವಾ, ರತ್ನಗಿರಿ, ಮುಂಬೈನತ್ತ ಗುಳೆ ಹೋಗುವುದು ಸಾಮಾನ್ಯವಾಗಿಬಿಟ್ಟಿದೆ. ಕುಷ್ಟಗಿಯ ಯಾವುದೇ ಸರಕಾರಿ ಕಚೇರಿಗೆ ಹೋದರೆ ಅಲ್ಲಿ ಸಾಹೇಬರು ಕೊಪ್ಪಳಕ್ಕೆ ಮೀಟಿಂಗ್ ಹೋಗ್ಯಾರ ಎಂಬ ಸಿದ್ಧ ಉತ್ತರವೇ ಕೇಳಿಬರುತ್ತೆ, ಸರಕಾರಿ ಇಲಾಖೆಯ ಒಬ್ಬ ಅಧಿಕಾರಿಯೂ ಜನರ ಕೈಗೆ ಸಿಗುವುದಿಲ್ಲ, ಸರಕಾರಿ ಅಧಿಕಾರಿಗಳು ಕೊಬ್ಬಿ ಗೂಳಿಗಳಂತಾಗಿದ್ದಾರೆ. ಜನರ ಕಣ್ಣಿಗೆ ಕಾಣದೆ ಅದೆಲ್ಲೋ ಕುಳಿತುಕೊಂಡು ಸರಕಾರದ ಸೌಲಭ್ಯವಿರುವ ಕ್ರಿಯಾ ಯೋಜನೆಯನ್ನು ಈ ಅಧಿಕಾರಿಗಳು ತಯಾರು ಮಾಡುತ್ತಾರೆ. ಆ ಮೂಲಕ ಭೋಗಸ್ ಬಿಲ್ ಎತ್ತುತ್ತಾರೆ. ಕುಷ್ಟಗಿಯ ಸಣ್ಣ ನೀರಾವರಿ ಇಲಾಖೆಯಲ್ಲಿ ಅಂದಾಜು 200 ಕೋಟಿ ರೂಪಾಯಿ ಕರ್ಮಕಾಂಡ ರಾಜ್ಯಾದ್ಯಂತ ಸುದ್ದಿಯಾಗಿ 32 ಅಧಿಕಾರಿಗಳು ಸಸ್ಪೆಂಡಾಗಿ ಈಗ ಮನೆಯಲ್ಲಿ ಮುದ್ದೆ ಮುರಿಯುತ್ತಿದ್ದರೆ ಹಗರಣದ ರುವಾರಿಗಳಾದ 32 ಜನ ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ಅಧಿಕಾರಿಗಳು ಈ ಮಟ್ಟದ ಹದ್ದುಮೀರಿ ಹೋಗಲು ಶಾಸಕನೆನಿಸಿಕೊಂಡ ದೊಡ್ಡನಗೌಡನ ನಿರ್ಲಕ್ಷ್ಯವೇ ಕಾರಣ. ಹೀಗಾಗಿ 2018ರ ಚುನಾವಣೆಯಲ್ಲಿ ದೊಡ್ಡನಗೌಡ 2008ರ ಫಲಿತಾಂಶ ಪಡೆಯುವುದೇ ಕಾಯಂ ಅಂತ ಜನ ಮಾತಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ತಕ್ಕಂತೆ ದೊಡ್ಡನಗೌಡನ ಪ್ರತಿಸ್ಪರ್ಧಿ ಮಾಜಿ ಸಚಿವ ಅಮರೇಗೌಡ ಬಯ್ಯಾಪುರ ಜನರ ನಡುವೆ ಬೆರೆತು ಗೆಲುವಿನ ತಯಾರಿ ನಡೆಸಿದ್ದಾರೆ. ■

ರಾಜೀನಾಮೆ ರಾಜಕೀಯ

ಅಧಿಕಾರದ ಸವಿ ಅನುಭವಿಸುತ್ತಿರುವವರಿಗೆ ಶಾನೆ ಕಷ್ಟ ಆಗೋಗದೆ. ಮನುಷ್ಯನ ಕಣ್ಣೋ ಮಾರಿ ಕಣ್ಣೋ ಅಂತಾರಲ್ಲ, ಅಂತೋವು ಸಾವಿರಾರು ಕಣ್ಣುಗಳು ಅವರ ಮೇಲೆ ಬದ್ದಿರುತ್ತವೆ. ಸಮಯ ಸಿಕ್ಕಿದರೆ ಸಾಕು. ಕುಕ್ಕಿಕುಕ್ಕಿ ಪ್ರಾಣ ಹಿಂಡೋಕೆ ರೆಡಿಯಾಗಿರ್ತವೆ. ದೇಶ, ರಾಜ್ಯ ಅಂದಮೇಲೆ ಅಂತಹ ಸಮಸ್ಯೆಗಳಿಗೇನೂ ಬರ ಇಲ್ಲ, ಸಾವಿರಾರು ಬರುತ್ತಾನೆ ಇರುತ್ತವೆ. ಆ ಕಣ್ಣುಗಳು ಇರುತ್ತವಲ್ಲ ಅಂತಹ ಸಮಯವನ್ನೇ ಕಾಯುತ್ತಾ ಇರುತ್ತವೆ. ಅವು ಬಂದಾಗಲೆಲ್ಲ ಅಧಿಕಾರಸ್ಥರಿಗೆ 'ಜನ ಸಾಯ್ತಾ ಇದಾರೆ ರಾಜೀನಾಮೆ ಬಿಸಾಕಿ ಬಾ' ಅಂತ ಅರಚುತ್ತಾ ಬದ್ದಿರ್ತವೆ. 'ಸತ್ತರೆ ಸಾಯ್ಲಿ ಬಿಡ್ರಿ. ಸಾಯೋರ್ನ ಹಿಡಿದಿಟ್ಟುಕೊಳ್ಳೋಕೆ ಸಾಧ್ಯಾನ' ಅಂತ ಹೇಳುವ ಮನಸ್ಸು ಆಗುತ್ತದೆ ನಿಜ. ಆದರೆ ಹಂಗೆ ಬಹಿರಂಗವಾಗಿ ಹೇಳೋದು ಆಗಲ್ಲ, ಯಾಕೆ ಅಂದ್ರೆ ಈ ಅಧಿಕಾರ ಅನ್ನೋದು ಆ ಜನ ಕೊಟ್ಟಿರೋ ಬಳುವಳಿ. ಅಂತಹ ಸಂದರ್ಭ ಬಂದಾಗ 'ನಾನು ಜನರ ಪರವಾಗೇ ಇದ್ದೀನಿ' ಅನ್ನುವ ಹಾಗೆ ಏನೋ ಒಂದು ಸಬೂಬು ಹೇಳಿ ತಲೆ ಉಳಿಸಿಕೊಳ್ಳಬೇಕಾಗುತ್ತದೆ.

ಈಗ ನೋಡಿ ಕಾವೇರಿ ನೀರಿನ ಸಮಸ್ಯೆ ಬಂದು ಕುತ್ತಿಗೆ ಮೇಲೆ ಕುಂತದೆ. ಹಂಗೆ ನೋಡಿದ್ರೆ ಇದೇನು ಹೊಸದಲ್ಲ, ಎರಡು ಮೂರು ವರ್ಷಕ್ಕೆ ಒಂದು ಸಲ ಬರ್ತಾನೆ ಇರ್ತದೆ. ಜನ ದಂಗೆ ಏಳ್ತಾರೆ. ರಾಜೀನಾಮೆ ರಾಗ ಹಾಡ್ತಾರೆ. ಆದ್ರೆ ಯಾರೂ ಅಧಿಕಾರ ತ್ಯಜಿಸಿದ್ದು ಇಲ್ಲ- ಈ ಕೂಗು ಹಂಗೇ ತಣ್ಣಗಾಗುತ್ತದೆ. ಈ ಗುಟ್ಟು ನಮ್ ಸಂಸದರು, ಶಾಸಕರು ಚೆನ್ನಾಗಿ ಅರಿತವ್ರೆ. ಈ ವರ್ಷನೂ ಹಂಗಾಗದೆ. ಜನ ದಂಗೆ ಎದ್ದರು. ತಮಿಳುನಾಡಿಗೆ ನೀರು ಬಿಡಬೇಡಿ ಅಂತ ಕೂಗು ಹಾಕಿದ್ರು. ಅಧಿಕಾರಸ್ಥರೇನು ಮಾಡಿದ್ರು? 'ಸುಪ್ರೀಂಕೋರ್ಟು ಬಿಡು ಅಂದದಲ್ಲ' ಅಂತ ಕೇಳಿದ್ರು. ಅದ್ಕೇ ಜನ ಏನು ಹೇಳಿದ್ರು? 'ರಾಜೀನಾಮೆ ಬಿಸಾಕಿ ಬನ್ನಿ' ಅಂದ್ರು. ಜನ ಕೇಳ್ತಾರೆ ಅಂತ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಇರೋ ಸವಲತ್ತುಗಳನ್ನು ಬಿಟ್ಟು ಕೊಡೋಕೆ ಎಂತಹವರಿಗೂ ನೋವಾಗೋ ಸಂಗತೀನೆ. ಅದಕ್ಕೇ ಸಂಸದ ಪ್ರತಾಪ ಸಿಂಹ ಅಂತಹವರು ಏನು ಮಾಡ್ತಾರೆ? ಮಹಾನ್ ದೇಶಭಕ್ತರಲ್ಲವಾ ಅವರು, 'ದೇಶಕ್ಕಾಗಿ ಪ್ರಾಣ ನೀಡಲೂ ಸಿದ್ಧ' ಅಂತ ಸಿಂಹ ಘರ್ಜನೆ ಮಾಡ್ತಾರೆ. 'ಪ್ರಾಣ ಬ್ಯಾಡ ಕಣ್ರೀ ರಾಜೀನಾಮೆ ಕೊಡ್ರಿ ಸಾಕು' ಅಂತ ಜನರೇ ಕೇಳಿದ್ರೆ 'ರಾಜೀನಾಮೆ ಕೊಡ್ತೀನಿ' ಅಂತಾರೆ. ಆದ್ರೆ 'ಅದರಿಂದ ಕಾವೇರಿ ಸಮಸ್ಯೆ ಬಗೆ ಹರಿಯುವುದಾದರೆ' ಅನ್ನೋ ಕಂಡಿಷನ್ ಹಾಕ್ತಾರೆ. ಇದು ಆಗೂಹೋಗೋ ಮಾತಲ್ಲ ಅಂತ ಅವರಿಗೆ ಗೊತ್ತಿಲ್ವ. ಆದ್ರೂ ಹಂಗಂದು ಸಂಸದರ ಸ್ಥಾನ ಕಾಯ್ದು ಕೊಳ್ತಾರೆ. ಇನ್ನು ಕೆ.ಎಸ್. ಪುಟ್ಟಣ್ಣಯ್ಯ ಅವ್ರಲ್ಲ ಅವರಂತೋರು ಏನು ಮಾಡ್ತಾರೆ? ಮೊದಲೇ ರೈತನಾಯಕರು ಅಲ್ಲವಾ. ರೈತರ ಪರವಾಗಿ ಎಲ್ಲಿ ಹೋರಾಟ ನಡೆದರೂ ಅಲ್ಲಿರುತ್ತಾರೆ. ಕಾವೇರಿ ನದಿ ನೀರಿನ ವಿಷಯದಲ್ಲಿ ಸುಮ್ಮನಿರಲು ಸಾಧ್ಯವೇ ಇಲ್ಲ, ಚಳವಳಿ ನಡೆಯುವ ಸ್ಥಳಗಳಿಗೆ ಖುದ್ದು ಹೋಗಿ ಭಾಷಣ ಮಾಡಿ ರೈತಪರ ಕಾಳಜಿ ಬಹಿರಂಗಪಡಿಸ್ತಾರೆ. ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಖಾತರಿ ಆದ ತಕ್ಷಣ 'ನೀರು ಹರಿಸಿದರೆ ರಾಜೀನಾಮೆ ನೀಡ್ತೀನಿ' ಅಂತಾರೆ!

ಈ ಇಬ್ಬರು ತರಹದವರು ಹಿಂಗೆ ಮಾಡಿದ್ರಲ್ಲಾ, ನಮ್ಮ ಅಂಬರೀಸು ತರಹದ್ದವರದ್ದೇ ಒಂದು ತರಹ. ಟ್ರೆಂಡ್‌ಕ್ರಿಯೇಟ್ ಮಾಡ್ತಾರೆ ಅಂತಾರಲ್ಲ ಅಂತಹ ಮಾದರಿ ಅದು. ಎಷ್ಟೇ ಆಗಲಿ ಮಂಡ್ಯದ ಗಂಡು ಅಲ್ಲವಾ. ಭಲೇ ಸ್ವಾಭಿಮಾನಿ. ಅದಕ್ಕೇ ಧಕ್ಕೆ ಬಂದಾಗಲೆಲ್ಲ ರಾಜೀನಾಮೆ ಕೆರೆದು ಬಿಸಾಕ್ತಾರೆ. ಮಂತ್ರಿಯಾಗಿದ್ದರು. ಅದೂ ಅವರಿವರ ಮನೆ ಬಾಗಿಲಿಗೆ ಹೋಗಿ ಗೋಗರೆದವರಲ್ಲವಂತೆ. ಮುಖ್ಯಮಂತ್ರಿಗಳೇ ಕರೆದು ಕೊಟ್ಟಿದ್ದಂತೆ. ಹಂಗಂತ ಅವರೇ



ಹೇಳಿದ್ರು. 'ಮಂತ್ರಿಮಂಡಲದಿಂದ ತೆಗೆದುಹಾಕಿದ್ರೆ ಏನು ಮಾಡ್ತೀರಿ' ಎಂದು ಯಾರೋ ಕೇಳಿದ್ದಕ್ಕೆ 'ಮನೆಗೋಯ್ತೀನಿ. ನೋ ಲಾಸ್ ನೋ ಪ್ರಾಫಿಟ್' ಅಂದಿದ್ದರು ನಮ್ಮ ಅಂಬರೀಸು. ಆದರೆ ಹುಟ್ಟುಗುಣ ನೋಡಿ ಸುಟ್ಟರೂ ಹೋಗಲ್ಲವಂತೆ. ಸಿದ್ದರಾಮಯ್ಯನೋರು 'ನೀನು ಮಂತ್ರಿಗಿರಿ ಮಾಡಿದ್ದು ಸಾಕು. ಇನ್ನು ರೆಸ್ಟ್ ತಗೊ' ಅಂತ ಹೇಳಿ ಬಿಟ್ಟಾಗ ಅಂಬರೀಸು ಸ್ವಾಭಿಮಾನ ಕೆರಳಿತು. ಮೊದಲೇ ರೆಬಲ್ ಸ್ಟಾರು. ರೆಬೆಲ್ ಆಗಿ ಮುಖ್ಯಮಂತ್ರಿ ವಿರುದ್ಧ ಸಮರ ಸಾರಿದರು. ಪತ್ರಿಕಾಗೋಷ್ಠಿ ಕರೆದರು. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡ್ತೀನಿ ಅಂತ ಸಾರಿದರು. 'ಯಾವುದಾದರೂ ಒತ್ತಡ ಬಂದ್ರೆ ಏನು ಮಾಡ್ತೀರಿ? ರಾಜೀನಾಮೆ ಹಿಂದಕ್ಕೆ ಪಡೀತೀರಾ' ಅಂತ ಯಾರೊ ಕೇಳಿದ ಪ್ರಶ್ನೆಗೆ 'ನೂರು ಕೋಟಿ ಕೊಡ್ತೀನಿ ಅಂದ್ರೂ ಹಿಂದಕ್ಕೆ ಪಡೆಯೋಲ್ಲ' ಅಂತ ಧೀರೋದಾತ್ತವಾಗಿ ಸಿನಿಮಾ ಶೈಲಿಯಲ್ಲೇ ಉತ್ತರಿಸಿದ್ದರು ನಮ್ಮ ಅಂಬರೀಸು. ಹೇಳಿದ ಹಾಗೇನೇ ನಡೆದುಕೊಂಡರು. ರಾಜೀನಾಮೆ ಪತ್ರ ಸಿದ್ಧಪಡಿಸಿದರು. ಫೇಮಸ್ ಫಿಲಂ ಆಕ್ಟರು ಆಗಿ ತಾನೇ ವಿಧಾನಸೌಧಕ್ಕೆ ಹೋಗೋದು, ಅಲ್ಲಿ ವಿಧಾನ ಸಭಾಧ್ಯಕ್ಷರನ್ನು ಹುಡುಕೋದು ಇವೆಲ್ಲ ರೇಜಿಗೆ ಕೆಲಸ ಅನ್ನಿಸಿರಬೇಕು ಅಣ್ಣಾರಿಗೆ. ಅದಕ್ಕೇ ಯಾರೋ ಒಬ್ಬನ ಕೈಲಿ ರಾಜೀನಾಮೆ ಪತ್ರನ ಕಳುಹಿಸಿಕೊಟ್ಟರು! ಆಮೇಲೆ ಏನಾಯಿತು ಅಂತೀರಿ:

'ಅರೆರೆ ಇದೇನು ಹಿಂಗೆ ಮಾಡಿಬಿಟ್ಟೇದಿನಲ್ಲಾ. ನನ್ನನ್ನು ಗೆಲ್ಲಿಸಿರೋರು ಮಂಡ್ಯದ ಜನ. ಅವರನ್ನ ಒಂದು ಮಾತೂ ಕೇಳದೆ ಹಿಂಗೆ ಮಾಡಬಾರದಿತ್ತು, ಅವರ ಜೊತೆ ಸಮಾಲೋಚಿಸಿ ಒಂದು ನಿರ್ಧಾರಕ್ಕೆ ಬರಬೇಕು' ಅನ್ನೋ ಜ್ಞಾನೋದಯ ಆಗಿರಬೇಕು. ಹಂಗೇ ಮಾಡಲು ಮನಸ್ಸು ಮಾಡಿದರು. ಮನಸ್ಸೇನೋ ಮಾಡಿದರು. ಆದರೇನು ಮಾಡ್ತೀರಿ. ಅವರು ನಮ್ಮ ನಿಮ್ಮಂತಹವರು ಅಲ್ವಾ. ನೂರೆಂಟು ಕೆಲಸ ಇರೋ ಬಿಸಿಮ್ಯಾನು. ಹಂಗಾಗಿ ಮಂಡ್ಯಕ್ಕೆ ಬರೋಕೆ ಆಗಿರಲಿಲ್ಲ, ರಾಜೀನಾಮೆ ವಿಷಯ ಹಂಗೇ ಉಳಿದಿತ್ತು, ಈಗೆ ನೋಡಿ. ಈ ಕಾವೇರಿ ನೀರಿನ ಸಮಸ್ಯೆ ಅಂಬರೀಸು ವಿದೇಶಕ್ಕೆ ಹೋದಾಗಲೇ ಬಂದು ಕುಂತದೆ. ಎಲ್ಲ ಜನ 'ಅಂಬರೀಸು ರಾಜೀನಾಮೆ ನೀಡಲಿ' ಅಂತ ಕೂಗ್ತಾ ಬದ್ದದೆ. ಅಂಬರೀಸು ದೇಶಾಂತರ ಹೋಗವ್ರೆ. 'ರಾಜೀನಾಮೆ ಕೊಡು' ಅಂತ ಇಲ್ಲಿ ಕೂಗಿದರೆ ಅಂಬಿಗೆ ಕೇಳಿಸುತ್ತಾ, ಬಂದಮೇಲೆ ರಾಜೀನಾಮೆ ಕೆರೆದು ಬಿಸಾಕ್ತಾರೆ. ಅಷ್ಟರಲ್ಲಿ ಕಾವೇರಿ ಕಾವು ಆರಿ ಹೋದರೆ... ಪಾಪ ಅಂಬರೀಸು ಹೊಣೆಯಾ....

ನಿದ್ರೆಗೂ ರಾಹುಕಾಲವೆ?

ಸುಪ್ರೀಂಕೋರ್ಟು ತಮಿಳುನಾಡಿಗೆ ನೀರು ಹರಿಸುವಂತೆ ಆದೇಶ ನೀಡಿತ್ತು, ಅದನ್ನು ಪಾಲಿಸಬೇಕಾದ್ದು ರಾಜ್ಯ ಸರ್ಕಾರದ ಕರ್ತವ್ಯ ಆಗಿತ್ತು, ಆದರೆ ಹರಿಸಲು ನೀರೇ ಇರಲಿಲ್ಲ!

ನೀರು ಬಿಡದಿದ್ದರೆ ನ್ಯಾಯಾಂಗನಿಂದನೆಯಾಗುವ ಸಾಧ್ಯತೆ ಇದೆ. ಬಿಡಲು ನೀರಿಲ್ಲ, ಇಲ್ಲದ ನೀರನ್ನು ಬಿಡುವುದು ಎಲ್ಲಿಂದ?

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಏನು ಮಾಡಬೇಕು ಸರ್ಕಾರ?

ಈ ಜಟಿಲ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ವಿಧಾನಮಂಡಲದ ಅಧಿವೇಶನ ಕರೆಯಿತು.

ಅವತ್ತು ಶುಕ್ರವಾರ ಅಧಿವೇಶನ ಬೆಳಗ್ಗೆ 11 ಗಂಟೆಗೆ ಪ್ರಾರಂಭ ಆಗಬೇಕಿತ್ತು, ಆದರೆ....

ಅವತ್ತು ಬೆಳಗ್ಗೆ 10.30 ರಿಂದ 12 ಗಂಟೆಯವರೆಗೆ ರಾಹುಕಾಲ!

ಕಲಾಪ ಸುಸೂತ್ರವಾಗಿ ನಡೆಯಬೇಕು. ಅಲ್ಲಿ ತೆಗೆದುಕೊಂಡ ತೀರ್ಮಾನಗಳು ನಿರ್ವಿಘ್ನವಾಗಿ ಜಾರಿಗೊಳ್ಳಬೇಕು. ಕಲಾಪಗಳನ್ನು ರಾಹುಕಾಲದ ನಂತರ ಪ್ರಾರಂಭಿಸಿದರೆ ಮಾತ್ರ ಇದು ಸಾಧ್ಯ.

ಇದು ಎಚ್.ಡಿ. ರೇವಣ್ಣ ಸಿದ್ಧಾಂತ!

ಎಂತಹ ಸಂಕೀರ್ಣ ಸ್ಥಿತಿ ನೋಡಿ. ರಾಹು ಎಂಬ ನಕ್ಷತ್ರವೇ ಇಲ್ಲ, ಅದು ಖಗೋಳ ಶಾಸ್ತ್ರಜ್ಞರು ತಮ್ಮ ಅನುಕೂಲಕ್ಕೆ ಮಾಡಿಕೊಂಡಿರುವ ಒಂದು ಬಿಂದು ಅಷ್ಟೆ. ರಾಹುಕಾಲ ಎಂಬುದು ಮೂಢನಂಬಿಕೆ. ಕಾಲಕ್ಕೆ ಯಾವ ಗುಣವೂ ಇಲ್ಲ, ಯಾವಾಗ ಪ್ರಾರಂಭ ಮಾಡಿದರೂ ಅದು ಒಳ್ಳೆಯ ಕಾಲವೇ ಎಂಬುದು ಗೊತ್ತಿತ್ತು. ಆದರೆ ಏನೋ ಆತಂಕ. ಈಗ ಚರ್ಚೆಗೆ ಬರುವ ವಿಷಯ ಬಹಳ ಸೂಕ್ಷ್ಮವಾಗಿದೆ. ನಿಗದಿತ ಸಮಯದಲ್ಲಿ ಕಲಾಪ ಪ್ರಾರಂಭವಾಯಿತು. ಅಲ್ಲಿ ತೆಗೆದುಕೊಂಡ ತೀರ್ಮಾನಗಳಿಂದ ಒಳ್ಳೆಯ ಫಲಿತಾಂಶ ದೊರೆತರೆ ಸರಿ. ಹಾಗೆ ಆಗದಿದ್ದಲ್ಲಿ ಏನು ಗತಿ ಎಂಬ ಆತಂಕ. ಇದು ಸರ್ಕಾರವನ್ನು ಕಾಡಿತೊ ಅಥವಾ ಕಾಕತಾಳೀಯವೋ ರಾಹುಕಾಲ ಕಳೆದ ಮೇಲೆ ಕಲಾಪಗಳು ಪ್ರಾರಂಭ ಆದವು..

ಕಾವೇರಿ ಜಲವಿವಾದ ಒಂದು ಜ್ವಲಂತ ಸಮಸ್ಯೆ.

ಅಣಕ



• ಎಚ್.ಎಲ್.ಕೇಶವಮೂ

ಇದನ್ನು ಕುರಿತು ಸದನದಲ್ಲಿ ಗಂಭೀರ ಚರ್ಚೆ ನಡೆಯು ಆ ಸಮಯದಲ್ಲಿ...

ರಾಹುಕಾಲ ಸಿದ್ಧಾಂತಿ ರೇವಣ್ಣ ಏನು ಮಾಡುತ್ತಿ

ನಿದ್ರೆ ಮಾಡುತ್ತಿದ್ದರು!

ರಾಹುಕಾಲ ಮೀರಿದ ನಿದ್ರೆ ಇರಬೇಕು. ಸೋ ಅನುಸರಿಸುತ್ತಿದ್ದರು.

ಈ ಬದುಕಿಗೆ ರಾಹುಕಾಲ ನೋಡಬೇಕಿತ್ತೆ?

ಅವರೂ ನೋವ ಉಣ್ಣಲಿ

ನೆನಪಿದೆಯಾ?

ಕೆಲವು ದಿವಸಗಳ ಹಿಂದೆ ಬೆಂಗಳೂರಿನಲ್ಲಿ ಧಾ ಮಳೆ ಸುರಿದಿತ್ತು. ಹಲವು ಬಡಾವಣೆ ಜಲಾವೃತವಾಗಿದ್ದವು. ಮನೆಗಳಿಗೆಲ್ಲ ನೀರು ನುಗ್ಗಿತು. ನೋಡಿದರೂ ನೀರು, ನೀರು. ರಾತ್ರಿ ಮಲಗಲೂ ಸ ಸ್ಥಳ ಇಲ್ಲ, ಹಲವರಿಗೆ ಅವತ್ತು ಮತ್ತೊಂದು ಶಿವ

ಜನಜೀವನ ಅಸ್ತವ್ಯಸ್ತವಾಗಿತ್ತು.

ಸಂಬಂಧಿಸಿದ ಅಧಿಕಾರಿಗಳಿಗೆ ಹಿಡಿಶಾಪ ಹಾಕ ಗೊಣಗುತ್ತಲೇ ಮನೆ ನೀರು ತೆಗೆದರು. ಅನಂತರ

ಜನಜೀವನ ಮಾಮೂಲಿ ಸ್ಥಿತಿಗೆ ಬಂದಿತು.

ಎಲ್ಲವೂ ಮರೆತುಹೋಯಿತು.

ಯಾರಿಗೂ ಶಿಕ್ಷೆ ಆಗಲಿಲ್ಲ.

ಇದು ಬೆಂಗಳೂರಿನಲ್ಲಿ ನಡೆದದ್ದು.

ಇನ್ನೊಂದು ಘಟನೆ ನೋಡಿ

ಇದು ನಡೆದದ್ದು ಬೀದರ್‌ನಲ್ಲಿ

ಅಲ್ಲಿಯೂ ಧಾರಾಕಾರ ಮಳೆ.

ಮಳೆಯ ನೀರು ಮನೆಗಳಿಗೆ ನುಗ್ಗಿತು.

ನುಗ್ಗುವ ನೀರಿಗೆ ಯಾರ ಮುಲಾಜು!

ನ್ಯಾಯಾಧೀಶರ ಮನೆಗೂ ನುಗ್ಗಿತು!

ಅವರು ಕೋರ್ಟಿಗೆ ಹೋಗಲೇ ಆಗಲಿಲ್ಲವಂ

ಕೋರ್ಟ್ ಹಾಲಿನಲ್ಲೂ ಇಂತಹದ್ದೇ ಕತೆ. ಕಾಮಗಾರಿ ಕೃಪೆ. ಛಾವಣಿ ಎಲ್ಲ ತೂತುತೂತು. ಸೋ ನೀರಿನಿಂದಾಗಿ ಕೋರ್ಟ್ ಹಾಲ್ ನೀರಿನ ಹಾಲು ಆ

ಹಲವು ಸಲ ಛಾವಣಿ ಸರಿಪಡಿಸುವಂತೆ ಸಂಬಂ ಇಂಜಿನಿಯರುಗಳಿಗೆ ಕೋರಿಕೆ ಸಲ್ಲಿಸಿದ್ದರಂತೆ. ಆ ಮಾಡಲಿಲ್ಲ, ಈಗ ಈ ದುಸ್ಥಿತಿ.

ನ್ಯಾಯಾಧೀಶರ ನೆತ್ತಿಗೇರಿತು ಕೋಪ.

ಸ್ವಯಂಪ್ರೇರಣೆಯಿಂದ ಕೇಸು ದಾಖಲಿಸಿಕೊಂ ಇಂಜಿನಿಯರುಗಳ ಬಂಧಿಸಲು ಆದೇಶಿಸಿದರು. ಬಂಧ ಆಯ್ತು, ಜಾಮೀನಿನ ಮೇಲೆ ಬಿಡುಗಡೆಯೂ ಆ

ಈಗ ಪ್ರಶ್ನೆ: ಅವರು ಅಧಿಕಾರ ಇತ್ತು, ಚಲಾಯಿಸಿ

ಸಾಮಾನ್ಯ ಜನ ಇಂತಹದ್ದೇ ವಿಷಯಕ್ಕೆ ನ್ಯಾಯಾಲ ಹೋದರೆ ಇಷ್ಟೇ ಕ್ಷಿಪ್ರವಾಗಿ ಆದೇಶ ನೀಡುವರೆ

ಹೌದು ಎನ್ನುವುದಾದರೆ ನನ್ನದೊಂದು ಪಾಠ

(ಅ)ನೀತಿ: ನಿಮ್ಮ ಸಮಸ್ಯೆಗೆ ಪರಿಹಾರ ದೊರಕ

ನ್ಯಾಯಾಧೀಶರಿಗೂ ಆ ಸಮಸ್ಯೆ ಬರುವಂತೆ ಪ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ನಿರ್ಲಿಂಗಾನಂದ

ಸೃಷ್ಟಿಯ ಮೂಲ ಗಂಡೋ ಹೆಣ್ಣೋ?

ಪ್ರಕೃತಿಯಲ್ಲಿ ಸೃಷ್ಟಿಯ ಮೂಲ ಗಂಡೋ ಹೆಣ್ಣೋ ಂಬುದನ್ನು ತಿಳಿಯಲೇ ಸಹಸ್ರಾರು ವರ್ಷಗಳು ದುಹೋದವು. ಕೊನೆಗೆ ನಿರ್ಲಿಂಗದಿಂದ ಲಿಂಗಗಳಾದವು ಂಬಂತಹ ತೀರ್ಮಾನಕ್ಕೂ ಬರಲಾಯಿತು. ಆ ರ್ಲಿಂಗವಾಗಿರುವ ಧಾತುವನ್ನು ನಾನಾರೀತಿಯಲ್ಲಿ ರುತಿಸುವ ಪ್ರಯತ್ನಗಳೂ ಆದವು. ಅದನ್ನು ಶಕ್ತ ಎಂದು ರೆಯಲು ಪ್ರಯತ್ನಿಸಿದಾಗ ಶಕ್ತನೆಂಬ ಪದವು ಮುಂದೆದ್ದು ್ರಿಕೊಡವಿತು. ಶಕ್ತ ಎಂಬುದು ಶಕ್ತಿಯನ್ನು ೊಂದಿರುವಂತಹ ಅಥವಾ ಧಾರಣ ಮಾಡಿರುವುದೇ ಗಿರುವುದೇ ಹೊರತು ತಾನೇ ಅದಾಗುವುದಿಲ್ಲ ಎಂಬ ೇಕೆಗಳು ಎದ್ದವು. ಗುಣವಂತ, ಹಣವಂತ ಇದ್ದಂತೆ ಕ್ತಿವಂತನೂ ಆಗಿದ್ದು, ಶಕ್ತಿವಂತನೇ ಸಂಕ್ಷಿಪ್ತವಾಗಿ ಕ್ತನಾಗುತ್ತಿದ್ದ. ಹಾಗಾಗಿ ನಿರ್ಲಿಂಗವಾಗಿರುವ ಧಾತುವನ್ನು, ೂಲಧಾತುವನ್ನು ಶಕ್ತಿಯಿಂದ ಕರೆಯಲು ಮಸ್ಯೆಯಾಯಿತು. ಪ್ರಕೃತಿ ಅಥವಾ ಪುರುಷ, ಶಕ್ತಿ ಅಥವಾ ವ ಅದೇನೇ ಆಗಲಿ, ಅದಕ್ಕೊಂದು ಮೂಲವಾದ ರ್ಲಿಂಗದ ಶೋಧನೆ ಮುಂದುವರಿದು ಕೊನೆಗೆ ಅದನ್ನು ನಂದವೆಂದು ಕರೆಯಲಾಯಿತು.

ಇದನ್ನು ಸರಳ ರೀತಿಯಲ್ಲಿ ಅರ್ಥಮಾಡಿಕೊಳ್ಳುವು ದರೆ, ಒಂದು ಗಂಡು ಮತ್ತು ಹೆಣ್ಣು ತಮ್ಮ ನೈಸರ್ಗಿಕ ದಂತಹ ದೇಹ ರಚನೆಯಲ್ಲಿ ಗುರುತಿಸಿಕೊಂಡಿರುತ್ತಾರೆ. ವರು ಆನಂದವನ್ನು ಹೊಂದಲು ಆಶಿಸುತ್ತಾರೆ. ನಂತರ ದಾಗುತ್ತಾರೆ. ಸಂಭೋಗದ ಕ್ರಿಯೆ ನಡೆದ ಮೇಲೆ ರಾಗುತ್ತಾರೆ. ಇಬ್ಬರೂ ತೃಪ್ತಿಯನ್ನು ಹೊಂದಿರುತ್ತಾರೆ. ಭೌತಿಕ ಕ್ರಿಯೆಯ ಸಮಯದಲ್ಲಿ ಮೊದಲು ರುವಂತಹ ಆಶಯ ಆನಂದವಾಗಿರುತ್ತದೆ. ಸಂಭೋಗದ ಯೆ ನಡೆಯುವಾಗ ಅವರು ಆನಂದವನ್ನು ಹೊಂದುತ್ತಾರೆ. ತರ ತೃಪ್ತಿಯೂ ಆನಂದವೇ ಆಗಿರುತ್ತದೆ. ಹಾಗಾಗಿ ನಂದವೆಂಬುದು ದ್ವಿಲಿಂಗಿ ಅಥವಾ ನಿರ್ಲಿಂಗಿ. ಜೊತೆಗೆ ಕೃತಿ ಮತ್ತು ಪುರುಷ ಈ ಎರಡರಲ್ಲಿಯೂ ಯಾವುದೇ ದವಿಲ್ಲದೇ ಇರುವಂತಹದ್ದು ಎಂಬ ಅದ್ಭುತ ಆಲೋಚನೆ ೂಳೆದು ಆನಂದದ ಪರಿಕಲ್ಪನೆಯು ಆಧ್ಯಾತ್ಮದಲ್ಲಿ ಹುಟ್ಟಿತು. ೀಗೆ ಆನಂದದ ಆವಿಷ್ಕಾರ ಆಧ್ಯಾತ್ಮ ಲೋಕದಲ್ಲಿ ಒಂದು ೊಸ ಅಲೆಯನ್ನೇ ಎಬ್ಬಿಸಿತು. ಅದೆಷ್ಟು ತೀವ್ರವಾಗಿತ್ತೆಂದರೆ, ಷ್ಟೆಷ್ಟೋ ಹೊಸ ಹೊಸ ಸಿದ್ಧಾಂತಗಳು, ಸೂತ್ರಗಳು, ಂಥಗಳು, ಮಾರ್ಗಗಳು, ದೃಷ್ಟಿಕೋನಗಳು, ಧ್ಯಾನ ಂತ್ರಗಳು ಹುಟ್ಟಿಕೊಂಡವು. ಈ ಹಿಂದೆ ಹುಟ್ಟಿದ್ದ ಮಾಯಾ" ಪರಿಕಲ್ಪನೆಯನ್ನು ಇದು ನುಚ್ಚುನೂರು ಾಡಿತು. ಮಾಯಾ ಎಂಬುದು ನಕಾರಾತ್ಮಕವಾಗಿದ್ದು, ಲ್ಲವೂ ನಶ್ವರ ಎಂಬಂತಹ ನೇತಿ ದೃಷ್ಟಿಯನ್ನು ಹೊಂದಿತ್ತು. ದರೆ ಆನಂದ ಎಂಬುದು ಎಲ್ಲವನ್ನೂ, ಎಲ್ಲರನ್ನೂ ಳಗೊಳ್ಳುವಂತಹ ಸಕಾರಾತ್ಮಕವಾದ ದೃಷ್ಟಿಯನ್ನೂ, ೋಹಂ, ಅದೇ ನಾನು, ಅದೇ ನಾನು ಎಂಬಂತಹ ೃಷ್ಟಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಯಿತು. ಅದನ್ನು ನಾ ರೂಪಕಗಳಲ್ಲಿ ಶತಮಾನಗಳಿಂದ ಯೋಗಿಗಳು ಧಕರು ತಮ್ಮ ಚಿಂತನೆಗಳಲ್ಲಿ, ಸಾಧನೆಗಳಲ್ಲಿ ಪ್ರವಚನಗಳಲ್ಲಿ ಪಡಿಸಿಕೊಳ್ಳುತ್ತಾ ಬಂದರು.

ಈ ಆನಂದದ ವ್ಯುತ್ಪತ್ತಿ, ನೆಲೆ, ಅದರ ಚಲನೆ ಮತ್ತು ಟ್ಟಿಗೊಂಡು ಉಪಸಂಹಾರವಾಗುವಿಕೆಯ ಬಗ್ಗೆಯೂ ದೀರ್ಘವಾದಂತಹ ಭಾವಶೋಧನೆಗಳು ನಡೆದವು.

ಆನಂದವೆನ್ನುವುದು ತಾನೇ ತಾನಾಗಿರುವಂತದ್ದು. ಆದರೆ ಮ್ಮನ್ನು ಆನಂದಗೊಳಿಸಿಕೊಳ್ಳಲು ಅಥವಾ ನಮ್ಮಲ್ಲೇ ುವ ಆನಂದವನ್ನು ಅನಾವರಣ ಮಾಡಿಕೊಳ್ಳಲು ಯೋಗ ಥವಾ ಐಕ್ಯ ಅಥವಾ ಮೈತ್ರೀಭಾವದಂತಹ ತಂತ್ರಗಳನ್ನೂ ದ ಪ್ರಯತ್ನಿಸಲಾಯಿತು. ಹೊರಗಿನಿಂದ ಒಳಹೋಗಲು ಂದದ ಸಾಧ್ಯತೆಯನ್ನು ಕಂಡರೆ, ಒಳಗೆ ಅಥವಾ ಹೊರಗೆ, ಎರಡರ ವಿಭಾಗಗಳೇನೂ ಇಲ್ಲದೇ ಅಡ್ಡವಿರುವಂತಹ ಶಗಳನ್ನು ತೊಡೆಯುವುದು. ಅನಾವರಣಗೊಳ್ಳುವುದು ದೂ ಆಧ್ಯಾತ್ಮ ಪ್ರಪಂಚದಲ್ಲಿ ಗಮನಿಸುತ್ತಾ, ಗಣಿಸುತ್ತಾ ೋದರು. ಅದರಿಂದ ಒಂದು ಸಂಚಲನೆ ಉಂಟಾಯಿತು. ದೂ, ಕ್ರೈಸ್ತ, ಮುಸ್ಲಿ, ಉಪಸಂಸ್ಕೃತಿಗಳ ಪುರಾಣ ತ್ತು ಆಧ್ಯಾತ್ಮ ಸಾಧನೆಗಳಲ್ಲೂ ಇದು ತನ್ನ ಪರಿಕಲ್ಪನೆಯ ಭಾವ ಬೀರತೊಡಗಿತು.

ೆಯ ಮಣ್ಣಿನ ಕಣಕಣದಿ ಧೂಳಾಗಿ ಹೊರಳುವುದು
ಂದ
ಂಡೆಗಲ್ಲಿನ ಗಟ್ಟಿತನದಿ ದೃಢವಾಗಿ ನಿಲ್ಲುವುದು ಆನಂದ
ಿ ಘುರದಿ ಬೇರಾಗಿ ಊರಿ ಹಸಿರಾಗಿ ಬೆಳೆಯುವುದು
ಂದ
ಚ್ಚುವಾಗೆಂದು ಕಾಯದ ಹೂವಲಿ ತಾನೇ ಅರಳುವುದು
ಂದ

ಿನಲ್ಲಿ ಬಿಸಿಯಾಗಿ ಹೋಗುವೆ ಸುರಿಮಳೆಯಲಿ

ಹನಿಯಾಗಿ ಬೀಳುವೆ
ಚಳಿಯ ಗಾಳಿಯಲಿ ತಂಪಾಗಿರುವೆ, ಹರಿವ ನೀರಿನಲಿ ನಲಿದು ಹರಿಯುವೆ
ತುಂಬು ಸಾಗರದ ತೆರೆಗಳಲ್ಲಿ ಮೇಲೆದ್ದು ಬೀಳುವ ಅಲೆ ನಾನಾಗುವೆ
ತೆರೆದ ಬಾಂದಳದ ಅಂಗಳದಲ್ಲಿ ಏನೂ ಇಲ್ಲದೇ ಬಯಲಾಗಿರುವುದೇ



ಆನಂದ ಆನಂದ ಆನಂದ ಆನಂದ.

ಸಿಹಿಕಹಿಯೊಗರಲಿ ಬರಿದೇ ರುಚಿಯಾಗಿ, ನೋವು ನಲಿವಿನಲಿ ಭಾವ ನಾನಾಗಿ
ಜನನ ಮರಣವನು ಬರಿದೇ ನೋಡುತಲಿ, ರಾಗದ್ವೇಷಗಳ ನಕ್ಕು ಕ್ಷಮಿಸುತಲಿ
ನನಗೆ ಬೇಕೆಂದು ಏನನೂ ಸೆಳೆಯದೇ, ಬಿಟ್ಟು ಭೋಗಿಸುತ ಬರಿದಾಗಿರುತ
ನನ್ನದಲ್ಲದ ನನ್ನತನದ ತೆರೆ ಕಳಚಿ ನಿನ್ನಡಿಗೆ ಶರಣಾಗಿರುವುದೇ
ಆನಂದ ಆನಂದ ಆನಂದ ಆನಂದ.

ಭೌದ್ಧ ಮಾರ್ಗ ಯುಕ್ತಿಯೋ ಭಕ್ತಿಯೋ?

ತನ್ನ ತಾನು ಅರಿಯುವುದಕ್ಕೆ ಕೊಟ್ಟ ಮಹತ್ವವು ಮನೋಕೇಂದ್ರಿತ ಸಾಧನೆಗಳಾದರೆ, ತನ್ನತನವೆಂಬ ಉಪ್ಪನ್ನು ಆನಂದದ ಸಾಗರದಲ್ಲಿ ಕರಗಿಹೋಗಲು ಅಸ್ಪದ ಕೊಡುವಂತಹ ಶರಣಾಗತಿಭಾಗ ಹೃದಯಕೇಂದ್ರಿತ ಸಾಧನೆಗಳಾದವು. ಅದು ಬಹಳ ತೀವ್ರವಾಗಿ ಹರಡಿಕೊಂಡಿತು. ಬುದ್ಧನ ಬೋಧನೆಗಳಲ್ಲಿ ಹೃದಯವು ಕೇಂದ್ರವಾಗಿದ್ದರೂ ಅದು ಕೇಳುಗರನ್ನು ತಲುಪಲು ವಿಚಾರದ ಮಾಧ್ಯಮಗಳಲ್ಲಿ ಪ್ರಸರಣಗೊಳ್ಳುತ್ತಿತ್ತು. ಅದರ ವಾಹನ ವಿಚಾರ ಅಥವಾ ಮನಸ್ಸು ಆಗಿತ್ತು. ಆದರೆ, ಭಕ್ತಿಪಂಥದ ಸಂತರು ವಿಚಾರಗಳನ್ನು ಮಾಡಲಿಲ್ಲ. ಅವರ ಕೇಂದ್ರವೂ ಹೃದಯವೇ ಆಗಿದ್ದು, ಭಕ್ತಿಯೆಂಬ ಭಾವದ ಮೂಲಕವೇ ತಲುಪಿಸಲು ಯತ್ನಿಸಿದರು. ಅದು ಹೆಚ್ಚು ಜನರನ್ನು ತಲುಪಿತು.

ಈಗಲೂ ಬುದ್ಧನ ಅರಿತುಕೊಳ್ಳಲು ಯತ್ನಿಸುವ, ಆಧ್ಯಾತ್ಮದ ಒಗಟನ್ನು ಬಿಡಿಸುವಂತಹ ವೈಚಾರಿಕತೆಯ ಹಿನ್ನೆಲೆಯಲ್ಲಿ ಆರಾಧಿಸುವ ಮಂದಿ ಭಾರತೀಯರಿಗಿಂತ ಪಾಶ್ಚಾತ್ಯರೇ ಹೆಚ್ಚು, ಅವರು ಬೌದ್ಧರಾಗುವ ಮನಸ್ಥಿತಿಗೂ, ಭಾರತೀಯರಲ್ಲಿ ದೊಡ್ಡ ಸಂಖ್ಯೆಯಲ್ಲಿ ಬೌದ್ಧರಾಗುವ ಮನಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಅವರು ಬೌದ್ಧರಾಗುವ ಉದ್ದೇಶ ತಾವೇ ಸ್ವಯಂಬುದ್ಧರಾಗುವುದು. ಪೌರಾತ್ಯರ ಉದ್ದೇಶ ಬೌದ್ಧ ಧರ್ಮವನ್ನು ಪಸರಿಸುವುದು. ಅವರು ಗುರಿ ಕೇಂದ್ರಿತವಾದರೆ, ಇವರು ದಾರಿ ಕೇಂದ್ರಿತವಾಗುತ್ತಾರೆ. ಅವರದು ಬೌದ್ಧ ಧರ್ಮ ಯುಕ್ತಿಯಾದರೆ, ಇವರ ಬೌದ್ಧ ಧರ್ಮ ಭಕ್ತಿಯಾಗುತ್ತದೆ. ಹಾಗಾಗಿಯೇ ರಾಮ, ಕೃಷ್ಣ ಶಿವನ ಆರಾಧನೆಗೂ ಬುದ್ಧನ ಆರಾಧನೆಗೂ ಯಾವುದೇ ವ್ಯತ್ಯಾಸವಿಲ್ಲದಂತೆ ತಮ್ಮ ಆಚರಣಾ ಪದ್ಧತಿಯನ್ನು ರೂಪಿಸಿ ಕೊಳ್ಳುತ್ತಿರುವ ಬೌದ್ಧರೇ ಅಪಾರ ಸಂಖ್ಯೆಯಲ್ಲಿದ್ದು ಇದು ಬುದ್ಧನ ತಿಳಿವಳಿಕೆಗೆ ಎಟುಕಿದ ಆನಂದಕ್ಕೆ ಯಾವ ರೀತಿಯಲ್ಲಿಯೂ ಮಾರ್ಗವಾಗುವುದಿಲ್ಲ.

ಬೌದ್ಧ ಧರ್ಮವು ಒಂದು ಅನುತ್ಪಾದಕ ಮತ್ತು ಸೋಮಾರಿ ಧರ್ಮ ಎಂದು ಬೌದ್ಧ ಧರ್ಮವನ್ನು ವಿರೋಧಿಸುತ್ತಿದ್ದವರಿಗೆ ಉತ್ತರವಾಗಿ ಅನೇಕ ಕ್ರಿಯಾಶೀಲ ಧ್ಯಾನ ತಂತ್ರಗಳು ಜೆನ್ ಮತ್ತು ಟಾವೋನಲ್ಲಿ ಪ್ರಚಲಿತಕ್ಕೆ ಬರಲಾರಂಭಿಸಿತು. ಭಾರತದಲ್ಲಿ ಧ್ಯಾನ ಎಂದರೆ ತಟಸ್ಥವಾಗಿ, ಮೈಮೇಲೆಲ್ಲಾ ಹುತ್ತ ಬೆಳೆದುಕೊಂಡು ಬಂದು, ಹಾವುಗಳು ಹರಿದಾಡಿದರೂ ಅಲ್ಲಾಡದೇ ಕುಳಿತುಕೊಳ್ಳುವಂತಹ ಪರಿಕಲ್ಪನೆಯನ್ನು ಸಮರ ಕಲೆಯನ್ನು ರೂಢಿಸಿಕೊಳ್ಳುವುದರ ಮೂಲಕ, ಕೃಷಿ ಮತ್ತು ಇತರ ಕೆಲಸಗಳೇ ಮೊದಲಾಗಿರುವ ಕ್ರಿಯೆಗಳಲ್ಲಿ ತಟಸ್ಥವಾಗಿ ಕೂರದೆಯೇ ಸದಾಕಾಲ ಕ್ರಿಯಾಶೀಲವಾಗಿರುವಂತಹ ಭೌದ್ಧರ ಧ್ಯಾನ ತಂತ್ರಗಳು ಮುಂದಿನ ಧ್ಯಾನಿಗಳ ಕಣ್ಣು ತೆರೆಸಿತು. ಕಾಯಕವೇ ಕೈಲಾಸ ಎಂಬ ಧ್ವನಿಗೆ ಹೆಚ್ಚು ಮಹತ್ವ ಬರಲಾರಂಭಿಸಿತು.

ನೀಡುವ ಕೊಡುವ ವ್ಯವಹಾರವು ಆಧ್ಯಾತ್ಮದಲ್ಲಿ ಇಲ್ಲವಾಗುತ್ತಾ, ಇರುವಿಕೆಯ ಬಗ್ಗೆ ಅತೀವವಾದಂತಹ ಆಸಕ್ತಿ ಉಂಟಾಯಿತು.

ನೀಡುವುದಿಲ್ಲದ, ಪಡೆಯುವುದಿಲ್ಲದ ಆನಂದ

ಶಿವ ಪುರಾಣದಲ್ಲಿ ಪಾರ್ವತಿಯು ಶಿವನಿಂದ ಬೀಜವನ್ನು ಬಯಸುವಾಗ, ತನಗೆ ಶಿಶುಭಿಕ್ಷೆ ಬೇಕು, ತಾನು ಅದಕ್ಕಾಗಿ ಹಾತೊರೆಯುತ್ತಿದ್ದೇನೆ ಎಂದು ದುಃಖಿತಳಾಗಿ ಕೇಳಿಕೊಳ್ಳುವಾಗ "ಪಾರ್ವತಿ, ಹೇ ಮಹೇಶ್ವರಿ." ರುದ್ರ ಅವಳ ಕಣ್ಣೀರನ್ನು ತೊಡೆಯುತ್ತಾ ಅಪ್ಪಿಕೊಂಡು ಹಣೆಗೆ ಮುತ್ತಿಟ್ಟ. "ರುದ್ರಿ, ನೀನು ನನ್ನ ಅರ್ಧಾಂಗಿ. ನಾನು ನಿನಗೆ ಕೊಡುವುದು ಏನೂ ಇಲ್ಲ, ನೀನು ನನ್ನಿಂದ ಪಡೆಯುವುದು ಏನೂ ಇಲ್ಲ, ನೀನಿಲ್ಲದೇ ನನ್ನ ಅಸ್ತಿತ್ವವಿಲ್ಲ. ನೀನು ಇನ್ನೂ ದೀನಳಾಗಿ ನನ್ನ ಮುಂದೆ ಹೀಗೆ ಕೂರಬೇಡ. ನನ್ನೊಳಗೇ ಇದ್ದು ನನ್ನನ್ನೇ ನೋಡು. ಆದರೆ, ನೀನು ಲೋಕದ ಹೆಂಗಸರ ಮಧ್ಯೆ ನಿಂತು, ದುಃಖದಿಂದ ಭ್ರಾಮಿಕಳಾದವಳಂತೆ ಕನವರಿಸುತ್ತಿದ್ದೀಯ. ನಿನ್ನ ಯೋನಿ ನನ್ನ ಕ್ಷೇತ್ರ. ನನ್ನ ಶಿಶ್ನ ನಿನ್ನ ಧಾರಣ. ನಮ್ಮಿಬ್ಬರ ಮಿಲನವೇ ಸೃಷ್ಟಿಯ ಬಿಂದು. ನಾನು ಬರಿಯ ಪುರುಷನಲ್ಲ, ನೀನು ಬರಿಯ ಸ್ತ್ರೀಯೂ ಅಲ್ಲ, ನಾನು ಪುರುಷನು ಎನ್ನುವುದಾದರೆ ಸ್ತ್ರೀಯೂ ಹೌದು. ನೀನು ಸ್ತ್ರೀ ಎನ್ನುವುದಾದರೆ ಪುರುಷಳೂ ಹೌದು. ಯಾವುದೊಂದು ದೇಹವು ಇವೆರಡೂ ಇಲ್ಲದೇ ಯಾರೊಬ್ಬರೂ ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲ. ನಾನು ತಂದೆ ಎನ್ನುವವರಿಗೆಲ್ಲಾ ತಂದೆ, ತಾಯಿ ಎಂದರೆ ನಾನೇ ತಾಯಿ. ತಂದೆ ತಾಯಿಗಳಾಗುವುದು ಸಂಭೋಗದಿಂದಲ್ಲ, ಸಂಯೋಗದಿಂದ. ನೀನು ಸುತನನ್ನು ಬಯಸುವುದೇ ನನಗೆ ಆಶ್ಚರ್ಯವಾಗುತ್ತಿದೆ. ನೀನು ಪ್ರಕೃತಿ. ನೀನು ಕೊಡುವವಳು. ನೀನು ನಿನ್ನ ತಾಯ್ತನವನ್ನು ಔದಾರ್ಯದಿಂದ ಸದಾ ನೀಡುತ್ತಿರುವವಳಾಗು. ಪಾತ್ರರೂ, ಅಪಾತ್ರರೂ ಅಲ್ಲಿರುವರು. ಆದರೆ ಅದನ್ನು ನೋಡುವುದು, ನಿರ್ಧರಿಸುವುದು ನಿನ್ನ ತಾಯ್ತನದ ಕೆಲಸವಲ್ಲ. ಸೂರ್ಯನ ಬೆಳಕಲ್ಲಿ ಯಾವನೋ ಒಬ್ಬಾತನು ನೋಡುವುದು ಅಥವಾ ಕಣ್ಮುಚ್ಚಿಕೊಂಡಿರುವುದು ಅವನ ನಿರ್ಧಾರ. ಆದರೆ ಅವನ ನಿರ್ಧಾರ ಸೂರ್ಯನಿಗೆ ಅಬಾಧಿತ. ನೀನು ಗಣೇಶ ಮಾತ್ರನಿಗೆ ತಾಯಿಯೆಂದು ಕರೆದುಕೊಳ್ಳುವುದು ನನಗೆ ಆಶ್ಚರ್ಯ. ನೀನು ತಾಯ್ತನದ ಸ್ವಪ್ರಕಾಶಿ. ಎಲ್ಲರಿಗೂ ವೇದ್ಯವಾದವಳು. ನಿನ್ನದೇ ಮಗುವು ಬೇಕೆಂದು ಮತ್ತೆ ಭೌತಿಕ ಪರಿಮಿತಿಯಲ್ಲಿ ವೃಥಾ ಬಂಧಿತಳಾಗಬೇಡ. ನಿನ್ನ ನೋವಿಗೆ ಕಾರಣ ನಿನ್ನ ಅವಿವೇಕ. ಅರಿವಿಲ್ಲದೇ ಹಟಮಾಡುವ ನಿನಗೆ ಲೌಕಿಕವಾದುದನ್ನು ಮಹೋನ್ನತವೆಂದು ನೀಡುವ ಅವಿವೇಕವನ್ನು ನಾನು ಮಾಡಲಾರೆ. ಅರಿತಿಕೋ ಉಮಾ. ಹೇ ಗೌರಿ, ನಿನ್ನ ವಿವೇಕದ ಕಣ್ಣುಗಳನ್ನು ತೆರೆ."

ಪಾರ್ವತಿ ಅಳುವುದನ್ನು ನಿಲ್ಲಿಸಿದ್ದಳು.

"ಸೃಷ್ಟಿಯಲ್ಲಿ ಸೃಷ್ಟಿಯಾದುದ್ದೆಲ್ಲಾ ಸೃಷ್ಟಿಯೇ ಆಗುವಂತೆ, ಲಯದಲ್ಲಿ ಲಯವಾಗುವುದನ್ನು ನಾನು ಕಲಿತಿದ್ದೇನೆ.. ಗತಿಯಲ್ಲಿ ಗತಿಯಾಗಬೇಕು. ಹೊನಲಿನಲ್ಲಿ ಹೊನಲಾಗಬೇಕು. ನೀನು ಪ್ರಕೃತಿಯಲ್ಲಿ ಪ್ರಕೃತಿಯಾಗಬೇಕು" ಎನ್ನುತ್ತಾ ತನ್ನ ಕನಸಿನಲ್ಲಿ ಕನವರಿಸುತ್ತಿದ್ದ ರುದ್ರನ ತೋಳುಗಳನ್ನು ಹಿಡಿದುಕೊಂಡು ಅವನ ವಿಶಾಲವಾದ ಎದೆಯ ಮೇಲೆ ತಲೆಯನ್ನಿಟ್ಟುಕೊಂಡು ವಿರಮಿಸಿದ್ದಳು. ಹೃದಯ ವೈಶಾಲ್ಯದಲ್ಲಿ ವಿಶ್ವದ ಹರವು ಕಂಡಳು.


ಈ ಭಾಗವು ಶಿವಶಕ್ತಿಯಿಂದಲೂ ಹೊರಕ್ಕೆ ಬಂದು ನಿರ್ಲಿಂಗವಾಗಿರುವ ಎಲ್ಲವೂ ಇರುವಂತಹ ಅಸ್ತಿತ್ವವನ್ನು ಅದರ ಬರಿದೇ ಇರುವಿಕೆಯನ್ನು, ಹರವಿರುವಿಕೆಯನ್ನೂ ಗ್ರಹಿಸಲಾಯಿತು.

ಅದರಿಂದಲೇ ನಿರ್ದಿಷ್ಟ ಗುರಿಯನ್ನು ಧಿಕ್ಕರಿಸಿದ ಆಧ್ಯಾತ್ಮ ಕ್ರಾಂತಿಗೂ ಇದು ಮೊದಲಾಯಿತು. ಅದು ಇನ್ನೂ ಮುಂದುವರಿದ ಭಾಗ. ನನ್ನ ಗುರಿ ಭಗವಂತನ ಅಥವಾ ಆತ್ಮ ಸಾಕ್ಷಾತ್ಕಾರ ಎಂಬ ಮಾತುಗಳು ಕೂಡ ಹಳಸಲಾಯಿತು. ಅಸ್ತಿತ್ವದ ಅನಂತತೆಯಲ್ಲಿನ ಅನಿರೀಕ್ಷಿತ ವಾದು ದನ್ನು ಹೊಂದುವುದಕ್ಕೆ ನಿರೀಕ್ಷಿತ ಅಥವಾ ನಿರ್ದಿಷ್ಟ ವಾದಂತಹ ಗುರಿಯನ್ನು ಹೊಂದುವುದು ಸೀಮಿತತ್ವ ಎಂದಾಯಿತು. ಹಾಗಾಗಿ ದಿಕ್ಕು ಗುರಿ ಇಲ್ಲದೇ ಚಲಿಸುವ ಅಲೆಮಾರಿ ಆಧ್ಯಾತ್ಮ ಹುಟ್ಟಿಕೊಂಡ. ಈಗ ಆದ ಮಹತ್ತರ ಬದಲಾವಣೆ ಏನೆಂದರೆ, ಆಗ ತಮ್ಮ ಗುರಿಗಾಗಿ ಅಲೆಯು ತ್ತಿದ್ದರು. ಆ ಅಲೆಯುವಿಕೆಯಲ್ಲಿ ಹುಡುಕುವಿಕೆ ಇತ್ತು, ಆದರೆ ನಂತರ ಬಂದ ಈ ಪರಿಕಲ್ಪನೆಯಲ್ಲಿ ಹುಡುಕು ವುದು ಒಂದು ಹಾಸ್ಯಾಸ್ಪದ. ಏನನ್ನು ಹುಡುಕು ವುದು, ಏನೂ ಇಲ್ಲದಿರುವಾಗ ಅಥವಾ ತಿಳಿಯದಿರುವಾಗ.

ಸಾಗಲಿ ದಾರಿಯು ಇಲ್ಲದೇ ಗುರಿಯು ಹೋಗುವೆ ನಾ ನೋಡುವೆ
ಬೇಕು ಎನ್ನದೆಯೇ ಬೇಡ ಎನ್ನದೆಯೇ ಒಪ್ಪುವೆ ನಾನಪ್ಪುವೆ.
ನನ್ನ ಚಕಿತಗೊಳಿಸಲು ಕಾದಿರುವ ಆ ಅಚ್ಚರಿಯನ್ನು ಮೆಚ್ಚುವೆ
ನಾ ಎದುರು ನೋಡದ, ಕಾದಿಹ ನನ್ನ ಉಡುಗೊರೆಯನ್ನು ನಾ ಪಡೆವೆ.
ದಾರಿ ತಪ್ಪುವ ಮಾತೇ ಇಲ್ಲ ಇಲ್ಲಿಗೆಂದು ನಾ ಹೊರಟವನಲ್ಲ
ಅವರಿವರನ್ನು ಕೇಳುವುದಿಲ್ಲ ಏನನ್ನೂ ನಾ ಹುಡುಕುತ ಇಲ್ಲ
ಈ ದಾರಿ ಹೋದಂತೆ ಹೋಗುವೆ, ಒಲವು ನಿಲ್ಲಿಸಲು ತಂಗುವೆ









ಅಲ್ಲೇ ನನ್ನ ಆನಂದ, ಆನಂದ ಆನಂದ.

ಈ ಪಯಣ ಪರಿಚಿತರಿಗಾಗಿ ಅಲ್ಲ ಎಲ್ಲೇ ಹೋದರೂ ನಮ್ಮವರೆಲ್ಲಾ
ಹೆದರಿಸುವಂತ ಅಪಾಯಗಳಿಲ್ಲ, ಎದುರಿಸುವಂತ ಮನವಿದೆಯಲ್ಲ.
ನಾ ಎಲ್ಲರಲ್ಲೂ ಕಾಣುವೆ ಒಲವ, ಒಲವಿನಲ್ಲಿ ಪಡೆವೆ ಬಲವ
ಇಲ್ಲೇ ನನ್ನ ಆನಂದ, ಆನಂದ, ಆನಂದ. ■



ದುರ್ಗೆಯೇ ಮಾಂಸಾಹಾರಿ

ಶಿಕ್ಷಣ ಇಲಾಖೆಯು ಶಾಲೆಗಳಿಗೆ ದಸರಾ ರಜೆ ಮೊಟಕುಗೊಳಿಸಿದ್ದರಿಂದ ಹಿಂದೂಗಳ ಹಾಗೂ ಕನ್ನಡಿಗರ ಭಾವನೆಗಳಿಗೆ ಧಕ್ಕೆ ಆಗಿದೆ ಎಂದು ಹಿಂದೂ ಮುಖಂಡರು ಬೊಬ್ಬೆ ಹಾಕಿದ್ದಾರೆ. ಆದರೆ ಶಾಲೆಯ ಮಕ್ಕಳಿಗೆ ರಜೆ ಕಡಿಮೆ ಮಾಡುವುದಕ್ಕೂ ಜನರ ಧಾರ್ಮಿಕ ಭಾವನೆಗಳಿಗೂ ಏನು ಸಂಬಂಧ? ಈ ವರ್ಷ ಹಲವು ಮುಷ್ಕರ ಹಾಗೂ ರಾಜ್ಯವ್ಯಾಪಿ ಬಂದ್‌ಗಳಿಂದಾಗಿ ಶಾಲೆ ಕಾಲೇಜುಗಳಲ್ಲಿ ಏಳಕ್ಕೂ ಹೆಚ್ಚು ದಿನಗಳ ಪಾಠದ ಕೊರತೆಯಾಗಿದೆ. ಈ ಕೊರತೆಯನ್ನು ತುಂಬಲು ಶಾಲಾಕಾಲೇಜುಗಳಿಗೆ ದಸರಾ ರಜೆ ಮೊದಲಿನ ಆರು ದಿನ ಕಡಿತಗೊಳಿಸಲಾಗಿದೆ. ಇದನ್ನು ಮಾಡಿರುವುದು ವಿದ್ಯಾರ್ಥಿಗಳ ಒಳಿತಿಗಾಗಿಯೇ, ಅಂದರೆ ಅವರ ಪಾಠಗಳೆಲ್ಲಾ ಪೂರ್ಣವಾಗಬೇಕು ಹಾಗೂ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಬೇಕೆಂಬ ಪ್ರಾಮಾಣಿಕ



ಉದ್ದೇಶದಿಂದಾಗಿಯೇ ಹೊರತು ಯಾವುದೇ ಧರ್ಮದವರಿಗೆ ಅನಾನುಕೂಲತೆ ಉಂಟುಮಾಡಬೇಕು ಎಂಬ ದುರುದ್ದೇಶದಿಂದ ಅಲ್ಲ. ಕೇವಲ ಮಹಾನವಮಿಯ ಒಂಬತ್ತನೇ ದಿನ ವಿದ್ಯಾರ್ಥಿಗಳು ಸರಸ್ವತಿ ಪೂಜೆ ಹಾಗೂ ರೈತರು, ಕಾರ್ಮಿಕರು, ವ್ಯಾಪಾರಿಗಳು ಆಯುಧ ಪೂಜೆ ಮಾಡುತ್ತಾರೆ. ಅದಕ್ಕೆ ಎರಡು ದಿನ ಮುಂಚಿನಿಂದಲೇ ರಜೆ ಇದೆ ತಾನೇ. ಯಾರಿಗೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನಿಜವಾದ ಕಾಳಜಿ ಇದೆಯೋ ಅವರು ರಜೆ ಕಡಿತಗೊಳಿಸಿರುವ ಬಗ್ಗೆ ಗಲಾಟೆ ಮಾಡುತ್ತಿಲ್ಲ, ಆದರೆ ಮಕ್ಕಳ ಜವಾಬ್ದಾರಿ ಇಲ್ಲದ ಸಂಘ ಪರಿವಾರದ ಫ್ರಿಂಜ್ ಗುಂಪಿನ ಪಿರ್ಕಿಗಳೇ ಶಾಲಾ ರಜೆ ಕಡಿತದ ಬಗ್ಗೆ ಆಕಾಶವೇ ಕಳಚಿಬಿದ್ದಂತೆ ಅರಚುತ್ತಿರುವುದು. ಹೆಜ್ಜೆ ಹೆಜ್ಜೆಗೂ ಜಾತಿ ಧರ್ಮ ನೋಡುವ ಸಂಘಪರಿವಾರದವರಿಗೆ ಎಲ್ಲೆಲ್ಲಿಯೂ ಧಾರ್ಮಿಕ ಭಾವನೆಗಳೇ ಕಾಣಿಸುವುದು ಸಹಜ. ಸಿದ್ದರಾಮಯ್ಯ ಸರಕಾರ ಏನೇ ಮಾಡಲಿ ಅದರಲ್ಲಿ ಧರ್ಮ ತೂರಿಸಿ ಹುಳುಕು ಹೆಕ್ಕುವುದೇ ಕೆಲವು ಕೊಕ್ಕೆ ಬುದ್ಧಿಯವರ ನಿತ್ಯ ಕಾಯಕ. ದಸರೆಗೆ ರಜೆ ಕಡಿತಗೊಳಿಸುವುದರಿಂದ ಹಿಂದೂಗಳ ಧಾರ್ಮಿಕ ಭಾವನೆಗೆ ಹೇಗೆ ನೋವಾಗುತ್ತದೆ? ಮಕ್ಕಳು ಶಾಲೆ-ಕಾಲೇಜಿಗೆ ಹೋದ ನಂತರ ಮನೆಯ ಹಿರಿಯರು ಅವರವರ ಮನೆಯಲ್ಲಿ ಮಹಾನವಮಿಯ ಒಂಬತ್ತು ದಿನವೂ ಪೂಜೆ ಮಾಡ ಬಹುದು ಅಥವಾ ಬೇಕಾದ ದೇವಸ್ಥಾನಕ್ಕೆ ಹೋಗಬಹುದು.

ಇನ್ನೊಂದು ವಿಚಿತ್ರವೆಂದರೆ ದಸರೆಯೇನೋ ನಾಡಹಬ್ಬ ಎಂಬ ಬಿರುದು ಗಳಿಸಿದೆ. ಆದರೆ ನಿಜದಲ್ಲಿ ಕನ್ನಡನಾಡಿನ ಹಿಂದೂಗಳಲ್ಲಿ ಎಷ್ಟು ಜನರು ತಮ್ಮ ಮನೆಯಲ್ಲಿ ನಿಜವಾಗಿ ಒಂಬತ್ತು ದಿನ ಮಹಾನವಮಿ ಆಚರಿಸುತ್ತಾರೆ? ನೂರರಲ್ಲಿ ಹತ್ತು ಕನ್ನಡಿಗರೂ ಮನೆಯಲ್ಲಿ ಮಹಾನವಮಿ ಆಚರಿಸುವುದಿಲ್ಲ!

ಕರಾವಳಿಯಲ್ಲಿ ಕೇವಲ ದುರ್ಗಾ ದೇವಸ್ಥಾನಗಳಲ್ಲಿ ಮಹಾನವಮಿಯ ವಿಶೇಷ ಪೂಜೆ ಮತ್ತು ಜಾತ್ರೆ ಇರುತ್ತದೆ. ಇಲ್ಲಿಯ ಜನರು ವೈಯಕ್ತಿಕವಾಗಿ ತಮ್ಮ ಮನೆಯಲ್ಲಿ ಮಹಾನವಮಿ ಪೂಜೆ ಮಾಡುವುದಿಲ್ಲ. ಕರಾವಳಿಯ ವೈಷ್ಣವ ದೇವಸ್ಥಾನ ಅಥವಾ ಮಠಗಳಲ್ಲಿ ಮಹಾನವಮಿಗೆ ಯಾವುದೇ ವಿಶೇಷ ಪೂಜೆ ಅಥವಾ ಜಾತ್ರೆ ಇರುವುದಿಲ್ಲ. ಹಾಗಿರುವಾಗ ಮಹಾನವಮಿ ರಜೆ ಈಗಿನ ಒಂದು ವರ್ಷದ ಮಟ್ಟಿಗೆ ಆರು ದಿನ ಕಡಿತಗೊಳಿಸಿದ ಮಾತ್ರಕ್ಕೆ ಕನ್ನಡಿಗರ ಭಾವನೆಗೆ ಧಕ್ಕೆ ಆಗುತ್ತದೆ ಎನ್ನುವುದಕ್ಕೆ ಅರ್ಥವಿಲ್ಲ. ಉಡುಪಿ-ದ.ಕ ಜಿಲ್ಲೆಯವರಂತೂ ಉಡುಪಿಯ ಮಠದ ಒಬ್ಬನೇ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಪರ್ಯಾಯವನ್ನು ನಾಡಹಬ್ಬ ಎಂದು ದೊಡ್ಡದಾಗಿ ಕರೆದು ಸಮಸ್ತ ಕನ್ನಡಿಗರನ್ನು ಅವಮಾನಿಸುವಾಗ ಯಾರಿಗೂ ಸಮಸ್ತ ಕನ್ನಡಿಗರ ಭಾವನೆಗಳ ಬಗ್ಗೆ ನೆನಪೇ ಆಗಲಿಲ್ಲವಲ್ಲ ಯಾಕೆ?

ಇದಕ್ಕಿಂತ ಮುಖ್ಯವಾದ ವಿಷಯವೆಂದರೆ ಹತ್ತು ದಿನ ದಸರೆಯನ್ನು ವಿಜೃಂಭಣೆಯಿಂದ ಆಚರಿಸುವ ಬಂಗಾಲದಲ್ಲೂ ಎಲ್ಲಾ ಹತ್ತು ದಿನವೂ ಜನರು ಮೀನು ಮಾಂಸ ತಿನ್ನುತ್ತಾರೆ. ಬಂಗಾಲಿಗಳೇ ಹೇಳುತ್ತಾರೆ ದುರ್ಗಾಮಾತಾ ಮಾಂಸಾಹಾರಿ ದೇವರಾದುದರಿಂದ ಈ ಹತ್ತು ದಿನ ದೇವರಿಗೆ ಮಾಂಸಾಹಾರದ ನೈವೇದ್ಯ ಇಟ್ಟು ಭಕ್ತರೂ ಆ ಮಾಂಸಾಹಾರದ ಪ್ರಸಾದ ಸೇವಿಸಿದರೆ ಮಾತ್ರ ದುರ್ಗಾದೇವಿಗೆ ಹೆಚ್ಚು ಸಂತೃಪ್ತಿ ಆಗುತ್ತದಂತೆ. ಆದರೆ ನಮ್ಮ ಕರ್ನಾಟಕದಲ್ಲಿ ಮಾತ್ರ ಯಾವುದೇ ಹಿಂದೂ ಹಬ್ಬ ಬಂದಕೂಡಲೇ ಆ ದಿನ ಮಾಂಸಾಹಾರ ವರ್ಜ್ಯ ಎಂಬ 'ಡಿಫಾಲ್ಟ್ ಮೈಂಡ್‌ಸೆಟ್' ಅಚ್ಚೊತ್ತಿ ಬಿಟ್ಟಿದೆ. ಹಿಂದೆಲ್ಲ ಕರಾವಳಿಯ ಶೂದ್ರ ಜಾತಿಗಳವರು ಎಲ್ಲಾ ಹಿಂದೂ ಹಬ್ಬಗಳಂದು ರಾತ್ರಿಯ ಊಟಕ್ಕೆ ಕಡ್ಡಾಯವಾಗಿ ಮೀನು ಪದಾರ್ಥ ಮಾಡಿ ಹಿರಿಯರಿಗೆ 'ಮಿಸೆಲ್' ಇಟ್ಟು ನಂತರ ಮನೆಯ ಸದಸ್ಯರೆಲ್ಲಾ ಆ ಮೀನಿನ ಊಟವನ್ನೇ ಮಾಡುತ್ತಿದ್ದರು. ಆದರೂ ಇತ್ತೀಚಿನ ಕೆಲವರ್ಷಗಳಿಂದ ವೈದಿಕ ಪ್ರಭಾವದಿಂದ ಶೂದ್ರ ಜಾತಿಗಳವರೂ ಮಹಾನವಮಿಯ ಒಂಬತ್ತು ದಿನವೂ ಸಸ್ಯಾಹಾರಿಯಾಗಿದ್ದು ಕೇವಲ ದಸರೆಯ ದಿನ ಮಾತ್ರ ಮಾಂಸಾಹಾರಕ್ಕೆ ತೊಳದಂತೆ ಮುಗಿಬೀಳುತ್ತಾರೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಕಾರಣದಿಂದಾಗಿ ನಮ್ಮ ಆಹಾರ ಪದ್ಧತಿಯ ವಿಷಯದಲ್ಲಿ ನಾವು ಶೂದ್ರರು ಹಿಮ್ಮುಖವಾಗಿ ನಡೆಯುವ ವಿಚಿತ್ರ ಮನಸ್ಥಿತಿ ಹೆಚ್ಚು ಹೆಚ್ಚು ಆಳವಾಗುತ್ತಿರುವುದು ಖೇದಕರ. ಅದರಲ್ಲೂ ಹೆಂಗಸರಲ್ಲಿ ಈ ನವ-ವೈದಿಕ ಮನಸ್ಥಿತಿ ವಾಟ್ಸಪ್ ಮೂಲಕ ಸಾಂಕ್ರಾಮಿಕವಾಗಿ ಹರಡುತ್ತಿದೆ. ಆಧುನಿಕ ತಂತ್ರಜ್ಞಾನಗಳೂ ಮೌಢ್ಯ ಹರಡುವಲ್ಲಿ ಬಹಳ ಸಹಾಯಕವಾಗಿವೆ. ಉದಾಹರಣೆಗೆ ಕೆಲವು ದಡ್ಡ ಹೆಂಗಸರು ತಾವು ಆಚರಿಸುವ ಹರಕೆ ಪೂಜೆ ಹಬ್ಬ ಹಾಗೂ ಇಂದು ಪಠಿಸಿದ ಮಂತ್ರದ ವಿವರಗಳನ್ನೂ ದಿನದಿನಕ್ಕೆ ವಾಟ್ಸಪ್‌ನಲ್ಲಿ ತುರುಕಿ ಬಿಡುತ್ತಾರೆ. ಇದನ್ನು ಓದಿದ ಇತರ ಹೆಂಗಸರೂ ತಾವೇನೂ ಕಮ್ಮಿ ಇಲ್ಲ ಎಂದು ತೋರಿಸಲು ಅವರೂ ನವ-ಬ್ರಾಹ್ಮಣರಾಗಿ ಈ ಎಲ್ಲಾ ಮೌಢ್ಯಗಳನ್ನು ಅನುಕರಿಸಿ ವಾಟ್ಸಪ್ ತುಂಬಿಸುತ್ತಾರೆ (ಹರೆಕೃಷ್ಣ ಗುಂಪಿನ ವಾಟ್ಸ್‌ಆಪ್‌ಗೆ ಸೇರಿದವರಂತೂ ಮೌಢ್ಯದ ಗುಡಾಣವಾಗುತ್ತಾರೆ).

ಕಡಲಪುತ್ರ ಮೀನುಗಾರರ ಇಡೀ ಜೀವನವೇ ಈ ಮೀನಿನ ವ್ಯಾಪಾರದ ಮೇಲೆ ಅವಲಂಬಿತವಾಗಿರುವಾಗ ಮಹಾನವಮಿಯ ಒಂಬತ್ತು ದಿನ ಮೀನಿನ ವ್ಯಾಪಾರ ಬಂದ್ ಮಾಡಿ ಬಡ ಮೀನುಗಾರರ ಮಕ್ಕಳನ್ನು ಉಪವಾಸ ಕೆಡುವುವುದು ಯಾವ ದೇವರಿಗೆ ಇಷ್ಟವಾಗುತ್ತದೆ? ಹಿಂದೂ ಪುರಾಣಗಳಲ್ಲಿಯೇ ಹೇಳಿರುವಂತೆ ದುರ್ಗಾ ದೇವರೇ ಸ್ವತಃ ಮಾಂಸಾಹಾರಿ ಆಗಿರುವಾಗ ತನ್ನ ಹೆಸರಲ್ಲಿ ತನ್ನದೇ ಬಡಭಕ್ತರ ಮಕ್ಕಳು ಉಪವಾಸ ಬೀಳುವುದು ಆ ಮಾಂಸಾಹಾರಿ ದೇವರಿಗೆ ಇಷ್ಟವಾಗಲು ಹೇಗೆ ಸಾಧ್ಯ? ದೇವರು ಧರ್ಮದ ವಿಷಯ ಬಂದಾಗಲೆಲ್ಲಾ ನಮ್ಮ ತರ್ಕ ಶಕ್ತಿ ಯಾಕೆ ಒಮ್ಮೆಲೇ ಕೈಕೊಡುತ್ತದೆ ಹಾಗೂ ಸ್ವಂತ ಬುದ್ಧಿಗೆ ವೈರಸ್ ಹಿಡಿಯುತ್ತದೆ?

- ಗಿರೀಶ್ ಟಿ ಶೆಟ್ಟಿ ಮುಲ್ಕಿ

ಮೋದಿಯದ್ದು ಹೆಸರು-ನುಡಿ-ಶಬ್ದಗಳ ಸರ್ಕಸ್ಸು, ಮಾತಿನ ಮಸಲತ್ತು

ನವದೆಹಲಿಯಲ್ಲಿ ಭಾರತದ ಪ್ರಧಾನಿ ನಿವಾಸ ಇರುವ ರೇಸ್‌ಕೋರ್ಸ್ ರೋಡಿನ ಹೆಸರು ಇನ್ನು ಮುಂದೆ 'ಲೋಕ ಕಲ್ಯಾಣ ಮಾರ್ಗ' ಆಗಲಿದೆ. ರೇಸ್ ಕೋರ್ಸ್ ರೋಡ್ ಎಂಬುದು ಬ್ರಿಟಿಷರು ಇಟ್ಟ ಹೆಸರು, ಕಾರಣ ಆ ರಸ್ತೆಯ ಕೊನೆಗೆ ಮೊದಲು ಕುದುರೆ ರೇಸಿನ ಮೈದಾನವಿತ್ತಂತೆ. ಬ್ರಿಟಿಷರ ಕುದುರೆ ಜೂಜಾಟ ನೆನಪಿಸುವ ಹೆಸರಿನ ಬದಲು ಭಾರತದ ಪ್ರಧಾನಿಯ ನಿವಾಸ ಇರುವ ರಸ್ತೆಗಾದರೂ ಶುದ್ಧ ಭಾರತೀಯ ಹೆಸರು ಇಡಬೇಕೆಂದು ಬಿಜೆಪಿಯವರು ಒತ್ತಾಯಿಸುತ್ತಿದ್ದು ಕೊನೆಗೆ ಏಕಾತ್ಮಾ ಮಾರ್ಗ ಎಂಬ ಹೆಸರನ್ನು ಬಿಜೆಪಿ ಸೂಚಿಸಿತು. ಆದರೆ ಕೇಜ್ರಿವಾಲ್ ಮತ್ತು ದಿಲ್ಲಿ ಮಹಾನಗರ ಪಾಲಿಕೆ ಸಂಸ್ಕೃತ ಹೆಸರಿನ ಬದಲು ಎಲ್ಲಾ ಭಾಷೆಗೆ ಹೊಂದುವ 'ಲೋಕ ಕಲ್ಯಾಣ ಮಾರ್ಗ' ಎಂಬ ಹೆಸರನ್ನು ಅಂಗೀಕರಿಸಿತು.

ಅಭಿವೃದ್ಧಿಯ ಹೆಸರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನಂತರ ನಿಜವಾದ ಅಭಿವೃದ್ಧಿ ಮಾಡುವ ಬದಲು ಕೇವಲ ಹಿಂದಿನ ಸರಕಾರದ ಯೋಜನೆಗಳ ಹೆಸರುಗಳನ್ನು ಮಾತ್ರ ಬದಲಿಸಿ ಅದು ತನ್ನ ಹೊಸ ಯೋಜನೆ ಎನ್ನುವ ರೀತಿಯಲ್ಲಿ ಕೋಟ್ಯಾಂತರ ರೂಪಾಯಿಯ ಜಾಹೀರಾತು ಕೊಟ್ಟು ಕೇವಲ ತನ್ನ ಚೇಲಾ ಮಾಧ್ಯಮಗಳಿಗೆ ಭಯಂಕರ ಲಾಭ ಮಾಡಿಕೊಟ್ಟಿದ್ದು ಮಾತ್ರವೇ ವಿನಹ ನಿಜವಾದ ಅಭಿವೃದ್ಧಿ ಮಾಡಲಿಲ್ಲ. ರಸ್ತೆ ಹೆಸರು, ಟ್ರೇನುಗಳ ಹೆಸರು, ನಿಗಮ-ಇಲಾಖೆ-ಖಾತೆಗಳ ಹೆಸರು, ಹಿಂದಿನ ಸರಕಾರದ ಯೋಜನೆಗಳ ಹೆಸರು, ಇವನ್ನು ಮಾತ್ರ ಬದಲಾವಣೆ ಮಾಡಿ ಇವೆಲ್ಲಾ ತಮ್ಮದೇ ಹೊಸ ಯೋಜನೆಗಳು ಎನ್ನುವಂತೆ ಭಯಂಕರ ಜಾಹೀರಾತು ಕೊಟ್ಟು ಇಡೀ ದೇಶವನ್ನು ಮಂಗ ಮಾಡಿದ್ದಷ್ಟೇ ಮೋದಿ ಸರಕಾರದ ಸಾಧನೆ. ಈ ಶಬ್ದಗಳ ಕಸರತ್ತು ಎಷ್ಟೊಂದು ಬಾಲಿಶವೆಂದರೆ 'ಆದಿವಾಸಿ' ಎಂಬ ಹೆಸರನ್ನು ಬದಲಿಸಿ 'ವನವಾಸಿ' ಎಂಬ ಹೆಸರನ್ನು ಇಟ್ಟು ಬುಡಕಟ್ಟು ಜನರಿಗೆ ಅವಮಾನ ಮಾಡಲಾಗಿದೆ. ಮೊಟ್ಟ ಮೊದಲು ಬುಡಕಟ್ಟು ಜನಾಂಗದವರಿಗೆ ಆದಿವಾಸಿ ಎಂಬ ಹೆಸರನ್ನು ಸೂಚಿಸಿದ ಡಾ.ಅಂಬೇಡ್ಕರರಿಗೂ ಈ ಮೂಲಕ ಅವಮಾನ ಮಾಡಲಾಗಿದೆ. ದಿಲ್ಲಿಗೆ ತಾಗಿರುವ ಹರ್ಯಾಣಾದ ಗುಡ್ಗಾಂವ್ ನಗರದ ಹೆಸರನ್ನು ಅಲ್ಲಿಯ ಬಿಜೆಪಿ ಸರಕಾರ ಕೆಳಜಾತಿಯ ಏಕಲವ್ಯನಿಗೆ ದ್ರೋಹ ಬಗೆದ ಬ್ರಾಹ್ಮಣ ದ್ರೋಣಾಚಾರ್ಯನ ನೆನಪಲ್ಲಿ 'ಗುರುಗ್ರಾಮ' ಎಂದು ಬದಲಿಸಿತು, ಜನರ ವಿರೋಧವನ್ನು ಲೆಕ್ಕಿಸಲೇ ಇಲ್ಲ.

ಎಲ್ಲೆಡೆಯೂ ಕೇವಲ ಸಂಸ್ಕೃತ ಅಥವಾ ಹಿಂದಿ ಭಾಷೆ ತುರುಕಿ ಇಂತಹ ಹಿಂದಿ-ಸಂಸ್ಕೃತ ಹೆಸರಿನ ಹೇರುವಿಕೆಯನ್ನೇ ದೇಶದ ಅಭಿವೃದ್ಧಿ ಎಂದು ಮೋದಿ ಗ್ಯಾಂಗ್ ತಪ್ಪಾಗಿ ತಿಳಿದುಕೊಂಡಿದೆ. ದೇವರು ಒಂದೇ ಎಂದು ಹೇಳುತ್ತಾ ದೇವರಿಗೆ ಸಹಸ್ರ ಹೆಸರು ಇಟ್ಟು ನೂರಾರು ರೂಪ ಕೊಟ್ಟು ಸಾವಿರಾರು ಅರ್ಥವಿಹೀನ ಮಂತ್ರ ಪೂಜೆ ಪುರಾಣಗಳನ್ನು ಹೊಸೆದು ಜನರನ್ನು ಸಾವಿರಾರು ವರ್ಷಗಳಿಂದ ಮೋಸ ಮಾಡಿದ ಶಬ್ದ-ವೀರರ ವಂಶಜರೇ ಇಂದು ನಮ್ಮನ್ನು ಆಳುತ್ತಿರುವುದು. ಅದಕ್ಕಾಗಿಯೇ ಎಲ್ಲೆಲ್ಲೂ ಕೇವಲ ಹೆಸರು-ನುಡಿ-ಶಬ್ದಗಳ ಸರ್ಕಸ್ಸು ಹಾಗೂ ಮಾತಿನ ಮಸಲತ್ತು ನಡೆಯುತ್ತಿದೆ. ನೈಜ ಅಭಿವೃದ್ಧಿ ಅಥವಾ ಮೌಲಿಕ ಬದಲಾವಣೆ ಎಲ್ಲಿಯೂ ಕಾಣುತ್ತಿಲ್ಲ.

- ಕ್ಷಿತಿಜ್ ಕೆ ಹೆಗ್ಡೆ ಮಂಗಳೂರು

ಮಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಸಹಿತ ಸಂಪೂರ್ಣ ಆಡಳಿತ ಸಂಘಿಗಳ ಕೈಯಲ್ಲಿ ಇರುವುದು ಗುಟ್ಟಾಗಿಯೇನೂ ಉಳಿದಿಲ್ಲ. ನಿಯಮದ ಪ್ರಕಾರ ಭಾರತದ ಎಲ್ಲಾ ವಿವಿ ಕ್ಯಾಂಪಸ್ಸಿನಲ್ಲಿ ಧಾರ್ಮಿಕ ಕಾರ್ಯಕ್ರ... ನಿಷೇಧವಿದ್ದರೂ, ಕಳೆದ ವರ್ಷ ಮೊದಲ ಬಾರಿಗೆ ಮಂ... ವಿವಿ ಆವರಣದಲ್ಲಿಯೇ ಗಣಪತಿ ಮೂರ್ತಿ ಸ್ಥಾಪಿಸಿದ್ದು ಆದರ ಉದ್ಘಾಟನೆಗೆ ಸ್ಥಳೀಯ ಬಿಜೆಪಿ ಸಂಸದ ಕಟೀಲನನ್ನು ಕರೆದದ್ದು ಈ ವಿವಿ ಕೇಸರಿಮಯವಾಗಿದೆ ಎಂ... ಸಾಕ್ಷಿಯಾಗಿತ್ತು, ಈ ವರ್ಷವೂ ಮತ್ತೆ ಗಣಪತಿ ಸ್ಥಾಪನೆಯ... ಅಷ್ಟೇ ಅಲ್ಲ ಅಮಿತ್ ಷಾನ ತಿರಂಗಾ ಯಾತ್ರೆಯ ಸಮಾ... ಮಂಗಳೂರು ವಿವಿ ಕ್ಯಾಂಪಸ್ಸಿನಲ್ಲಿಯೇ ಚೆ... ಆಯೋಜಿಸಿದ್ದರು. ಪ್ರಗತಿಪರ ವಿದ್ಯಾರ್ಥಿಗಳ ಗುಂಪು ಪ್ರತಿಭಟಿಸಿದರೂ ವಿವಿ ಆಡಳಿತ ಇದನ್ನು ಕೇರ್ ಮಾ... ಬುಲ್ ಡೋಜರಿನಂತೆ ಮುಂದುವರಿಯಿತು.

ಇತ್ತೀಚೆಗೆ ಅದೇ ವಿವಿ ಕ್ಯಾಂಪಸ್ಸಿನಲ್ಲಿ ಒಬ್ಬ ಸ್ನಾತ... ವಿದ್ಯಾರ್ಥಿ ಸಂತೋಷ್ ಆಚಾರ್ಯ ಎಂಬವನು ಹುಡು... ಟಾಯ್ಲೆಟ್ ಗೋಡೆಗೆ ತೂತು ಕೊರೆದು ಮೊಬೈಲ್ ಕ... ತಾಗಿಸಿ ಸಿಕ್ಕಿಬಿದ್ದ ಪೊಲೀಸರು ಮೊದಲು ಅವನು ಮಾ... ಅಸ್ವಸ್ಥ ಎಂದರು. ಆದರೆ ಕಾಲೇಜ್ ನಿಯಮದ ... ಮಾನಸಿಕ ಅಸ್ವಸ್ಥರನ್ನು ಕಾಲೇಜಿನಿಂದ ತೆಗೆದುಹಾಕಿ ... ಚಿಕಿತ್ಸಾಲಯಕ್ಕೆ ರೆಫರ್ ಮಾಡಲೇ ಬೇಕು ಎಂಬ ನಿಯ... ಅದಕ್ಕಾಗಿ ಆ ಸಂತೋಷನಿಗೆ ದುಃಖ ಆಗದಂತೆ ಅ... ತಡೆಯಲು ತಂತ್ರ ರಚಿಸಿ, "ಅವನು ಹುಡುಗಾಟಕ್ಕೆ... ಹಾಗೆ ಮಾಡಿದ್ದು. ಒಂದು ಗಯ್ಯಾಳಿ ಹುಡುಗಿಯ... ಬಿಟ್ ಕಟ್ಟಿ ಎಲ್ಲರ ಮನೆ ದೋಸೆ ತೂತು ಎಂಬಂತೆ ... ಚಡ್ಡಿಗೂ ತೂತು ಎಂದು ಸಾಬೀತು ಮಾಡುವ... ಲೇಡೀಸ್ ಟಾಯ್ಲೆಟ್ಟಿಗೆ ಮೊಬೈಲ್ ಕ್ಯಾಮರಾ ತಾಗಿಸಿದ್ದ... ಮತ್ತೆ ಯಾವ ಕೆಟ್ಟ ಭಾವನೆಯೂ ಅವನ ಮನದಲ್ಲಿ ... ಅವನು ಬುದ್ಧಿವಂತ ರ‍್ಯಾಂಕ್ (Rank) ವಿದ್ಯಾರ್ಥಿ" ... ಚೆಡ್ಡಿ ಪತ್ರಿಕೆ ಉದಯವಾಣಿ ಮುಖಾಂತರ ... ಮಾಡಲಾಯಿತು.

ಈ ಪ್ರಚಾರಕ್ಕೆಲ್ಲಾ ಕಾರಣ ಇಷ್ಟೇ: ಆ ಸಂ... ಆಚಾರ್ಯ ಬ್ರಾಹ್ಮಣ ಮಾಣಿ ಹಾಗೂ ಎಬಿವಿಪಿ... ಜತೆಗೆ ಆರ್‌ಎಸ್‌ಎಸ್ ಲಾಠೀಧಾರಿ ಬೇರೆ. ನಂ... ಮಾಣಿಯೇ ಗೆಳೆಯರಿಗೆ ಹೇಳಿದಂತೆ, ಆತನಿಗೆ ... ಬೆಳಗ್ಗೆ ಆರ್‌ಎಸ್‌ಎಸ್ ಕವಾಯತಿನಲ್ಲಿ ಕೇವಲ ದೊಗ... ಚೆಡ್ಡಿಗಳನ್ನೇ ನೋಡಿ ನೋಡಿ ಮನಸ್ಸು ಹಳಸಿ ಹೋ... ಕವಾಯತು ಮಾಡುತ್ತಾ ಬಗ್ಗಿದಾಗ ನೆಲದಲ್ಲಿ ಕುಳಿತುಕೊ... ಎಲ್ಲೆಲ್ಲೂ ಅದನ್ನೇ ನೋಡಿ ನೋಡಿ ಮನಸ್ಸು ... ಹೋಗಿತ್ತಂತೆ; ಆದುದರಿಂದ ಸ್ವಲ್ಪ ಹೊಸತನಕ್ಕಾಗಿ ಬಣ್ಣ... ಚಡ್ಡಿ ನೋಡಲು ವಿವಿ ಟಾಯ್ಲೆಟ್ಟಿನಲ್ಲಿ ಕ್ಯಾಮರಾ ಇ...

ಅವನು ಸ್ವಲ್ಪ ದಿನ ತಾಳಿದ್ದರೆ ಇಷ್ಟೆಲ್ಲಾ ರಾದ್ಧಾಂತ ... ಇರಲಿಲ್ಲ ಪಾಪ. ಕಾರಣ ಆರ್‌ಎಸ್‌ಎಸ್ ತನ್ನ ಗ... ಬದಲಿಸಿ ಫುಲ್ ಪ್ಯಾಂಟ್ ಜಾರಿಗೆ ತಂದಿದೆ. ಈ... ಪ್ಯಾಂಟಿನಲ್ಲಿ ಬಗ್ಗಿದಾಗ ಹಿಂದಿರುವವರಿಗೆ ಏನೂ ಕಾಣ...


- ಅಭಿಷೇಕ್ ಪಡಿವಾಲ...

ಪಾಕಿಸ್ತಾನದ ಭಯೋತ್ಪಾದಕರ ದಾಳಿಯಲ್ಲಿ ಕಾ... ಉರಿಯಲ್ಲಿ ನಮ್ಮ 18 ಯೋಧರ ಮೃತ್ಯುವಾದ ... ಎಲ್ಲರೂ ಸಮರೋತ್ಸಾಹ ತೋರುತ್ತಾ ಭಾರತವು ... ಕಾರ್ಯಾಚರಣೆಯ ಮೂಲಕವೇ ಪಾಕಿಗೆ ಪ್ರತ್ಯುತ್ತರ ಕೊ... ಮುಯ್ಯಿಗೆ ಮುಯ್ಯಿ ತೀರಿಸಬೇಕೆಂದು ಬೊಬ್ಬಿರಿಯು... ಆಕ್ರಮಿತ ಕಾಶ್ಮೀರದ ಉಗ್ರರ ಕ್ಯಾಂಪ್‌ಗಳ ಮೇಲೆ ಭಾ... ಸೇನೆ ಏಕಪಕ್ಷೀಯ ದಾಳಿ ಮಾಡಬೇಕೆಂದು ಮಾಧ್ಯ... ಅನೇಕರು ಅರಚುತ್ತಿದ್ದಾರೆ. ಆದರೆ ಹೀಗೆ ಸಮರ... ತೋರಿಸುತ್ತಿರುವ ನೀವೇ ಗಡಿಗೆ ಹೋಗಿ ಯೋಧರಿಗೆ ... ಮಾಡಲು ತಯಾರಿದ್ದೀರಾ ಎಂದು ಕೇಳಿದರೆ ಅವ... ಮುದುರಿಕೊಂಡು ಹೋಗುತ್ತಾರೆ. ನಿಜವಾಗಿ...



1947ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಿದ್ದರೆ ಭಾರತ ಪಾಕ್‌ಗಿಂತಲೂ ಕೆಟ್ಟದಾಗಿರು...

"ಭಾರತ ಮತ್ತು ಪಾಕಿಸ್ತಾನಗಳಿಗೆ ಸ್ವಾತಂತ್ರ್ಯ ಒಂದೇ ಸಮಯದಲ್ಲಿ ಸಿಕ್ಕಿತು. ಆದರೆ ಇಂದು ಭಾರತ ಇಡೀ ಜಗತ್ತಿಗೆ ಸಾಫ್ಟ್‌ವೇರ್ ರಫ್ತು ಮಾಡುತ್ತಿದ್ದರೆ ಪಾಕಿಸ್ತಾನ ಭಯೋತ್ಪಾದನೆ ರಫ್ತು ಮಾಡುತ್ತಿದೆ. ಅದು ಹೀಗೇಕೆ ಆಯಿತು ಎಂದು ಪಾಕಿಸ್ತಾನದ ಜನ ಜಿಜ್ಞಾಸೆ ಮಾಡಬೇಕು" ಎಂದು ನರೇಂದ್ರ ಮೋದಿ ಮೊನ್ನೆ ಕೇರಳದ ಕೋಯಿಕೋಡ್‌ನಲ್ಲಿ ಹೇಳಿದ್ದಾರೆ. ಮೋದಿ ಹೇಳಿದಂತೆ ಭಾರತವು ಎಲ್ಲಾ ಕ್ಷೇತ್ರಗಳಲ್ಲೂ ಪಾಕಿಸ್ತಾನಕ್ಕಿಂತ ತುಂಬಾ ಮುಂದಿರುವುದು ನಿಜ. ಆದರೆ ಇದೆಲ್ಲಾ ಸಾಧ್ಯವಾಗಿದ್ದು ಕಾಂಗ್ರೆಸ್ ಹಾಗೂ ಬೇರೆ ಪಕ್ಷಗಳು 65 ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದುದರಿಂದ. ನೆಹರೂ ಕಾಲದಲ್ಲಿ ಔದ್ಯಮೀಕರಣಕ್ಕೆ ಹಾಗೂ ಬೃಹತ್ ನೀರಾವರಿ ಯೋಜನೆಗಳಿಗೆ ಅಡಿಪಾಯ ಹಾಕಲಾಯಿತು. ಹೋಮಿ ಬಾಬಾ ಮತ್ತು ವಿಕ್ರಮ್ ಸಾರಾಭಾಯ್ ಇಂತಹ ಮೇಧಾವಿಗಳನ್ನು ನೆಹರೂ ಭಾರತಕ್ಕೆ ವಾಪಸು ಕರೆಸಿಕೊಂಡು ವೈಜ್ಞಾನಿಕ ಅಭಿವೃದ್ಧಿಗೆ ಇಂಬು ಕೊಟ್ಟರು. ಲಾಲ್ ಬಹದ್ದೂರ್ ಶಾಸ್ತ್ರಿ ಕಾಲದಲ್ಲಿ ಹಸಿರುಕ್ರಾಂತಿಗೆ ಅಡಿಪಾಯ ಇಡಲಾಯಿತು, ಅದನ್ನು ಇಂದಿರಾ ಗಾಂಧಿ ಮುಂದುವರಿಸಿದರು. ಜತೆಗೆ ಕ್ಷೀರ ಕ್ರಾಂತಿ ಆಯಿತು. ರಾಜೀವ್ ಗಾಂಧಿ ಕಾಲದಲ್ಲಿ ಸ್ಯಾಮ್ ಪಿತ್ರೋಡರಂತಹ ವಿಶ್ವ ಮಾನ್ಯ ತಂತ್ರಜ್ಞರನ್ನು ಭಾರತಕ್ಕೆ ಕರೆಸಿ ಸಂಪರ್ಕ ಕ್ರಾಂತಿ ಹಾಗೂ ತಂತ್ರಜ್ಞಾನ ಕ್ರಾಂತಿಗೆ ಅಡಿಪಾಯ




ಹಾಕಲಾಯಿತು. ಅದುವೇ ಮುಂದೆ ನರಸಿಂಹ ರಾವ್ ಹಾಗೂ ಮನಮೋಹನ್ ಸಿಂಗ್ ಕಾಲದಲ್ಲಿ ಭಾರತ ಸಾಫ್ಟ್‌ವೇರ್ ರಫ್ತಿನಲ್ಲಿ ದಾಪುಗಾಲಿಡಲು ಕಾರಣವಾಯಿತು.

ಹೀಗೆ ಕಾಂಗ್ರೆಸ್ ಸರಕಾರಗಳು ಮಾಡಿರುವ ಸಾಧನೆಯಿಂದಾಗಿಯೇ ಇಂದು ಭಾರತವು ಸಾಫ್ಟ್‌ವೇರ್ ರಫ್ತು ಮಾಡುತ್ತಿದೆ ಎಂದು ಮೋದಿ ಹೆಮ್ಮೆಯಿಂದ ಹೇಳಿಕೊಂಡು ಟಿಕ್ಕಿ ಭಕ್ತರಿಂದ ಭಯಂಕರ ಚಪ್ಪಾಳೆ ಗಿಟ್ಟಿಸಲು ಸಾಧ್ಯವಾಯಿತು.

ಆದರೆ ಒಂದು ವೇಳೆ ಸ್ವಾತಂತ್ರ್ಯ ಸಿಕ್ಕ ಬೆನ್ನಿಗೇ ಸಂಘ ಪರಿವಾರದ ಕೈಗೊಂಬೆಯಾಗಿರುವ ಬಿಜೆಪಿಯಂತಹ ... ಪಕ್ಷವೇನಾದರೂ 60 ವರ್ಷ ಆಡಳಿತ ನಡೆಸುತ್ತಿದ್ದ... ದೇಶ ಇಂದು ಪಾಕಿಸ್ತಾನಕ್ಕಿಂತ ಘೋರವಾಗಿರುತ್ತಿತ್ತು. ಸಾಮಾಜಿಕ ಅಸಮಾನತೆ ಹಾಗೂ ಜಾತಿ ಶೋಷಣೆಯಿಂ... ದೇಶದಲ್ಲಿ ಭಯಂಕರ ಅರಾಜಕತೆ ತುಂಬಿರುತ್ತಿತ್ತು. ... ದುರುಪಯೋಗಮಾಡಿ ಕೊಂಡು ಅಂತರರಾಷ್ಟ್ರೀಯ ... ಹಿತಾಸಕ್ತಿಗಳು ಭಾರತವನ್ನು ಹತ್ತಾರು ವಿಭಜನೆ ಮಾಡಿ... ಎಂಬ ಒಂದು ಅಖಂಡ ದೇಶವೇ ಇರದಂತೆ ಮಾಡು... ಖಂಡಿತ. ಪ್ರಬಲ ಸೋವಿಯತ್ ರಶಿಯಾವೇ ... ಆಯಿತೆಂದ ಮೇಲೆ ಭಾರತ ವಿಭಜನೆ ಆಗದಿರುತ್ತಿ... ಸಂಘಿಗಳ ದೇಶ ಭಕ್ತ ಭಾರತದ ಹತ್ತು ತುಂಡಿನಲ್ಲಿ... ಒಂದು ತುಂಡಿಗಾಗಿ ಮಿಡಿಯುತ್ತಿತ್ತು ಎಂದು ಕಲ್ಪಿ... ಅಸಾಧ್ಯ, ಯಾಕೆಂದರೆ ಈ ತುಂಡುಗಳು ತಮ್ಮ... ಹೊಡೆದಾಡಿಕೊಳ್ಳುತ್ತಿದ್ದವು. ಭಾರತ ಏನನ್ನೂ ರಫ್ತು ... ಕೇವಲ ಆಹಾರ ಧಾನ್ಯ ಆಮದು ಮಾಡಿ ಇಡೀ ... ಭಾರವಾಗಿರುತ್ತಿತ್ತು, ಸೊಮಾಲಿಯಾ ಕ್ಕಿಂತಲೂ ... ಕಡೆಯಾಗಿರುತ್ತಿದ್ದವು.

- ಜೆ. ರವಿಕಿರಣ, ಮ...



...ರೋದಾತ್ಮಕ ಹೇಳಿಕೆ ಕೊಡುವವರು ಅಥವಾ ಮಾಧ್ಯಮಗಳಲ್ಲಿ ...ಬ್ಬರಿಯುವವರು ಎಂದಾದರೂ ತಮ್ಮ ತವರಲ್ಲಿ ಇರುವ ...ೋಧರ ಕುಟುಂಬದ ಅಭಿಪ್ರಾಯ ಕೇಳಿದ್ದಾರೆಯೇ?

ನಮ್ಮ ಊರಿನಲ್ಲಿ ಸುತ್ತಮುತ್ತ ಇರುವ ಕೊಡವ ಯೋಧರ ...ುಟುಂಬದಲ್ಲಿ ಈಗ ಕುದಿರುವ ಆತಂಕವನ್ನು ನಾನು ಹತ್ತಿರದಿಂದ ...ಮನಿಸಿದ್ದೇನೆ. ಯಾವುದೇ ಯೋಧರ ಕುಟುಂಬವೂ ಯುದ್ಧ ...ಲಿ ಎಂದು ಹೇಳುವುದಿಲ್ಲ. ನಿಜವಾಗಿ ಎಲ್ಲಾ ಯೋಧರ ...ುಟುಂಬವೂ ಹಾರೈಸುವುದು ಯುದ್ಧ ಆಗಬಾರದೆಂದು. ಕಾರಣ ...ರವಾಗಿ ರಣರಂಗಕ್ಕೆ ನುಗ್ಗಿ ವೈರಿಗಳ ಗುಂಡಿಗೆ ಎದೆ ಒಡ್ಡುವವರು ...ಹಂತದ ಸೈನಿಕರೇ ಹೊರತು ಉನ್ನತ ಹುದ್ದೆಯ ಮಿಲಿಟರಿ ...ಧಿಕಾರಿಗಳಲ್ಲ. ಕೆಳಗಿನ ಸೈನಿಕ ಹುದ್ದೆಯಲ್ಲಿ ಇರುವವರೆಲ್ಲಾ ...ಂದುಳಿದ ವರ್ಗದ ಬಡವರೇ. ಯುದ್ಧವಾದರೆ ಸಾಯುವುದೂ ... ಸೈನಿಕರೇ. ಮೇಲ್ಜಾತಿಯವರು ಇರುವುದು ಅಧಿಕಾರಿ ...ದ್ದೆಯಲ್ಲಿ. ಅವರು ನೇರವಾಗಿ ಯುದ್ಧ ಭೂಮಿಯ ...ುಂಚೂಣಿಗೆ ಹೋಗುವುದು ಕಡಿಮೆ. ಜೈನರು ಹಾಗೂ ...ನಿಯಾಗಳು ಮಿಲಿಟರಿಯಲ್ಲಿ ಒಬ್ಬರೂ ಸಿಗಲಿಕ್ಕಿಲ್ಲ. ...ಾಹ್ಮಣರೂ ಕೆಳಗಿನ ಸೈನಿಕ ಹುದ್ದೆಯಲ್ಲಿ ಇಲ್ಲವೇ ಇಲ್ಲ. ...ವರು ಕೇವಲ ಮೇಲಿನ ಅಧಿಕಾರಿ ಹುದ್ದೆಯಲ್ಲಿ ಮಾತ್ರ ...ರುವುದು. ಅಂದರೆ ಭಾರತದ ಗಡಿ ಕಾಯುವ ಹಾಗೂ ...ಶದ ಸಾರ್ವಭೌಮತೆ ಕಾಪಾಡುವ ಹೊಣೆ ಇರುವುದು ...ವಲ ಕೆಳಜಾತಿ ಯೋಧರ ಕೈಯಲ್ಲಿಯೇ! ಆದರೆ ಇಂದು ...ನೆಯಲ್ಲಿ ಕೂತು ರಣೋತ್ಸಾಹ ತೋರಿಸುತ್ತಿರುವವರು ಜೈನರು, ...ನಿಯಾಗಳು, ಬ್ರಾಹ್ಮಣರು ಹಾಗೂ ಇತರ ಮೇಲ್ಜಾತಿಯವರು.

ಒಂದುವೇಳೆ ಈಗ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ...ಗ ನೆಲೆಗಳ ಮೇಲೆ ಭಾರತದ ಸೇನೆ ದಾಳಿ ಮಾಡಿದರೂ ...ಕಿಸ್ತಾನ ಸುಮ್ಮನಿರುವುದಿಲ್ಲ. ಅದು ಪ್ರತಿ ದಾಳಿ ಮಾಡುತ್ತದೆ. ...ಗ ಮೊನ್ನೆ ತೀರಿಕೊಂಡ 17 ಹುತಾತ್ಮರ ಸೇಡು ತೀರಿಸಲು ...ೋಗಿ ನಾವು ಸಾವಿರಾರು ಯೋಧರನ್ನು ಮತ್ತೆ ಹುತಾತ್ಮರನ್ನಾಗಿ ...ಾಡಬೇಕಾಗುತ್ತದೆ. ಮುಂಬೈಯಲ್ಲಿ ಶಿವಸೇನೆಯವರು ಭಾರತ ...ಡು ತೀರಿಸಬೇಕೆಂದು ತಮ್ಮ ಸಾಮ್ನಾ ಪತ್ರಿಕೆಯಲ್ಲಿ ಚೀರುತ್ತಿದ್ದಾರೆ. ...ದರೆ ಇದೇ ಶಿವಸೇನೆಯವರು ಬಿಹಾರಿಗಳ ವಿರುದ್ಧ ...ವಮಾನಕಾರಿ ಹೇಳಿಕೆ ಕೊಟ್ಟ ಮೇಲೆ ಒಮ್ಮೆ ನೀವೇ ...ಹಾರಕ್ಕೆ ಹೋಗಿ ಬನ್ನಿ ಎಂದು ಹೇಳಿದಾಗ ಶಿವಸೇನೆಯವರು ...ಾಷ್ಟ್ರದಿಂದ ಹೊರಗೆ ಕಾಲಿಡುವಷ್ಟು ಧೈರ್ಯ ತೋರಲಿಲ್ಲ.

ನಮ್ಮ ಬೆಳಗಾವಿಯ ಗಡಿ ಸಮಸ್ಯೆ ಕೆದಕುತ್ತಾ ಇರುವ ...ಸೇನೆಗೆ ಗಲಾಟೆಯ ಸಮಯದಲ್ಲಿ ಬೆಳಗಾವಿಗೆ ಬರುವ ...ರ್ಯವಿಲ್ಲ. ಇಂತಹ ರಣಹೇಡಿಗಳು ಭಾರತವು ಪಾಕ್ ...ಮೇಲೆ ಯುದ್ಧ ಸಾರಬೇಕೆಂದು ಸಾಮ್ನಾದಲ್ಲಿ ಸಂಪಾದಕೀಯ ...ಬರೆಯುತ್ತಾರೆ. ಒಟ್ಟಾರೆ ಭಯೋತ್ಪಾದಕರ ರಕ್ತ ಹರಿಸಬೇಕೆಂದು ...ೂಗುತ್ತಿರುವವರಲ್ಲಿ ಯಾರೂ ತಾವೇ ಸ್ವತಃ ರಣರಂಗಕ್ಕೆ ಹೋಗಿ ...ರತ ಮಾತೆಗಾಗಿ ತಮ್ಮ ರಕ್ತ ಹರಿಸಲು ತಯಾರಿಲ್ಲ.

ಹಿಂದಿನ ಪ್ರಧಾನಿ ಡಾ.ಮನ್ಮೋಹನ್ ಸಿಂಗ್ ಇಂತಹದ್ದೇ ...ಂದು ಸನ್ನಿವೇಶದಲ್ಲಿ ಪಾಕ್ ಮೇಲೆ ಸೇಡು ತೀರಿಸದೇ ...ದ್ದಕ್ಕೆ ಅವರನ್ನು ನರೇಂದ್ರ ಮೋದಿ ವಿಪರೀತ ಗೇಲಿಮಾಡಿದ್ದ ...ಯೋ ಲೋಕಸಭಾ ಚುನಾವಣೆಗೆ ಮುಂಚೆ ಮೋದಿಯ ...ಬೆಂಬಲಿಗರು ಸಾಮಾಜಿಕ ಜಾಲತಾಣದಲ್ಲಿ ಬಹಳ ಪ್ರಚಾರ ...ಮಾಡಿದ್ದರು. ಮನಮೋಹನ ಸಿಂಗರ ಜಾಗದಲ್ಲಿ ಮೋದಿ ...ದ್ದರೆ ಪಾಕಿಸ್ತಾನವನ್ನು ತಕ್ಷಣ ಪುಡಿಗಟ್ಟುತ್ತಿದ್ದರು ಎಂದು ...ೋದಿ ಚೇಲಾಗಳು ಆಗ ಭಾರಿ ಪ್ರಚಾರ ಮಾಡಿದ್ದರು. ...ಲೋಕಸಭಾ ಚುನಾವಣೆಗೆ ಮುಂಚೆ ಟಿವಿ ಕ್ಯಾಮರಾದ ಮುಂದೆ ...ಯುದ್ಧೋನ್ಮಾದ ಹಾಗೂ ವೀರಾವೇಶ ತೋರಿಸಿದ ಅದೇ ...ೋದಿ ಇಂದು ಬೋನಿನಲ್ಲಿ ಬಿದ್ದ ಇಲಿಯಂತೆ ...ಒದ್ದಾಡುತ್ತಿದ್ದಾರೆ.

ನಿಜವಾಗಿ ಕಾಶ್ಮೀರ ಸಮಸ್ಯೆಯ ಉಲ್ಬಣಕ್ಕೆ ಹಾಗೂ ...ಯೋತ್ಪಾದಕರ ದುಷ್ಕೃತ್ಯದಿಂದ ನಮ್ಮ ಯೋಧರು ...ಲಿಯಾಗುತ್ತಿರುವುದಕ್ಕೆ ಮೋದಿ ಸರಕಾರದ ಕಾಶ್ಮೀರ ...ನೀತಿಯಲ್ಲಿನ ಲೋಪದೋಷಗಳೇ ನೇರ ಕಾರಣ. ಜಮ್ಮು ...ಕಾಶ್ಮೀರದಲ್ಲಿ ಬಿಜೆಪಿ-ಪಿಡಿಪಿ ಮೈತ್ರಿ ಸರಕಾರ ಅಧಿಕಾರಕ್ಕೆ ...ಬಂದಮೇಲೆ ಅಲ್ಲಿಯ ಪರಿಸ್ಥಿತಿ ಸಂಪೂರ್ಣ ಹದಗೆಡಲು ...ಆರಂಭವಾಗಿದೆ. ಈ ಮೈತ್ರಿ ಸರ್ಕಾರದ ದುರಾಡಳಿತ ಎಂಬುದರಲ್ಲಿ ...ಅನುಮಾನವಿಲ್ಲ.

– ವೀರಪ್ಪ ಡಿ.ಎಸ್, ಮಡಿಕೇರಿ

ಆತ್ಮವಂಚನೆಯ ಸ್ವಚ್ಛ ಭಾರತ!



ಹದಿನೈದು ವರ್ಷಗಳಿಂದಲೂ ನೆರೆಹೊರೆಯವರಾಗಿರುವ ಒಬ್ಬರು ಅಮ್ಮನೊಂದಿಗೆ ಕೆಲಹೊತ್ತು ಹರಟುವ ಸಲುವಾಗಿ ಮನೆಗೆ ಬಂದಿದ್ದರು. ಎಂದಿನ ಅಭ್ಯಾಸದಂತೆ ಮನೆಗೆ ಬಂದ ಅತಿಥಿಯೊಂದಿಗೆ ಒಂದಷ್ಟು ಮಾತನಾಡಿದ ಅಮ್ಮ, 'ಕಾಫಿ ಮಾಡ್ತೀನಿ ತಡೀರಿ' ಅಂತ ಅಡುಗೆ ಕೋಣೆಯತ್ತ ಹೊರಡಲು ಅನುವಾದಾಗ ಅವರನ್ನು ತಡೆದ ನೆರೆಹೊರೆಯ ಆಂಟಿ, 'ನಾನು ಬೇರೆಯವ್ರ ಮನೇಲಿ ಕಾಫಿ-ಟೀ ಏನೂ ಕುಡಿಯಲ್ಲ ಕಣ್ರೀ, ಬೇಜಾರ್ ಮಾಡ್ಕೊಬೇಡಿ' ಅಂತಂದರು. ಅವರ ಬಗ್ಗೆ ಅದಾಗಲೇ ತಿಳಿದುಕೊಂಡಿದ್ದ ನಮ್ಮಮ್ಮನೂ ವಿಷಯ ಲಂಬಿಸಲು ಹೋಗಲಿಲ್ಲ.

ನಾವು 'ಅಯ್ಯನವರ ಮನೆ' ಎಂದೇ ಗುರುತಿಸುವ ಆ ಆಂಟಿಯ ಮನೆಯವರು ಗೃಹಪ್ರವೇಶ, ಮದುವೆ ಇನ್ನಿತರೆ ಸಮಾರಂಭಗಳಲ್ಲೂ ಊಟ ಮಾಡದೇ ಹೋಗುತ್ತಿದ್ದರು. ಆದರೆ, ಪರಿಚಿತರು ಆಹ್ವಾನಿಸುವ ಎಲ್ಲಾ ಕಾರ್ಯಕ್ರಮಗಳಿಗೂ ತಪ್ಪದೇ ಹಾಜರಾಗುತ್ತಿದ್ದರು. ಈಗೀಗ ಆ ಮನೆಯ ಗಂಡು ಕುಲವೆಲ್ಲ ಎಲ್ಲೆಡೆಯೂ ತಿನ್ನುವ ಅಭ್ಯಾಸ ರೂಢಿಸಿಕೊಂಡಿರುವುದು ಹಾಗು ಹೆಂಗಸರು ಇನ್ನೂ ತಮ್ಮ ಆಚಾರ-ವಿಚಾರ ಪಾಲಿಸಿಕೊಂಡು ಹೋಗುತ್ತಿರುವುದು ನಮ್ಮ ಏರಿಯಾದ ಮಟ್ಟಿಗೆ ಎಲ್ಲರಿಗೂ ತಿಳಿದ ವಿಚಾರವೇ.




ಮನೆ ಹೊರಗೆ ತಿನ್ನುವಾಗ ಹುಟ್ಟಿನೊಂದಿಗೆ ಅಮರಿಕೊಂಡ ಸ್ವಜಾತಿ ಶ್ರೇಷ್ಠತೆಯ ವ್ಯಸನಕ್ಕೆ ಒಳಗಾದವರಂತೆ ತೋರುವ ಅಯ್ಯನವರ ಮನೆಯವರು, ಇಂದು ನನಗೆ ಬೇರೆಯದೇ ಕಾರಣಕ್ಕಾಗಿ ನಾವು ಅನುಸರಿಸಬೇಕಿದ್ದ ಮಾದರಿಯೊಂದನ್ನು ನಮ್ಮೆದುರು ತೆರೆದಿಟ್ಟದ್ದ ಅನುಕರಣೀಯ ವ್ಯಕ್ತಿಗಳಾಗಿ ತೋರುತ್ತಿದ್ದಾರೆ.

ಆಗೆಲ್ಲ ನಮ್ಮ ಮನೆಯ ಶೌಚಾಲಯ ತ್ಯಾಜ್ಯ ಶೇಖರಿಸಿಕೊಳ್ಳುತ್ತಿದ್ದ ಗುಂಡಿ ತುಂಬಿದರೆ, ನಾವು ಅದನ್ನು ತೆಗೆಯುವುದನ್ನೇ ವೃತ್ತಿಯಾಗಿಸಿಕೊಂಡವರನ್ನು ಸಂಪರ್ಕಿಸುತ್ತಿದ್ದೆವು. ನಮ್ಮದೇ ಮಲ-ಮೂತ್ರ ತುಂಬಿಕೊಂಡಿದ್ದರೂ ನಮ್ಮ ಪಾಲಿಗೆ ಕಣ್ಣೆತ್ತಿ ನೋಡಲೂ ಅಸಹ್ಯವಾಗುತ್ತಿದ್ದ ಶೌಚ ಗುಂಡಿಗೆ ಅವರನ್ನು ಇಳಿಸಿ, ಮದ್ಯ ಸೇವಿಸಿ ಈ ಕೆಲಸ ಮಾಡುವ ಅವರು ನಮ್ಮಂತೆ ಮನುಷ್ಯರೇ ಅಲ್ಲವೇನೋ ಎಂಬಷ್ಟು ನಿಕೃಷ್ಟವಾಗಿ ಅವರೊಂದಿಗೆ ವರ್ತಿಸುತ್ತಿದ್ದೆವು. ನಮ್ಮ ಏರಿಯಾದ ಬಹುತೇಕ ಮಂದಿ ತಮ್ಮ ಮನೆ ಶೌಚ ಗುಂಡಿ ತುಂಬಿದಾಗಲೆಲ್ಲ ಮಾಡುತ್ತಿದ್ದುದು ಇದನ್ನೇ. ಆದರೆ ಮೇಲೆ ಉದಾಹರಿಸಿದ ಅಯ್ಯನವರ ಮನೆಯ ಗಂಡಸರು ಮಾತ್ರ ತಮ್ಮ ಮನೆಯ ಶೌಚ ಗುಂಡಿ ತುಂಬಿದರೆ, ಅದರೊಳಗಿನ ತ್ಯಾಜ್ಯವನ್ನು ತಾವೇ ತೆಗೆದು ಹೊರಹಾಕುತ್ತಿದ್ದರು. ಅಂದು ಈ ವಿಚಾರದಲ್ಲಿ ನಮಗೆಲ್ಲ ಇರುವುದರಲ್ಲೇ ಉತ್ತಮ ಮಾದರಿಯೊಂದನ್ನು ಅವರು ಎತ್ತಿ ಹಿಡಿದು ತೋರುತ್ತಿದ್ದರೆ, ನಾವೆಲ್ಲ ಅವರ ಈ ದುಸ್ಸಾಹಸ ಕಂಡು ಗೇಲಿ ಮಾಡುತ್ತಿದ್ದೆವು. ದುಡ್ಡು ಉಳಿಸಲೆಂದೇ ಅವರು ಸಭ್ಯರಾದ ನಾವೆಲ್ಲ ಮಾಡಬಾರದ ಕೆಲಸವನ್ನು ಮಾಡುತ್ತಿದ್ದಾರೆಂದು ದೂಷಿಸುತ್ತಿದ್ದೆವು. ಶೌಚ ಗುಂಡಿ ಸ್ವಚ್ಛಗೊಳಿಸಲು ಯಂತ್ರ ಬಳಸುವ ವಿಚಾರ ನಮಗೆಲ್ಲ ಅಪರಿಚಿತವೇ ಆಗಿದ್ದ ಕಾಲದಲ್ಲಿ, ಕೊನೆಪಕ್ಷ ನಮ್ಮ ಮನೆ ಶೌಚ ಗುಂಡಿ ನಾವೇ ಶುಚಿಗೊಳಿಸಿಕೊಳ್ಳುವುದು ಮನುಷ್ಯರಾಗಿದ್ದುಕೊಂಡು ನಾವು ಮಾಡಬಹುದಾಗಿದ್ದ ಗೌರವಯುತ ಕೆಲಸಗಳಲ್ಲೊಂದು ಎಂದು ಅನಿಸಿಯೇ ಇರಲಿಲ್ಲ. ಅದೂಅಲ್ಲದೇ ಕೆಳ ಜಾತಿಯವರಷ್ಟೇ ಮಾಡುತ್ತಿದ್ದ ಈಗಲೂ ಅಲ್ಲಲ್ಲಿ ಮಾಡುವ ಈ ಕಸುಬನ್ನು ಬೆರಳೆಣಿಕೆಯಷ್ಟು ಶೂದ್ರರು ಕೂಡ ಮಾಡಲಾರಂಭಿಸಿದ್ದನ್ನು ಗಮನಿಸಿ, 'ಇವ್ರಿಗೆಲ್ಲ ಏನಾಗಿದೆ? ಕುಡಿಯೋಕೆ ದುಡ್ಡು ಸಿಗುತ್ತೆ ಅಂತ ನಮ್ಮವ್ರು ಕೂಡ ಈ ಕೆಲ್ಸ ಮಾಡೋಕೆ ಶುರುವಾದ್ರಲ್ಲ' ಅಂತ ಅಸಹನೆಯಿಂದಲೇ ಹುಬ್ಬೇರಿಸುತ್ತಿದ್ದೆವು. ಇಂದು ನಾವು ವಾಸಿಸುತ್ತಿರುವ ಊರಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಕ್ಕೋ ಅಥವಾ ಮನುಷ್ಯರಿಂದ ಮಲ ಹೊರಿಸುವ ಕೆಲಸ ಮಾಡಿಸುವುದು ಶಿಕ್ಷಾರ್ಹ ಅಪರಾಧವೆಂಬ ಅರಿವು ಮೂಡಿರುವ ಕಾರಣಕ್ಕೋ ಇಲ್ಲ ಈ ಕೆಲಸಕ್ಕೂ ಯಂತ್ರ ದೊರೆಯುತ್ತಿರುವುದರಿಂದಲೋ ಏನೋ ಹಣ ಉಳಿಸುವ ಕಾರಣಕ್ಕಾಗಿ ಮನುಷ್ಯರಿಂದ ಶೌಚ ಗುಂಡಿ ತ್ಯಾಜ್ಯ ವಿಲೇವಾರಿ ಮಾಡಿಸುವುದು ಗಣನೀಯವಾಗಿ ತಗ್ಗಿದೆ.

ಇಂದಿಗೂ ಜಾತಿ ಶ್ರೇಷ್ಠತೆಯ ಮನೋಭಾವದಿಂದಾಗಿ ನಮ್ಮಂತಹ ಶೂದ್ರರ ಮನೆಯಲ್ಲಿ ಊಟ ಮಾಡುವುದಿರಲಿ, ಕಾಫಿ ಕುಡಿಯಲೂ ನಿರಾಕರಿಸುವ ಮನೆಯವರೇ ತಮ್ಮ ಶೌಚ ಗುಂಡಿಯನ್ನು ತಾವೇ ಶುಚಿಗೊಳಿಸುವ ಮೂಲಕ ನಮಗೆಲ್ಲ ಮಾದರಿಯಾಗಿದ್ದರು ಎನ್ನುವ ಜ್ಞಾನೋದಯವಾಗಲು ಕಾರಣವಾದದ್ದು ಇತ್ತೀಚೆಗೆ ಇಂಗ್ಲಿಷ್ ನ್ಯೂಸ್ ಚಾನೆಲ್‌ವೊಂದರಲ್ಲಿ ಪ್ರಸಾರವಾದ ಮ್ಯಾಗ್ಸಸೆ ಪ್ರಶಸ್ತಿ ಪುರಸ್ಕೃತ ಬೆಜವಾಡ ವಿಲ್ಸನ್ ಅವರ ಸಂದರ್ಶನ.

'ಸ್ವಚ್ಛ ಭಾರತ' ಕಟ್ಟುವ ಹುಮ್ಮಸ್ಸಿನಲ್ಲಿ ನಾವು ಕಡೆಗಣಿಸಿರುವ ಕೆಲವು ಪ್ರಮುಖ ಅಂಶಗಳತ್ತ ಅವರು ಬೊಟ್ಟು ಮಾಡುತ್ತಿದ್ದರು. ಎಲ್ಲೆಡೆಯೂ ಶೌಚಾಲಯ ಕಟ್ಟುವುದು ಮತ್ತದನ್ನು ಬಳಸುವಂತೆ ಜನರ ಮನವೊಲಿಸುವುದೇ ಮಹೋನ್ನತ ಕೆಲಸವೆಂಬಂತೆ ಪ್ರಚಾರ ನಡೆಯುತ್ತಿರುವ ಹೊತ್ತಲ್ಲಿ ಆ ಶೌಚಾಲಯಗಳ ತ್ಯಾಜ್ಯ ವಿಲೇವಾರಿಗೆ ನಾವು ಕೈಗೊಳ್ಳಲಿರುವ ಕ್ರಮಗಳಾದರೂ ಯಾವುವು? ಹೆಚ್ಚೆಚ್ಚು ಶೌಚಾಲಯಗಳ ನಿರ್ಮಾಣವಾದಂತೆ ಮನುಷ್ಯರಿಂದ ಮಲ ಹೊರಿಸುವ ಪದ್ಧತಿಗೂ ಮತ್ತಷ್ಟು ಜೀವ ಬರುವುದಿಲ್ಲವೇ ಎಂಬ ಗಂಭೀರ ಪ್ರಶ್ನೆಯನ್ನು ಅವರು ಎತ್ತುತ್ತಿದ್ದಾರೆ. ಇದುವರೆಗೂ ನಾವು ಗಮನಿಸಿರುವ 'ಸ್ವಚ್ಛ ಭಾರತ'ದ ಜಾಹಿರಾತುಗಳು ಮುಟ್ಟದ ಮುಖ್ಯ ವಿಚಾರವೊಂದು ಇದೀಗ ಹೆಚ್ಚು ಪ್ರಸ್ತುತವಾಗುತ್ತಿದೆ. ಬೀದಿಯಲ್ಲಿ ಬಿದ್ದಿರುವ ತ್ಯಾಜ್ಯವನ್ನು ಸಂಗ್ರಹಿಸಿ ಕಸದಬುಟ್ಟಿಗಳನ್ನು ತುಂಬಿಸಿದರೆ ಸಾಕೇ? ಹಾಗೆ ಸಂಗ್ರಹವಾಗುವ ತ್ಯಾಜ್ಯದ ವಿಲೇವಾರಿ ಕುರಿತೂ ಸ್ವಚ್ಛ ಭಾರತದ ಜಾಹಿರಾತುಗಳು ಮಾತನಾಡಬೇಕಲ್ಲವೇ? ಇದೇ ಪ್ರಶ್ನೆಯನ್ನು ಶೌಚಾಲಯ



ನಿರ್ಮಿಸುವ ವಿಚಾರಕ್ಕೂ ಅನ್ವಯಿಸಬಹುದು. ಶೌಚಾಲಯ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಪುಟ್ಟ ಹಳ್ಳಿಗಳಿಂದಿಡಿದು ಮಹಾನಗರಗಳವರೆಗೆ ಎಲ್ಲೆಡೆಗೂ ಸಲ್ಲಬಹುದಾದ ಮಾದರಿಯೊಂದನ್ನು ಜನರೆದುರು ಇಡುವ ಕೆಲಸವನ್ನು ದೇಶಕ್ಕೆ ಸ್ವಚ್ಛತೆಯ ಪೋಷಾಕು ತೊಡಿಸಲು ಹೊರಟಿರುವವರು ಮಾಡುತ್ತಿದ್ದಾರೆಯೇ? ಮೈಗೆ ಕಸ ಸೋಕದಂತೆ ಪೊರಕೆ ಹಿಡಿದು ಕ್ಯಾಮೆರಾಗಳಿಗೆ ಪೋಸು ನೀಡುವ ಮಂದಿ, ಸ್ವಚ್ಛ ಭಾರತದ ಅಸಲಿ ರಾಯಭಾರಿಗಳಾದ ಪೌರ ಕಾರ್ಮಿಕರು, ಸಫಾಯಿ ಕರ್ಮಚಾರಿಗಳ ಜೀವನಮಟ್ಟ ಸುಧಾರಿಸುವ ಕಾಳಜಿ ಹೊಂದಿರುವರೇ?

ಸಮಸ್ಯೆಯ ಬೇರಿಗೆ ಕೈ ಹಾಕುವ ಉಸಾಬರಿಗೆ ಹೋಗದೆ, ಮೇಲಷ್ಟೇ ತೇಪೆ ಹಾಕುತ್ತ ಹೋಗುವುದು ದೂರಗಾಮಿ ಪರಿಣಾಮಗಳತ್ತ ಕಣ್ಣೆತ್ತಿಯೂ ನೋಡಲು ಬಯಸದ ಮನಸ್ಥಿತಿಯೊಂದರ ಹುಳುಕನ್ನು ಎತ್ತಿ ಹಿಡಿಯುವುದಿಲ್ಲವೇ? ಇಡೀ ಭಾರತವನ್ನು ಸ್ವಚ್ಛ ಮಾಡುವ ಉಮೇದಿನೊಂದಿಗೆ ಮುನ್ನುಗ್ಗುವ ಮುನ್ನ ನಮ್ಮ ಮನಸ್ಸುಗಳನ್ನೂ ಶುಚಿಗೊಳಿಸಿಕೊಳ್ಳುವ ಜರೂರತ್ತು ಇರುವಂತೆ ತೋರುವುದಿಲ್ಲವೇ? ಭಾರತದ ಬೀದಿಗಳಷ್ಟೇ ಸ್ವಚ್ಛವಾದರೆ ಸಾಕೇ? ಮನಸ್ಸುಗಳಲ್ಲಿ ತುಂಬಿರುವ ತ್ಯಾಜ್ಯದ ವಿಲೇವಾರಿಯೂ ಆಗಬೇಕಲ್ಲವೇ?

■ ಎಚ್.ಕೆ.ಶರತ್, ಹಾಸನ

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 12-10-2016 RNI No.


ಬಿಳಿಕುದುರೆ ಏರಿದ ವಿಜಯ್



ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಂಚಾರಿ ವಿಜಯ್ ಕುದುರೆ ವೇಗದಲ್ಲಿ ಸಿನಿಮಾ ಒಪ್ಪಿಕೊಳ್ಳುತ್ತಿದ್ದಾರೆ. 'ರಿಕ್ತ' ಸಿನಿಮಾದ ಶೂಟಿಂಗ್ ಮುಗಿಸಿರುವ ಅವರು, ಈಗ 'ಬಿಳಿ ಕುದುರೆ' ಚಿತ್ರಕ್ಕೆ ಸಹಿ ಮಾಡಿದ್ದಾರೆ. ಆಗಲೇ ಚಿತ್ರದ ಶೂಟಿಂಗ್ ಕೂಡ ನಡೆಯುತ್ತಿದೆ. ನಂದಕುಮಾರ್ ನಿರ್ದೇಶನದಲ್ಲಿ ಮೂಡಿಬರಲಿರುವ ಈ ಚಿತ್ರದಲ್ಲಿ ವಿಜಯ್ ಮಧ್ಯಮಾ ವರ್ಗದ ಹುಡುಗನಾಗಿ ಕಾಣಿಸಿಕೊಂಡಿದ್ದಾರೆ. ಹದಿನೈದು ವರ್ಷಗಳ ಹಿಂದೆ ಬರೆದ ಕತೆ ಇದಾಗಿದ್ದರೂ, ಈ ಹೊತ್ತಿಗೂ ಸಲ್ಲುವ ಸ್ಟೋರಿ ಇದೆಯಂತೆ. ಈಗಿನ ಕಾಲಮಾನಕ್ಕೆ ತಕ್ಕಂತೆ ಒಂದಷ್ಟು ಕತೆಯನ್ನು ಬದಲಾಯಿಸಿಕೊಂಡು ಸಿನಿಮಾ ಮಾಡುತ್ತಿದ್ದಾರಂತೆ ನಿರ್ದೇಶಕರು. ಸಾಮಾನ್ಯವಾಗಿ ಮನಸ್ಸನ್ನು ಕುದುರೆಗೆ ಹೋಲಿಸುತ್ತಾರೆ. ಅದನ್ನೇ ಸಿಂಬಲ್ ಆಗಿಟ್ಟುಕೊಂಡು ಈ ಚಿತ್ರವು ಮೂಡಿಬರುತ್ತಿದೆ. ಬಾಂಬೆ ಮೂಲದ ಮಾಡಲ್ ಹನಿಬಲ್ ಸಿನಿಮಾದ ನಾಯಕಿ. ಚಿತ್ರದಲ್ಲಿ ಪ್ರೇಮಕ್ಕೆ ಪ್ರಾಮುಖ್ಯತೆ ನೀಡಲಾಗಿದ್ದರೂ ಮೂರು ಸಾಹಸ ಸನ್ನಿವೇಶಗಳಿವೆ. ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನದಲ್ಲಿ ದೃಶ್ಯಗಳು ಮೂಡಿಬರಲಿವೆ. ■

ತಿಕ್ಲೂ ಆದ ಹುಚ್ಚ ವೆಂಕಟ್

ತನ್ನ ತಿಕ್ಲತನದಿಂದಲೇ ಫೇಮಸ್ ಆಗಿರುವ ಹುಚ್ಚ ವೆಂಕಟ್, ಈಗ ಅದನ್ನೇ ತನ್ನ ಹೊಸ ಸಿನಿಮಾದ ಶೀರ್ಷಿಕೆಯನ್ನಾಗಿ ನೋಂದಾಯಿಸಿದ್ದಾರೆ. ಅವರ ಹೊಸ ಸಿನಿಮಾದ ಹೆಸರು 'ತಿಕ್ಲ ಹುಚ್ಚ ವೆಂಕಟ್'. ಅದು ತನ್ನ ಮೂರನೇ ಸಿನಿಮಾ ಎಂದು ಹೇಳುವ ಮೂಲಕ ಭಯ ಮೂಡಿಸಿದ್ದಾರೆ.



ಎರಡನೇ ಸಿನಿಮಾ ದುಡ್ಡಿಲ್ಲದೇ ಅರ್ಧಕ್ಕೆ ನಿಂತಿದ್ದರೂ, ಮೂರನೇ ಚಿತ್ರದ ಬಗ್ಗೆ ವೆಂಕಟ್ ಮಾತಾಡುತ್ತಿದ್ದಾರೆ. ತಮ್ಮ ಹುಟ್ಟುಹಬ್ಬದ ನೆಪದಲ್ಲಿ ಈ ಚಿತ್ರದ ಹಲವು ವಿಷಯಗಳನ್ನು ಪತ್ರಕರ್ತರ ಜತೆ ಹಂಚಿಕೊಂಡಿದ್ದಾರೆ. ಈ ಸಿನಿಮಾದ ಕತೆ ಕೂಡ ವೆಂಕಟ್ ಅವರ ಬದುಕನ್ನೇ ಆಧರಿಸಿದೆಯಂತೆ. ವೆಂಕಟ್‌ಗೆ ಪತ್ನಿ ಕೈಕೊಟ್ಟ ನಂತರ, ಅವರು ಮತ್ತೊಂದು ಹುಡುಗಿಯ ಹಿಂದೆ ಬೀಳುತ್ತಾರಂತೆ. ಆಗ ಕಾವೇರಿ ಎನ್ನುವ ಹುಡುಗಿ ಈತನ ಲೈಫ್‌ಗೆ ಪ್ರವೇಶ ಮಾಡುತ್ತಾರೆ. ಆ ಪ್ರೇಮ ಪ್ರಕರಣವನ್ನೇ ತಿಕ್ಲ ಹುಚ್ಚ ವೆಂಕಟ್ ಚಿತ್ರದಲ್ಲಿ ತೋರಿಸಲಿದ್ದಾರಂತೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಶೂಟಿಂಗ್ ಮಾಡುವ ಪ್ಲಾನ್ ಕೂಡ ಹಾಕಿಕೊಂಡಿದ್ದಾರೆ. ತಮಿಳುನಾಡನ್ನು ಚಿತ್ರೀಕರಣಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣವೇನು ಎಂದು ಕೇಳಿದರೆ, "ಆ ಹುಡುಗಿ ಅಲ್ಲಿಯವಳು" ಎನ್ನುವ ಮೂಲಕ ಮತ್ತೊಂದು ಬಾಂಬ್ ಸಿಡಿಸಿದ್ದಾರೆ. ಅಲ್ಲದೇ ಚಿತ್ರದ ನಾಯಕಿಗೆ ಕಾವೇರಿ ಎಂದು ಹೆಸರಿಟ್ಟು ಹೊಸ ತಿರುವು ನೀಡಿದ್ದಾರೆ. ಮಗನ ತಿಕ್ಲತನಕ್ಕೆ ವೆಂಕಟ್ ತಂದೆ ಬೇಸತ್ತುಹೋಗಿದ್ದಾರೆ. ಸುಖಾಸುಮ್ಮನೆ ದುಡ್ಡು ಖರ್ಚು ಮಾಡುತ್ತಿರುವುದಕ್ಕೆ ಕಣ್ಣೀರು ಹಾಕುತ್ತಿದ್ದಾರೆ. ■

ಕನ್ನಡಕ್ಕೆ ಕಾಮನಾ

'ಜಾನ್ ಜಾನಿ ಜನಾರ್ದನ್' ಸಿನಿಮಾದಲ್ಲಿ ನಾಯಕಿಯಾಗಿ ಕಾಮನಾ ರಣಾವತ್ ಸಿಂಗ್ ನಟಿಸಿದ್ದಾರೆ. ಗುರು ದೇಶಪಾಂಡೆ ನಿರ್ದೇಶನದ ಸಿನಿಮಾದ ಮೂಲಕ ಕಾಮನಾ ಕನ್ನಡಕ್ಕೆ ಬಂದಿದ್ದಾರೆ. ಮುಂಬಯಿಯ ಈ ಬೆಡಗಿ ಈಗಾಗಲೇ ತೆಲುಗು ಸಿನಿಮಾ ರಂಗಕ್ಕೆ ಪರಿಚಯ. ಈ ಸಿನಿಮಾದಲ್ಲಿ ಮೂವರು ನಾಯಕರು. ಲೂಸ್‌ಮಾದ ಖ್ಯಾತಿಯ ಯೋಗಿ, ಅಜಯ್ ರಾವ್ ಮತ್ತು ಮದರಂಗಿ ಕೃಷ್ಣ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಈ ಮೂವರಿಗೂ ಒಬ್ಬರೇ ನಾಯಕಿ. ಅವರೇ ಕಾಮನಾ ಅನ್ನುವುದು ವಿಶೇಷ. ಇದೇ ಮೊದಲ ಬಾರಿಗೆ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿರುವ ಕಾಮನಾಗೆ, ಪಾತ್ರದ ಬಗ್ಗೆ ಹೆಮ್ಮೆ ಇದೆ. ಇಂಥದ್ದೊಂದು ಪಾತ್ರ ತಮಗೆ ಸಿಕ್ಕಿದ್ದಕ್ಕೆ ಸಂತಸ ವ್ಯಕ್ತಪಡಿಸುತ್ತಾರೆ. ಮೂಲತಃ ಪಂಜಾಬಿಯರಾದ ಇವರು, ಮುಂಬೈಯಲ್ಲಿ ವಾಸವಾಗಿದ್ದಾರೆ. ಸಾಕಷ್ಟು ಜಾಹೀರಾತು ಸಿನಿಮಾಗಳಲ್ಲಿ ನಟಿಸಿದ್ದಾರೆ. ಶರಣ್ ನಟನೆಯ 'ವಿಕ್ಟರಿ' ತೆಲುಗಿನಲ್ಲಿ ರೀಮೇಕ್ ಆಗಿದೆ. ಆ ಚಿತ್ರಕ್ಕೆ ಕಾಮನಾ ನಾಯಕಿ. ಆ ನಟನೆಯೇ ಕನ್ನಡದತ್ತ ಕರೆದುಕೊಂಡು ಬಂದಿದೆ. ಈ ಸಿನಿಮಾದಲ್ಲಿ ಇನ್ನೂ ಇಬ್ಬರು ನಾಯಕಿಯರು ನಟಿಸಿದ್ದಾರೆ. ಮಾಲಾಶ್ರೀ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಐಂದ್ರಿತಾ ರೇ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ಅರ್ಜುನ್ ಜನ್ಯ ಸಂಗೀತದಲ್ಲಿ ಹಾಡುಗಳು ಮೂಡಿಬಂದಿದ್ದು, ಮುಂದಿನ ತಿಂಗಳು ಆಡಿಯೋ ಸಿಡಿ ಬಿಡುಗಡೆ ಮಾಡುವ ಪ್ಲಾನ್ ಕೂಡ ಮಾಡಿದ್ದಾರೆ.



ಅಪೂರ್ವಗೆ ಥಿಯೇಟರ್ ಸ...




ಗಿರೀಶ್ ಕಾಸರವಳ್ಳಿ ಪುತ್ರ ... ಕಾಸರವಳ್ಳಿಯನ್ನು ಥಿಯೇಟರ್ ... ಬಹುವಾಗಿ ಕಾಡುತ್ತಿದೆ. ಸಿನಿಮಾ ... ಮೂರ್‍ನಾಲ್ಕು ತಿಂಗಳು ಕಳೆದರೂ, ... ಚಿತ್ರಮಂದಿರ ಸಿಗದೇ ಇರುವ ಕಾರಣ ... ಮಾಡಲು ಹರಸಾಹಸ ಪಡುತ್ತಿದ್ದಾರೆ. ... ರಿಲೀಸ್ ವಿಷಯದಲ್ಲಿ ತಮ್ಮ ... ಹಾದಿಯನ್ನು ಹಿಡಿಯಲು ಪ್ಲಾನ್ ಮಾಡ...

ಈಗಾಗಲೇ ಅಪೂರ್ವ ನಿದೆ... 'ನಿರುತ್ತರ' ಸಿನಿಮಾದ ಹಾಡುಗಳು ರಿಲೀಸ್ ಆಗಿವೆ. ಹಾಡುಗಳಿಗೆ ... ಪ್ರತಿಕ್ರಿಯೆ ಕೂಡ ಸಿಕ್ಕಿದೆ. ಆದರೂ, ಥಿಯೇಟರ್ ಸಿಗದೇ ಇರುವ ಕಾ... ಅವರು ಬೇಸರಿಸಿಕೊಂಡಿದ್ದಾರೆ. ಸಿನಿಮಾದಲ್ಲಿ ಅನೇಕ ವಿಶೇಷತೆಗಳ... ಇದೇ ಮೊದಲ ಬಾರಿಗೆ ನೀಲಾದ್ರಿ ಕುಮಾರ್ ಕನ್ನಡದ ಚಿತ್ರಕ್ಕೆ ... ನೀಡಿದ್ದಾರೆ. ಸಿನಿಮಾದ ಕತೆಯೂ ವಿಶೇಷವಾಗಿದೆ. ನಾಲ್ಕು ಪಾತ್ರಗಳ... ನಡೆಯುವ ಘಟನೆಗಳೇ ಚಿತ್ರದ ಜೀವಾಳ. ಸಂಕೀರ್ಣ ಸಂಬಂಧದ ಮತ್ತು ನಾಟಕೀಯ ತಿರುವುಗಳೇ ಸಿನಿಮಾದ ಭರವಸೆ ಕೂಡ. ಹತ್ವಾರ್ ಕತೆ ಬರೆದದ್ದು, ಆಸ್ಕರ್ ಪುರಸ್ಕೃತ ರೆಸುಲ್ ಪೂಕುಟ್ಟಿ ಚಿತ... ಸಂಯೋಜನೆ ಮಾಡಿದ್ದಾರೆ. ಕಿರಣ್ ಶ್ರೀನಿವಾಸ್, ಭಾವನಾ, ಐಂದ್ರಿ... ರಾಹುಲ್ ಬೋಸ್ ಮೊದಲಾದ ತಾರಾಬಳಗ ಇರುವ ಸಿನಿಮಾ ...

ನಾಯಕಿಯರ ಯೋಗಾಯೋ...

ಯೋಗರಾಜ್ ಭಟ್ ನಿರ್ದೇಶನದ ಚಿತ್ರಗಳೆಂದರೆ ಅಲ್ಲಿ ಮು... ನಾಯಕಿಯರಿಗೆ ಕೆಲಸ ಇದ್ದೇ ಇರುತ್ತದೆ. 'ಮುಂಗಾರು ಮಳೆ' ... ಈ ನಿಯಮವನ್ನು ಅವರು ಪಾಲಿಸುತ್ತಲೇ ಬಂದಿದ್ದಾರೆ. ಈ ಬಾ... ಭಟ್ ಅದನ್ನು ಮುಂದುವರೆಸಿದ್ದಾರೆ. ಅಲ್ಲದೇ ನಾಯಕಿಯರ ಸಂಖ್ಯೆಯನ್ನು ಮೂರರಿಂದ ನಾಲ್ಕಕ್ಕೆ ಏರಿಸಿದ್ದಾರೆ. ಗಣೇಶ್ ಮತ್ತು ಯೋಗರಾಜ್ ಭಟ್ ಕಾಂಬಿನೇಷನ್‌ನ ಹೊಸ ಸಿನಿಮಾದಲ್ಲಿ ಬರೋಬ್ಬರಿ ನಾಲ್ವರು ನಾಯಕಿಯರು ಇರಲಿದ್ದಾರಂತೆ.



'ಗಾಳಿಪಟ' ಚಿತ್ರದ ನಂತರ ಈ ಜೋಡಿ ಮತ್ತೆ ಒಂದಾಗಿರಲಿಲ್ಲ. ಇಬ್ಬರ ನಡುವಿನ ಮನಸ್ತಾಪವೇ ಸಿನಿಮಾ ಮಾಡದೇ ಇರುವುದಕ್ಕೆ ಕಾರಣ ಎಂದು ಹೇಳಲಾಗಿತ್ತು. ಆದರೆ ಈಗ ಮನಸ್ತಾಪವನ್ನು ಇಬ್ಬರೂ ಬದಿಗಿಟ್ಟಿದ್ದಾರೆ.

ಒಟ್ಟಾಗಿಯೇ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಹಲವು ಕಾರಣಗಳ... ಈ ಸಿನಿಮಾ ವಿಭಿನ್ನವಾಗಿ ಇರಲಿದೆಯಂತೆ. ಪ್ರತಿ ಪಾತ್ರಕ್ಕೂ ತನ್ನದ... ತೂಕ ಇರುವುದರಿಂದ ಅನುಭವಿ ನಟಿಯರನ್ನೇ ಆಯ್ಕೆ ಮಾಡಿಕೊಳ್ಳು... ಹೇಳಿದ್ದಾರೆ ನಿರ್ದೇಶಕರು. ಅಕ್ಟೋಬರ್‌ನಿಂದ ಶೂಟಿಂಗ್ ಶುರುವಾ... ನಾಯಕಿಯರ ಆಯ್ಕೆಯ ಪ್ರಕ್ರಿಯೆ ಸದ್ಯ ಜಾರಿಯಲ್ಲಿದೆ. ಎಂದಿನಂತ... ಚಿತ್ರಕ್ಕೆ ವಿ.ಹರಿಕೃಷ್ಣ ಸಂಗೀತ ನೀಡಲಿದ್ದಾರೆ. ಜಯಂತ್ ಕಾಯ್ಕಿಣಿ ಈ... ಹಾಡು ಬರೆದುಕೊಟ್ಟಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com